# ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 5 ಸಂಚಿಕೆ 5

ಜನವರಿ 30, 2011


ಕನ್ನಡ ವಾರಪತ್ರಿಕೆ

ರೂ. 5/-

ಪುಟ 16




Blog :janashakthi.wordpress.com
e-mail : js_weekly@yahoo.com






## ಬೃಹತ್ ಕಂಪನಿಗಳು ಮತ್ತು ಭ್ರಷ್ಟಾಚಾರ, ರಾಜಕಾರಣದ ನಂಟು



## ಅನೈತಿಕ ಸರ್ಕಾರ : ಪ್ರಜಾಪ್ರಭುತ್ವಕ್ಕೆ ಸಂಚಕಾರ




## ಲಾಲ್‌ಚೌಕಿನತ್ತ ಬಿಜೆಪಿ ಕೋಮು ದ್ವೇಷ ಉದ್ರೇಕಿಸುವ ಪಯಣ

## ಸುಪ್ರೀಂಕೋರ್ಟ್ ಸಮಿತಿ ವರದಿ ಲೂಟಿಕೋರ ರೆಡ್ಡಿ ಬ್ರದರ್ಸ್ ಗಡಿ ನುಂಗುವ ಕುಕೃತ್ಯಗಳು

## ಎಂಡೋಸಲ್ಫಾನ್ ಎಂಬ ಮಾರಕ ಕ್ರಿಮಿನಾಶಕ



# ಪಂಚಾಯ್ತಿ ಚುನಾವಣೆ : ರಾಜ್ಯದ ವಿವಿಧೆಡೆ ಸಿಪಿಐ(ಎಂ) ಮತಗಳಿಗೆ ವಿವರ

| 1 | ರಾಮದುರ್ಗ | ಜಿಲ್ಲಾ ಪಂಚಾಯಿತಿ | ಸಿಪಿಐ(ಎಂ) | ಬಿಜೆಪಿ | ಕಾಂಗ್ರೇಸ್ | ಜೆಡಿ(ಎಸ್) |
|---|---|---|---|---|---|---|
| | ಸುರೇಬಾನ್ | | 2726 | 6313 (ಗೆದ್ದಿರುವುದು) | 4822 | 2226 |
| | | | 966 | 7993 (ಗೆದ್ದಿರುವುದು) | 6232 | 3047 |
| | | ತಾಲ್ಲೂಕು ಪಂಚಾಯಿತಿ | 658 | 1980 (ಗೆದ್ದಿರುವುದು) | 1918 | 496 |
| 2 | ಹಾಸನ | | 198 | 7610 | 1813 | 8344 (ಗೆದ್ದಿರುವುದು) |
| 3 | ಕೊಡಗು | ಜಿಲ್ಲಾ ಪಂಚಾಯಿತಿ | 526 | 4218 (ಗೆದ್ದಿರುವುದು) | 3527 | 300 |
| | | ತಾಲ್ಲೂಕು ಪಂಚಾಯಿತಿ | 444 | 2496(ಗೆದ್ದಿರುವುದು) | 2176 | 359 |
| | | ತಾಲ್ಲೂಕು ಪಂಚಾಯಿತಿ | 289 | 890 | 969(ಗೆದ್ದಿರುವುದು) | 463 |
| 4 | ಉತ್ತರ ಕನ್ನಡ | ಜಿಲ್ಲಾ ಪಂಚಾಯಿತಿ | 2434 | 2164 | 3165(ಗೆದ್ದಿರುವುದು) | 2748 |
| | | ತಾಲ್ಲೂಕು ಪಂಚಾಯಿತಿ | 414 | 388 | 296 | 821(ಗೆದ್ದಿರುವುದು) |
| | | | 575 | 968 | 1235(ಗೆದ್ದಿರುವುದು) | |
| | | | 311 | 911 | 1100(ಗೆದ್ದಿರುವುದು) | |
| 5 | ಬೆಂಗಳೂರು | ಜಿ.ಪಂ–ಹೆಬ್ಬಗೊಡಿ | 568 | 6600(ಗೆದ್ದಿರುವುದು) | 4748 | 800 |
| | | ತಾ.ಪಂ–ಬೊಮ್ಮಸಂದ್ರ | 525 | 1800(ಗೆದ್ದಿರುವುದು) | 1600 | |
| | | ತಾ.ಪಂ–ಹೆಬ್ಬಗೊಡಿ | 447 | 2800(ಗೆದ್ದಿರುವುದು) | 2000 | 700 |
| | | ತಾ.ಪಂ–ಕೊಡಿಗೆಹಳ್ಳಿ | 582 | 3241(ಗೆದ್ದಿರುವುದು) | 3140 | – |
| 6 | ಉಡುಪಿ | ಜಿ.ಪಂ– ಬಸ್ರೂರು | 1365 | 8221(ಗೆದ್ದಿರುವುದು) | 7089 | |
| | | ತಾ.ಪಂ–ಮರವಂತೆ | 1174 | 2726(ಗೆದ್ದಿರುವುದು) | 1759 | |
| | | ತಾ.ಪಂ–ಸೇನಾಪುರ | 598 | 1206(ಗೆದ್ದಿರುವುದು) | 1198 | |
| | | ತಾ.ಪಂ–ತಲ್ಲೂರು | 971 | 1878 | 1921(ಗೆದ್ದಿರುವುದು) | |
| | | ತಾ.ಪಂ–ಕರ್ಕುಂಜೆ | 1381(ಗೆದ್ದಿರುವುದು) | 1340 | 1334 | |
| | | ತಾ,ಪಂ–ಕಾರ್ವಾಡಿ | 441 | 2227 | 3139(ಗೆದ್ದಿರುವುದು) | |
| | | ತಾ.ಪಂ–ಕೋಣಿ | 358 | 2218(ಗೆದ್ದಿರುವುದು) | 1621 | |
| | | ತಾ.ಪಂ–ಚಾಂತಾರು | 249 | 2022 | 2944 (ಗೆದ್ದಿರುವುದು) | |
| 7 | ರಾಯಚೂರು | ತಾ.ಪಂ–ನಾಗಲಾಪುರ | 257 | 1077 | 1522(ಗೆದ್ದಿರುವುದು) | 420 |
| | | ತಾ.ಪಂ–ಹಟ್ಟಿ | 485 | 700 | 1040 | 1630(ಗೆದ್ದಿರುವುದು) 934(ಪಕ್ಷೇತರ) |
| | | ಜಿ.ಪಂ–ಗಲಗ | 1163 | 5162 | 2835 | 6538(ಗೆದ್ದಿರುವುದು) |
| | | ತಾ.ಪಂ–ಒಂದಲಿ | 529 | 1515(ಗೆದ್ದಿರುವುದು) | 575 | 1512 |
| 8 | ತುಮಕೂರು | ಜಿ.ಪಂ –ಊರುಕೆರೆ | 308 | 9119 | 5160 | 4863 |
| 9 | ಕೊಪ್ಪಳ | ಜಿ.ಪಂ –ಆನೆಗುಂದಿ | 344 | 7606 | 9049 | 1655 |
| | | ಜಿ.ಪಂ _ಹೇರೂರು | 798 | 9414 | 5927 | 4667 |
| | | ಜಿ.ಪಂ _ಕೊರಡಕೆರ | 410 | 7100 | 6053 | 860 |
| | | ತಾ.ಪಂ_ತಳಗೆರ | 145 | 1862 | 1291 | 615 |
| | | ತಾ.ಪಂ_ಆನೆಗುಂದಿ | 344 | | 2136 | 320 |
| | | " _ಮಲ್ಲಾಪುರ | 072 | 1276 | 1659 | 666 |
| | | " _ಚಿಕ್ಕಜಂತಕಲ್ | 042 | 1866 | 1228 | 262 1204(ಪಕ್ಷೇತರ) |
| | | " _ಜಂಗಮರಕಲ್ | 245 | 1784 | 1087 | 2066(ಪಕ್ಷೇತರ) |
| | | " _ಹೇರೂರು | 210 | 2606 | 1001 | 1677 |

## ಕೊಡಗು ಜಿಲ್ಲೆಯಲ್ಲಿ ಸಿಪಿಐ(ಎಂ) ಸ್ಪರ್ಧೆ ವಿವರ

**ವಾಲ್ನೂರು ತ್ಯಾಗತ್ತೂರು ಜಿಲ್ಲಾ ಪಂಚಾಯ್ತಿ**

ಬಲ್ಲಾರಂಡ ಮಣಿ ಉತ್ತಪ್ಪ (ಬಿಜೆಪಿ) 4218
ವಸಂತ್‌ಕುಮಾರ್ ಹೊಸಮನೆ (ಸಿಪಿಎಂ) 526
ಎಂ.ಕೆ.ಶಿವದಾಸ್ (ಜೆಡಿಎಸ್) 300
ಎ.ಕೆ.ಹಕೀಂ (ಕಾಂಗ್ರೆಸ್) 3527
ಹ್ಯಾರಿ ಲೋಬೋ (ಸ್ವತಂತ್ರ) 219

**ಸೋಮವಾರಪೇಟೆ ತಾಲ್ಲೂಕು ಪಂಚಾಯತಿ**
ವಾಲ್ನೂರು, ತ್ಯಾಗತ್ತೂರು
ಎಸ್.ಬಿ.ನಂದಕುಮಾರ್ (ಜೆಡಿಎಸ್) 359
ಜಿ.ಆರ್.ಭುವನೇಂದ್ರ (ಕಾಂಗ್ರೆಸ್) 2176
ವಿ.ಕೆ.ಲೋಕೇಶ್ (ಬಿಜೆಪಿ) 2496
ವಾರಿಜ ಭರತ್ (ಸಿಪಿಐ(ಎಂ) 444
ಪಿ.ಎ.ರುಸ್ತಾನ್ (ಎಸ್‌ಡಿ.ಪಿ.ಐ) 416

**ವಿರಾಜಪೇಟೆ ತಾಲ್ಲೂಕು ಪಂಚಾಯಿತಿ**
**ಕರಡಿಗೋಡು**
ಜೆ.ಎ.ನೂತನ್ (ಬಿಜೆಪಿ) 1154
ಕೆ.ಡಿ.ರಜನಿ (ಕಾಂಗ್ರೆಸ್) 1481
ಪ್ರತಿಮಾ ಚಂದ್ರಶೇಖರ್ (ಸಿಪಿಎಂ) ಬೆಂಬಲಿತ ಪಕ್ಷೇತರ) 1982

**ಸಿದ್ದಾಪುರ**
ಅಜಿತ್ ಕರುಂಬರಪ್ಪ (ಬಿಜೆಪಿ) 890
ಅಬ್ದುಲ್ ರೆಹಮಾನ್ ಸಿ.ಎ (ಜೆಡಿಎಸ್) 463
ಜಾನ್ಸನ್ (ಕಾಂಗ್ರೆಸ್) 969
ಹೆಚ್.ಟಿ.ರಮೇಶ್ (ಸಿಪಿಐ(ಎಂ) 289
ಎಸ್.ರಾಧಾಕೃಷ್ಣ (ಪಕ್ಷೇತರ) 278

## ಅಭಿನಂದನೆ

ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಾಗೇಪಲ್ಲಿ ಹಾಗೂ ಗುಡಿಬಂಡೆ ತಾಲ್ಲೂಕು ಪಂಚಾಯ್ತಿಗಳಲ್ಲಿ ಇದೇ ಪ್ರಥಮ ಬಾರಿಗೆ ಸಿಪಿಐ(ಎಂ) ಪಕ್ಷವು ಅಧಿಕಾರ ಗಳಿಸಲು ಅಗತ್ಯವಾದ ಬೆಂಬಲ ನೀಡಿರುವ ಎರಡೂ ತಾಲ್ಲೂಕುಗಳ ಜನತೆಯನ್ನು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿಯು ಅಭಿನಂದಿಸಿದೆ. ಅದೇ ರೀತಿಯಲ್ಲಿ ನಿರಂತರ ಜನಪರ ಹೋರಾಟಗಳ ಮೂಲಕ ಜನರ ವಿಶ್ವಾಸವನ್ನು ಗಳಿಸಿರುವ ಸಿಪಿಐ(ಎಂ) ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕು ಸಮಿತಿಯ ಸಂಗಾತಿಗಳನ್ನು ಸಿಪಿಐ(ಎಂ) ಚಿಕ್ಕಬಳ್ಳಾಪುರ ಜಿಲ್ಲಾ ಸಮಿತಿಯನ್ನು ಅಭಿನಂದಿಸಿದೆ. ಮತ ನೀಡಿದ ಜನತೆಗೂ ಅಭಿನಂದನೆ ಸಲ್ಲಿಸಿದೆ.

ರಾಜ್ಯದ ಇತರ ಕಡೆಗಳಲ್ಲಿ ಗಣನೀಯ ಮತಗಳಿಸಿರುವ ಮತ್ತು ವಿಜಯ ಗಳಿಸಿರುವ ಸಂಗಾತಿಗಳು ಮತ್ತು ಸಂಬಂಧಿಸಿದ ಸಮಿತಿಗಳನ್ನು ರಾಜ್ಯ ಕಾರ್ಯದರ್ಶಿ ಮಂಡಳಿ ಅಭಿನಂದಿಸಿದೆ.

## ಸಂಪಾದಕೀಯ

# ಅಧಿಕಾರದಿಂದ ತೊಲಗಿಸೋದೆ ಬಾಕಿ


ಬಿಜೆಪಿಯು ಅಧಿಕಾರ ಉಳಿಸಿಕೊಳ್ಳಲು ನಡೆಸುತ್ತಿರುವ ತಂತ್ರ ಕುತಂತ್ರಗಳ ಸುಳಿಯಲ್ಲಿ ಸಿಕ್ಕಿಹಾಕಿಕೊಂಡಿದೆ. ಯಡಿಯೂರಪ್ಪನವರ ಸರ್ಕಾರ ಎಸಗಿರುವ ಭಾರೀ ಭ್ರಷ್ಟಾಚಾರ, ಹಗರಣ, ಅಕ್ರಮಗಳನ್ನು ಮುಚ್ಚಿಹಾಕಿಕೊಳ್ಳಲು ಅದು ನಡೆಸದ ಪ್ರಯತ್ನಗಳಿಲ್ಲ. ಕೊಳಕು ಮುಚ್ಚಿಹಾಕಿಕೊಳ್ಳಲು ಅದು ನಡೆಸಿದ ಪ್ರತಿ ಪ್ರಯತ್ನವೂ ಅದು ತಲುಪಿರುವ ತಾತ್ವಿಕ, ನೈತಿಕ, ರಾಜಕೀಯ ದಿವಾಳಿತನದಿಂದ ಕೂಡಿದೆ.

ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಗೃಹಸಚಿವ ಆರ್.ಅಶೋಕ್‌ರವರು ಎಸಗಿದ ಭೂಹಗರಣಗಳ ಬಗ್ಗೆ ಜಸ್ಟೀಸ್ ಲಾಯರ್ಸ್ ಫೋರಂ ನೀಡಿದ ಅರ್ಜಿಯ ಹಿನ್ನೆಲೆಯಲ್ಲಿ ಕಡತಗಳನ್ನು ತರಿಸಿಕೊಂಡು ಪರಿಶೀಲಿಸುತ್ತಿರುವ ರಾಜ್ಯಪಾಲ ಹಂಸರಾಜ್ ಭಾರದ್ವಾಜ್ ಮೇಲೆ ಬಿಜೆಪಿ ಸರಕಾರ ಹತಾಶೆಯ ಧಾಳಿ ನಡೆಸುತ್ತಿದೆ. ದೂರು ದಾಖಲಿಸಲು ಅನುಮತಿ ನೀಡಕೂಡದೆಂದು ಸಚಿವ ಸಂಪುಟದ ತುರ್ತು ಸಭೆಯಲ್ಲಿ ನಿರ್ಣಯ ಕೈಗೊಂಡು ರಾಜ್ಯಪಾಲರಿಗೆ ಪತ್ರ ಬರೆದಿರುವುದು ಸಂಪುಟದ ಸಂವಿಧಾನಾತ್ಮಕ ಸ್ಥಾನದ ದುರ್ಬಳಕೆಯಾಗಿದೆ. ಅಲ್ಲದೇ ಮುಖ್ಯವಾಗಿ ಕಡತಗಳನ್ನು ಇನ್ನೂ ಪರಿಶೀಲನೆ ನಡೆಯುತ್ತಿರುವಾಗ, ಕ್ರಮವನ್ನೇ ತೆಗೆದುಕೊಳ್ಳದಿರುವಾಗ ಬಿಜೆಪಿಯ ಅರ್ಭಟ 'ಕಳ್ಳನ ಮನಸ್ಸು ಹುಳ್ಳಗೆ, ಕುಂಬಳಕಾಯಿ ಕಳ್ಳನೆಂದರೆ ಹೆಗಲು ಮುಟ್ಟಿ ನೋಡಿಕೊಳ್ಳುವ' ಪ್ರವೃತ್ತಿಯದ್ದಾಗಿದೆ. ಇಷ್ಟಕ್ಕೇ ನಿಲ್ಲದ ಬಿಜೆಪಿ ದೂರು ದಾಖಲಿಸಲು ಅನುಮತಿ ನೀಡಿದರೆ ರಾಜಭವನಕ್ಕೆ ಶಾಸಕರ ಮುತ್ತಿಗೆ, ರಾಷ್ಟ್ರಪತಿ ಮುಂದೆ ಪರೇಡ್, ಪ್ರತಿಭಟನೆ ಕರ್ನಾಟಕ ಬಂದ್‌ನ್ನೇ ನಡೆಸುವುದಾಗಿ ಹೇಳುತ್ತಿರುವುದು ಬ್ಲಾಕ್ ಮೇಲ್ ತಂತ್ರವಾಗಿದ್ದು ಸಂವಿಧಾನಾತ್ಮಕ ಸಂಸ್ಥೆ, ಪ್ರಜಾಪ್ರಭುತ್ವದ ಮೇಲಿನ ಧಾಳಿಯಾಗಿವೆ. ಅದರ ಈ ಫ್ಯಾಸಿಸ್ಟ್ ಮನೋಭಾವ ಖಂಡನೀಯ.

ಒಂದು ವೇಳೆ ದೂರುಗಳು ಸುಳ್ಳೇ ಆಗಿದ್ದಲ್ಲಿ ಮುಖ್ಯಮಂತ್ರಿ ಹಾಗೂ ಸರ್ಕಾರ ಭಯಪಡುವ ಅಗತ್ಯವೇನಿದೆ? ಯಾವುದೇ ಚರ್ಚೆಗೂ ಸಿದ್ದನೆಂದೇ ಹೊರಗೆಲ್ಲಾ ಬೊಗಳೆ ಹೊಡೆಯುವ ಮುಖ್ಯಮಂತ್ರಿ ಶಾಸನ ಸಭೆಗಳಲ್ಲಿ ವಿರೋಧ ಪಕ್ಷಗಳು ಪ್ರಶ್ನೆಯೆತ್ತಿ ಅದ್ಯತೆಯ ಚರ್ಚೆಗೆ ಕೇಳಿದಾಗ ಒಪ್ಪದೇ ಇಡೀ ಶಾಸನ ಸಭೆಗಳ ಕಲಾಪಗಳನ್ನು ಹಾಳುಗೆಡಹಿ ಮತ್ತೆ ಈಗ ಚರ್ಚೆಗೆ ಆಹ್ವಾನಿಸುತ್ತಿರುವುದು ವಿಚಿತ್ರ. ಸವಾಲು ಬಂದಾಗ ಮುಖಾಮುಖಿಯಾಗದ ಉತ್ತರಕುಮಾರನ ಪೌರುಷವೆಂದೇ ಹೇಳಬೇಕಾಗುತ್ತದೆ. ಭೂಹಗರಣದಂತಹ ಬ್ರಹ್ಮಾಂಡ ಭ್ರಷ್ಟಾಚಾರವನ್ನು ಮುಚ್ಚಿಹಾಕಿಕೊಳ್ಳಲು ಇಡೀ ಸಂಪುಟ ಹಾಗೂ ಬಿಜೆಪಿ ನಾಯಕತ್ವವೇ ಒಂದಾಗಿ ನಿಂತಿರುವುದು. ಅಪಾಯದ ಸೂಚನೆಯಾಗಿದೆ. ರಾಜ್ಯದ ದೇಶದ ಭವಿಷ್ಯಕ್ಕೆ ಬೆದರಿಕೆ ಒಡ್ಡುವಂತಹದ್ದು.

ಬಿಜೆಪಿ ಸರ್ಕಾರಕ್ಕೆ ಆರಂಭದಿಂದಲೂ ಪ್ರಜಾಪ್ರಭುತ್ವ, ಸಂವಿಧಾನಿಕ ಸಂಸ್ಥೆಗಳ ಮೇಲೆ ವಿಶ್ವಾಸವಿಲ್ಲ, ಸತತವಾಗಿ ಇವುಗಳ ಮೇಲೆ ಧಾಳಿ ಮಾಡುತ್ತಲೇ ಬರುತ್ತಿದೆ. ಕಳೆದ ಅಧಿವೇಶನ ಹಾಳುಗೆಡಹಿದ ರೀತಿ ಉಪಸಭಾಪತಿಯ ಆಯ್ಕೆ ಹಾಗೂ ಅವರ ಪದಚ್ಯುತಿ, ವಿರೋಧ ಪಕ್ಷಗಳ ಗೈರಿನಲ್ಲಿ ಮಸೂದೆಗಳ ಅಂಗೀಕಾರ, ಸಭಾಧ್ಯಕ್ಷರ ಅಧಿಕಾರದ ದುರ್ಬಳಕೆಯಿಂದ ವಿರೋಧ ಪಕ್ಷಗಳ ಬಲ ಕುಗ್ಗಿಸಲು 15 ಶಾಸಕರ ಅಮಾನತಿಗೆ ಸಂಚು. ಇವು ಪ್ರಜಾಪ್ರಭುತ್ವವನ್ನೇ ಬುಡಮೇಲುಗೊಳಿಸಲು ಹೆಸದ ಕ್ರಮಗಳಾಗಿವೆ. ಇಂತಹ ಸರ್ಕಾರ ಅಧಿಕಾರದಲ್ಲಿ ಇರುವಷ್ಟು ದಿನಗಳು ಅಪಾಯ ತಪ್ಪಿದ್ದಲ್ಲ, ಆದ್ದರಿಂದ ಈ ಸರ್ಕಾರ ತೊಲಗಲೇಬೇಕಿದೆ. ಈ ದಿಕ್ಕಿನಲ್ಲಿ ಕರ್ನಾಟಕವನ್ನು ಉಳಿಸಲು ಜನಾಂದೋಲನ ಅಗತ್ಯ ಅನಿವಾರ್ಯ.

# ಶಬರಿಮಲೆ ದುರಂತ : ವೈಜ್ಞಾನಿಕ ಚಿಂತನೆಯ ಅಗತ್ಯತೆ




ಜನವರಿ 14, ಸಂಕ್ರಾಂತಿಯಂದು ಶಬರಿಮಲೆಯಲ್ಲಿ ಸೇರಿದ್ದ ಅಯ್ಯಪ್ಪಸ್ವಾಮಿ ಭಕ್ತರಲ್ಲಿ ಮಕರಜ್ಯೋತಿ ದರ್ಶನದ ಬಳಿಕ ನಡೆದ ಕಾಲ್ತುಳಿತದಲ್ಲಿ 102 ಭಕ್ತರು ಸಾವನ್ನಪ್ಪಿದ ದುರಂತದ ಘಟನೆ ನಡೆಯಿತು. ಇವರಲ್ಲಿ 32 ಜನ ಕರ್ನಾಟಕದವರು. ಬಹುತೇಕ ಉಳಿದವರೆಲ್ಲಾ ಹೊರ ರಾಜ್ಯದವರು. ಇಡುಕ್ಕಿ ಜಿಲ್ಲೆ ಪುಲುವೇಡ್ ಅರಣ್ಯ ಪ್ರದೇಶದಲ್ಲಿ ಲಕ್ಷಾಂತರ ಭಕ್ತರು ಸೇರಿದ್ದ ಇಲ್ಲಿ ಆಟೋ ಬಸ್‌ಗಳ ನಡುವೆ ಆದ ಡಿಕ್ಕಿ, ಅದಕ್ಕೆ ಹೊಂದಿಕೊಂಡ ಗಲಭೆ ಕಾರಣದಿಂದ ಆದ ನೂಕು ನುಗ್ಗಲಿನಲ್ಲಿ ಗಾಬರಿಗೊಂಡು ಓಡಿಹೋಗುವಾಗ ಕಾಲ್ತುಳಿತದಲ್ಲಿ ಸತ್ತಿದ್ದಾರೆ.

**ದುರಂತಗಳು**

ಇಲ್ಲಿ ಈ ಹಿಂದೆಯೂ 1952 (ಪಟಾಕಿ ಸ್ಫೋಟದಿಂದ) ರಲ್ಲಿ ತಮಿಳುನಾಡಿನ 65 ಜನ ಭಕ್ತರು, 1999 ರಲ್ಲಿ ಪಂಪಾ ಬೆಟ್ಟ ಶ್ರೇಣಿಯಲ್ಲಿ ಆಂಧ್ರದ 53 ಜನ ಭಕ್ತರು, ಸಾವಿಗೀಡಾಗಿದ್ದರು. ಈ ಥರದ ಘಟನೆಗಳು ನಮ್ಮದೇಶದಲ್ಲಿಯೂ ಹೊರದೇಶಗಳಲ್ಲಿಯೂ ಸಂಭವಿಸುತ್ತಿರುತ್ತವೆ. ರಾಜಸ್ತಾನ, ಕಾಶ್ಮೀರ ಕಣಿವೆಗಳಲ್ಲಿ ಘಟಿಸಿವೆ. ಇನ್ನೂ ಹಿಂದೆಲ್ಲಾ ಮುಸ್ಲಿಂರ ಪಾವಿತ್ರ್ಯ ಸ್ಥಳ ಮೆಕ್ಕಾದಲ್ಲಿಯೂ ಸಂಭವಿಸಿವೆ. ಅಲ್ಲಿ ದರ್ಶನಕ್ಕೆ ಹೋಗುವವರು ವಾಪಸಾಗುವುದು ಕಷ್ಟ ಎಂಬ ದಿನಗಳೂ ಇದ್ದವು ಎಂಬುದನ್ನು ನೆನಪಿಸಿಕೊಳ್ಳಬೇಕು. ಹೀಗಾಗಿ 'ಮಕ್ಕಾ ಕೊನೆಗಾಲದಲ್ಲಿ ಹೋಗಬೇಕು. ಸಾವು ಬಂದರೆ ಸ್ವರ್ಗಕ್ಕೆ ಹಾದಿ' ಎಂದೆಲ್ಲಾ ಜನರು ನಂಬಿದ್ದರು. ಈಗಲೂ ನಂಬುತ್ತಾರೆ. ಅಂತಹ ನಂಬಿಕೆಗಳೇನೇ ಇರಲಿ ಆದರೆ ಸಾವು ಸಾವೇ! ಅದೇ ಅಂತಿಮ ಯಾತ್ರೆ! ಅವರನ್ನು ನಂಬಿದ, ಪ್ರೀತಿಸಿದ, ಅವಲಂಬಿಸಿದವರಿಂದ ಶಾಶ್ವತ ಅಗಲಿಕೆ.



ಶಬರಿಮಲೆಯ ಘಟನೆ ಬಗ್ಗೆ ನ್ಯಾಯಾಂಗ ವಿಚಾರಣೆಗೆ ಕೇರಳದ ಎಲ್.ಡಿ.ಎಫ್ ಸರ್ಕಾರ ಆದೇಶಿಸಿದೆ. ಪರಿಹಾರ ಕಾರ್ಯಗಳನ್ನು ತತ್‌ಕ್ಷಣದಲ್ಲೇ ಕೈಗೊಂಡಿದೆ. ವರದಿ ಬಂದ ಮೇಲೆ ಕಾರಣ, ಪರಿಹಾರ ಮಾಹಿತಿ ಬರುತ್ತವೆ. ಈಗಿರುವ, ಮುಂಬರುವ ಸರ್ಕಾರ ಅದನ್ನು ಪರಿಗಣಿಸಿ ಕ್ರಮ ವಹಿಸಬೇಕಾಗುತ್ತದೆ.

**ಪವಾಡವಲ್ಲ**

ಈ ಪ್ರಕ್ರಿಯೆಯ ನಡುವೆಯೇ ಕೇರಳ ಹೈಕೋರ್ಟ್ ಅಲ್ಲಿ ಕಾಣಿಸಿಕೊಳ್ಳುವ ಜ್ಯೋತಿ 'ಮಾನವ ಸೃಷ್ಟಿಯೇ' ಎಂಬ ಬಗ್ಗೆ ಸರ್ಕಾರದ ಅಭಿಪ್ರಾಯ ಕೇಳಿದೆ. ಅಲ್ಲಿ ಕಾಣಿಸುವ 'ಮಕರ ಜ್ಯೋತಿ' ಸೃಷ್ಟಿಯ ಬಗ್ಗೆ ಹಿಂದೆಲ್ಲಾ ವಾದ, ವಿವಾದಗಳು, ಪರಿಶೀಲನೆಗಳು ನಡೆದಿವೆ. ಅದು ಪವಾಡವಲ್ಲ, ಇದ್ದಕ್ಕಿದ್ದಂತೆ ಬೆಂಕಿ ಹೊತ್ತುವುದೂ ಇಲ್ಲ.' ಎಂದು ಪ್ರೊ. ಕೋವೂರ್ ಮುಂತಾದ ವಿಚಾರವಾದಿಗಳು ಹೇಳಿದ್ದಾರೆ. ಯಾವುದೇ ಕ್ರಿಯೆ ನಡೆಯಲು ಕಾಯಕ, ಕಾರಣ ಸಂಬಂಧಗಳಿರಲೇಬೇಕು. ವಸ್ತುವಿಲ್ಲದೇ ಪರಿಣಾಮ ಸಂಭವಿಸುವುದಾದರೂ ಹೇಗೆ? ಜ್ಯೋತಿ ಕಾಣಬೇಕೆಂದರೆ ಅಲ್ಲಿ ವಸ್ತು, ಕ್ರಿಯೆ ಇರಲೇಬೇಕು! ಹೀಗೆ ಪ್ರಶ್ನೆಗಳನ್ನು ಹಾಕುತ್ತಾ ಉತ್ತರ ಹುಡುಕುತ್ತಾ ಹೋದವರಿಗೆ ಅಲ್ಲಿ ಕಂಡದ್ದು ಜ್ಯೋತಿಯಂತೆ ಕಾಣುವ ಬೆಂಕಿ. ಮಾನವನ ಸೃಷ್ಟಿ. ಅಲ್ಲಿ ವಸ್ತುವನ್ನು ಉರಿಸಲಾಗುತ್ತದೆ ಎಂಬುದು ಅಂತಿಮ ಶೋಧ. ಇದು ಕೇವಲ ವಿಚಾರವಾದಿಗಳು ಮಾತ್ರವಲ್ಲ. ಕಳೆದ ವರುಷವೂ ಅಯ್ಯಪ್ಪಸ್ವಾಮಿ ದೇವಸ್ವ ಮಂಡಳಿಯು ಸಹ 'ಜ್ಯೋತಿಯು ಮಾನವನಿರ್ಮಿತ, ಅಂದು ಬುಡಕಟ್ಟು ಜನರು ಬೆಂಕಿ ಹೊತ್ತಿಸುತ್ತಾರೆ' ಎಂದು ಸ್ಪಷ್ಟಪಡಿಸಿದೆ. ಇದು ಎಷ್ಟು ಜನರಿಗೆ ತಿಳಿದಿದೆಯೋ? ತಿಳಿದರೂ 'ನಂಬಿಕೆ' ಎಂಬ 'ಸಮಾಧಾನ'ದ 'ಪವಾಡ' ಪರಿಣಾಮದಿಂದ ಹೊರಬರಲು ಇಷ್ಟವಿದೆಯೋ ಇಲ್ಲವೋ? ಅಂತೂ ವಾಸ್ತವ ಬದಲಾಗಲು ಸಾಧ್ಯವಿಲ್ಲವಲ್ಲ. ಹೀಗಿರುವಾಗಲೂ ಅವರವರ ಧಾರ್ಮಿಕ ಹಕ್ಕು, ನಂಬಿಕೆಗಳನ್ನು ಒಂದು ಹಂತದವರೆಗೆ ಮಾನ್ಯ ಮಾಡಬೇಕಾಗುತ್ತದೆ.

**ದೂಷಣೆ ನಿಲ್ಲಿ**

ಆದರೆ ಈ ನಡುವೆ ಜನ ದುರಂತದಲ್ಲಿ ಮಡಿದಿರುವಾಗ, ಶೋಕವಿರುವಾಗ ಸಂಘ ಪರಿವಾರ, ಬಿಜೆಪಿ, ಕಾಂಗ್ರೆಸ್ ಪಕ್ಷಗಳು ನಡೆದುಕೊಂಡ ರೀತಿ ಖಂಡನೀಯ. ಅವರು ಈ ಸಂದರ್ಭವನ್ನು ರಾಜಕೀಯ ದುರುದ್ದೇಶಕ್ಕೆ ಬಳಸಲು ನೋಡಿದರು, ನೋಡುತ್ತಿದ್ದಾರೆ. ಸಚಿವೆ ಶೋಭಾ ಕರಂದ್ಲಾಜೆಯವರೇ ಹೊಸ ಖಾತೆ ಲಭಿಸಿದಂತೆ, ದೂಷಣೆಯ ಮಾತನಾಡುತ್ತಲೇ ಇದ್ದಾರೆ. ವಾಜಪೇಯಿ ಹುಟ್ಟುಹಬ್ಬದ ಸಂದರ್ಭದಲ್ಲಿ ಕಾಲ್ತುಳಿತದಿಂದ 20 ಬಡಜನ ಸಾವನ್ನಪ್ಪಿದ ಘಟನೆಯನ್ನು ಅವರು ಮರೆಯುತ್ತಾರೆ. ಇದು ಹುಲಿರಕ್ಷಿತ ಅರಣ್ಯಪ್ರದೇಶವಾಗಿದ್ದು ಕಾಮಗಾರಿಗಳಿಗೆ ಕೇಂದ್ರಸರ್ಕಾರವೇ ಅನುಮತಿ ನೀಡಬೇಕಿರುವಾಗ ಕಾಂಗ್ರೆಸ್, ಬಿಜೆಪಿಗಳು ಕಣ್ಣುಮುಚ್ಚಿ ದೂಷಿಸುವುದು ಸರಿಯಲ್ಲ. ಒಟ್ಟಾರೆ ಇಂತಹ ಪ್ರಕರಣ ಮರುಕಳಿಸದಂತೆ ಅಗತ್ಯ ಕ್ರಮ, ವ್ಯವಸ್ಥೆಗಳನ್ನು ಮಾಡಬೇಕು. ದೈವಸ್ವ ಮಂಡಳಿ, ಕೇರಳ ಸರ್ಕಾರ, ಕೇಂದ್ರ ಸರ್ಕಾರಗಳು ತಮ್ಮ ಹೊಣೆ ನಿಭಾಯಿಸಬೇಕು.

# ರಾಜಕಾರಣದಲ್ಲಿ ಕ್ರಿಮಿನಲ್‌ಗಳು

ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರಾಗಿದ್ದ ದಿವಾನ್ ಅಲಿಯ ಕೊಲೆ, ಆ ಸುಮಾರಿನಲ್ಲೇ ಕನಕಪುರ ತಾಲ್ಲೂಕು, ಆನೇಕಲ್ ತಾಲ್ಲೂಕುಗಳಲ್ಲಿ ಜೆಡಿ(ಎಸ್)ನ ಮುಖಂಡರುಗಳ ಕೊಲೆ ಪ್ರಕರಣಗಳು ಹೈಟೆಕ್ ಸಿಟಿಯ ಅಪರಾಧಗಳ ಲೋಕದ ಅನಾವರಣ. ಹೆಚ್ಚುತ್ತಿರುವ ಅದರ ಪ್ರಮಾಣಕ್ಕೊಂದು ಎಚ್ಚರಿಕೆಯ ಗಂಟೆಯಾಗಿದೆ. ಬೆಂಗಳೂರಿನಲ್ಲಿ ಕಾರ್ಪೋರೇಟರ್ ಹತ್ಯೆಯು ಮೂರನೇ ಪ್ರಕರಣವಿದಾಗಿದೆ. ಈ ಪ್ರಕರಣಗಳಲ್ಲಿ ರಾಜಕೀಯ ವೈಮನ್ಸಗಳಿಗಿಂತ ವ್ಯಕ್ತಿಗತ ಕಾರಣಗಳೇ ಪ್ರಮುಖವೆಂದರೂ ರಾಜಕಾರಣಕ್ಕೂ ಕ್ರಿಮಿನಲ್ ಶಕ್ತಿಗಳಿಗೂ ನಂಟಿರುವುದು ವಿಶೇಷವಾಗಿ ದಿವಾನ್ ಅಲಿ ಪ್ರಕರಣದಲ್ಲಿ ಸ್ಪಷ್ಟವಾಗುತ್ತದೆ.

ಬೆಂಗಳೂರು ಬಂಡವಾಳ ಹೂಡಿಕೆದಾರರ 'ಸ್ವರ್ಗ'ವಾಗುತ್ತಿರುವಂತೆಯೇ, ರಾಜಧಾನಿಯ ಅಪರಾಧದ ಸ್ವರೂಪವೂ ಅದಕ್ಕೆ ಅನುಗುಣವಾಗಿ ಬೆಳೆಯುತ್ತಿದೆ. ಬದಲಾಗುತ್ತಿದೆ. ವಿಶೇಷವಾಗಿ ಹೆಚ್ಚಿದ ಭೂದಂಧೆ, ಬೃಹತ್ ಕಟ್ಟಡಗಳ ನಿರ್ಮಾಣ. ಭೂ ಹಾಗೂ ಮರಳು ಮಾಫಿಯಾ ಸೊಂಪಾಗಿ ಬೆಳೆಯಲು ಅವಕಾಶ, ಹದ ಕಲ್ಪಿಸಿದೆ. ಇತ್ತೀಚಿನ ಗ್ಯಾಂಗ್‌ವಾರ್‌ಗಳು ಬಹಳಷ್ಟು ಇದೇ ಅಂಶದ ಸುತ್ತ ಹೆಣೆದುಕೊಂಡಿವೆ. ಇನ್ನೂ ಸೈಬರ್ ಅಪರಾಧಗಳು, ಆರ್ಥಿಕ, ಸಾಮಾಜಿಕ ಸಂಕ್ಷೋಭೆ, ಆತ್ಮಹತ್ಯೆಗಳದ್ದು ಮತ್ತೊಂದು ಕಥೆ.

ದಿವಾನ್ ಅಲಿಯ ಪ್ರಕರಣ 'ಜನಸೇವಕ'ನಾಗಿ ರಾಜಕಾರಣಕ್ಕೆ ಇಳಿದ ಮೇಲೂ ಹಳೆಯ ದಾದಾಗಿರಿಯನ್ನು ಮುಂದುವರಿಸಿದ, ಬೆಳೆದು

ಪುಟ 15ಕ್ಕೆ

## ಜಾತಿ ಅಸ್ಪೃಶ್ಯತೆ ಹೀನ ಮುಖ

# ಜಾತಿ ತಾರತಮ್ಯ ನೀತಿಗೆ ಒಂದು ಮುಖ ಆಚರಣೆಗೆ ಹಲವು ಮುಖ

ಒಂದು ಊರಿಗೆ ಹೋಗಲು ಹತ್ತಾರು ದಾರಿಗಳು ಹಾಗೆಯೇ ಅಸ್ಪೃಶ್ಯತಾ ಆಚರಣೆಗೂ ಹತ್ತಾರು ವಿಧಗಳು ಎಂಬಂಥ ರೀತಿಯಲ್ಲಿ ಇಂದಿನ ಸಮಾಜವಿದೆ. ಪಾಳೆಯಗಾರಿ ಪಳೆಯುಳಿಕೆಗಳು ದಟ್ಟವಾಗಿರುವ ಪ್ರದೇಶವಾದ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಮಾನವ ಸಮಾಜ ತಲೆತಗ್ಗಿಸುವಂತೆ ತಾರತಮ್ಯ ನೀತಿಗಳಿವೆ. ಸಮಾಜದ ಮೇಲ್ವರ್ಗ ತಾರತಮ್ಯವನ್ನು ಹೆಮ್ಮೆಯಿಂದ, ಸೊಕ್ಕಿನಿಂದ ತಮ್ಮ ಹಕ್ಕು ಎಂಬಂತೆ ಆಚರಿಸುತ್ತಿದ್ದರೆ ದಲಿತ ವರ್ಗ ತನ್ನ ಪಾಲಿಗೆ ಬಂದಿದ್ದೆ ಇದು ಎಂಬ ಅನಿವಾರ್ಯತೆಗೊಳಪಟ್ಟು ಜೀವಿಸುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಸಿಂಗಾಪುರ ಎಂಬ ಕುಗ್ರಾಮದಲ್ಲಿರುವ ತಾರತಮ್ಯ ನೀತಿಯನ್ನು ಗಮನಿಸೋಣ.

ಬೆಂಗಳೂರನ್ನೇ ಸಿಂಗಾಪುರ ಮಾಡುವೆ ಎಂದು ಬೊಗಳೆ ಬಿಟ್ಟ ಕಾಂಗ್ರೆಸ್‌ನ ಮಾಜಿ ಮುಖ್ಯ ಮಂತ್ರಿ ಎಸ್.ಎಂ.ಕೃಷ್ಣ ಆಡಿದ ಸುಳ್ಳಿಗೆ ಮಾಡಿದ ಮೋಸಕ್ಕೆ ಮುಖ್ಯಮಂತ್ರಿ ಸ್ಥಾನ ಕಳೆದುಕೊಂಡಿದ್ದು, ಹಳೇ ಕಥೆ. ಎಸ್.ಎಂ.ಕೃಷ್ಣ ಕನಸು ಕಂಡ ಸಿಂಗಾಪುರಕ್ಕೆ ತದ್ವಿರುದ್ಧ ಇರುವ ಕೊಂಪೆಗೆ ಉದಾಹರಣೆಯ ಸಿಂಧನೂರಿನ ಈ ಸಿಂಗಾಪುರ.

### ದಲಿತರಾದರೆ ದೋಣಿಗೆ ಡಬ್ಬಲ್ ಶುಲ್ಕ

ಸಿಂಗಾಪುರ ಗ್ರಾಮ ಸಿಂಧನೂರಿನಿಂದ ವಾಯುವ್ಯದಲ್ಲಿ ಸುಮಾರು 35-40 ಕಿ.ಮೀ. ದೂರದಲ್ಲಿದೆ. ತುಂಗಭದ್ರಾ ನದಿಯ ದಂಡೆಯಲ್ಲಿರುವ ಈ ಗ್ರಾಮ ರಾಯಚೂರು ಜಿಲ್ಲೆಯ ಮತ್ತು ಸಿಂಧನೂರು ತಾಲ್ಲೂಕಿನ ಕೊನೆ ಗ್ರಾಮ. ತುಂಗಭಧ್ರಾ ನದಿ ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳನ್ನು ವಿಭಜಿಸುತ್ತದೆ. ಸಿಂಗಾಪುರದಿಂದ ಸಿರುಗುಪ್ಪ-ಬಳ್ಳಾರಿ-ಕಂಪ್ಲಿಗಳಿಗೆ ಹೋಗಲು ನದಿ ದಾಟಿದರೆ ಸಾಕು ಸಮೀಪವಾಗುತ್ತವೆ. ಆ ಕಾರಣದಿಂದಾಗಿ ಸಿಂಗಾಪುರದಿಂದ ನದಿಯಾಚೆಗೆ ಹೋಗುವವರು ನಿರಂತರ ಸಿಗುತ್ತಾರೆ. ನದಿ ದಾಟಲು ಹರಿಗೋಲು ಇದೆ. ಇದರಲ್ಲಿ ಸಿಂಗಾಪುರ ದಂಡೆಯಿಂದ ಆಚೆ ದಡಕ್ಕೆ ಹೋಗುವವರಿಗೆ 5 ರೂ. ಸಾಮಾನ್ಯ ಶುಲ್ಕವಿದೆ. ಇದು ಹರಿಗೋಲು ಹಾಕುವ ಅಂಬಿಗನಿಗೆ ಸೇರುತ್ತದೆ. ಆದರೆ ತಾರತಮ್ಯವಿರುವುದೇ ಇಲ್ಲಿ. ದಲಿತೇರರಿಗೆ ರೂ.5 ಶುಲ್ಕ ಪಡೆಯುವ ಅಂಬಿಗರು ದಲಿತರಿಗೆ ಮಾತ್ರ ರೂ.10 ಶುಲ್ಕ ವಿಧಿಸುತ್ತಾರೆ. ಇಲ್ಲಿಯ ದಲಿತರು ಇದೊಂದು ಸಂಪ್ರದಾಯ ಎಂಬಂತೆ ಇದನ್ನು ಒಪ್ಪಿಕೊಂಡು ಬಂದಿದ್ದಾರೆ.

ಆದರೆ ಸಿಂಗಾಪುರ ಗ್ರಾಮದ ವಿದ್ಯಾವಂತ ಯುವಕನೊಬ್ಬ ಈ ತಾರತಮ್ಯ ನೀತಿಯನ್ನು ವಿರೋಧಿಸಿದ ಮತ್ತು ಇತರರಂತೆ ರೂ.5 ಮಾತ್ರ ಶುಲ್ಕ ಕೊಟ್ಟ ಎಂಬುದೇ ಅಂಬಿಗರ ಜಾತಿಗೆ ಸಿಟ್ಟು ತರಿಸಿತು. ಪರಿಣಾಮ ಅಂಬಿಗರು ದಲಿತೇತರರನ್ನು ಸಂಘಟಿಸಿ ಸಭೆ ಮಾಡಿ ದಲಿತರಿಗೆ ಬುದ್ದಿ ಕಲಿಸಲು ತೀರ್ಮಾನ ಕೈಗೊಂಡರು. ಪರಿಣಾಮ ರಾತ್ರೋರಾತ್ರಿ ದಲಿತಕೇರಿಗೆ ನುಗ್ಗಿ ಸಿಕ್ಕಸಿಕ್ಕವರನ್ನು ಬಡಿದರು. ಹೀಗಾಗಿ ಹೊಡೆತಕ್ಕೆ ಬಲಿಯಾದ ದಲಿತರು ಸಿಂಧನೂರು ಮತ್ತು ಬಳ್ಳಾರಿ ಆಸ್ಪತ್ರೆ ಸೇರುವಂತಾಯ್ತು.

### ಹೋರಾಟ ಪರಿಹಾರ

ಈ ಘಟನೆ ಬಗ್ಗೆ ಗೊತ್ತಾದ ತಕ್ಷಣ ಸಿಂಧನೂರಿನ ದಲಿತರ ಹಕ್ಕುಗಳ ಹೋರಾಟ ಸಮಿತಿ ಮುಖಂಡ ಕಾಂ:ನರಸಿಂಹಪ್ಪ ಗ್ರಾಮಕ್ಕೆ ಭೇಟಿ ಕೊಟ್ಟು ವಿಷಯ ಸಂಗ್ರಹಿಸಿ ತಿಳಿಸಿದ ಪರಿಣಾಮವಾಗಿ ಕಾಂ:ಮಾರುತಿ ಮಾನ್ಪಡೆ ನೇತೃತ್ವದಲ್ಲಿ ಸಂಗಾತಿಗಳಾದ ಕರಿಯಪ್ಪ ಅಚ್ಚೊಳ್ಳಿ, ಮಲ್ಲಯ್ಯ ಜಾಲಹಳ್ಳಿ, ಶಂಶುದ್ದೀನ್ ಮುಂತಾದವರು ಗ್ರಾಮಕ್ಕೆ ಭೇಟಿ ಕೊಟ್ಟರು. ನಿಯೋಗ ಗ್ರಾಮಕ್ಕೆ ಹೋದಾಗ ಇಡೀ ಗ್ರಾಮದಲ್ಲಿ ಸ್ಮಶಾನಮೌನ ಆವರಿಸಿತ್ತು. ದಲಿತರ ಕೇರಿಯಲ್ಲಿ ಗಂಗಾಧರ ಮತ್ತು ಸರದಾರ ಎಂಬ ಯುವಕರ ಪ್ರಯತ್ನದಿಂದಾಗಿ ಸಭೆ ಸೇರಿತು. ಕಾಂ: ಮಾರುತಿ ಮಾನ್ಪಡೆಯವರು ಮಾತನಾಡಿ ಎಲ್ಲರಿಗೂ ಧೈರ್ಯ ತುಂಬಿದರು. ಅಲ್ಲಿಯ ಹಿರಿಯರು ಗ್ರಾಮದಲ್ಲಿ ಕಿರಾಣಿ ಅಂಗಡಿಗಳಲ್ಲಿ ಮತ್ತು ಹೋಟೆಲುಗಳಲ್ಲಿ ತಮಗೆ ಏನೊಂದು ಸಾಮಾನುಗಳನ್ನು ಕೊಡುವುದಿಲ್ಲ ಎಂದು ಹೇಳಿದರು. ತಮ್ಮ ಕೇರಿಯಲ್ಲಿ ಇರುವ ಕಿರಾಣಿ ಅಂಗಡಿ ಮುಚ್ಚಿಸಿರುವುದನ್ನು ತೋರಿಸಿದರು. ಈ ಎಲ್ಲಾ ನಿರ್ಬಂಧ ಮತ್ತು ತಾರತಮ್ಯಗಳನ್ನು ವಿರೋಧಿಸಿ ಸಿಂಧನೂರಿನಲ್ಲಿ ಬೃಹತ್ ಹೋರಾಟವಾಯ್ತು. ರಾಯಚೂರಿನಲ್ಲಿ ಜಿಲ್ಲಾಧಿಕಾರಿ ಕಛೇರಿ ಮುಂದೆ ಹೋರಾಟವಾಯ್ತು. ನಂತರ ಬೆಂಗಳೂರಿಗೆ ನಿಯೋಗದಲ್ಲಿ ಒಂದು ಪೋಲೀಸ್ ವರಿಷ್ಠರಿಗೆ ದೂರು ಸಲ್ಲಿಸಲಾಯ್ತು. ಈ ಎಲ್ಲಾ ಚಟುವಟಿಕೆಗಳಿಂದಾಗಿ ಅಲ್ಲಿಯ ದಲಿತರು ಆಹಾರದ ರೂಪದಲ್ಲಿ ಮತ್ತು ಹಣದ ರೂಪದಲ್ಲಿ ಪರಿಹಾರ ಪಡೆದಿದ್ದಾರೆ.

ಸಿಂಗಾಪುರದಲ್ಲಿ ಈಗಲೂ ಸ್ಮಶಾನ ಮೌನವೇ ಗತಿಯಾಗಿದೆ. ದಲಿತರು ದೌರ್ಜನ್ಯಕಾರರ ಮೇಲೆ ಕೇಸು ಹಾಕಿದ್ದರೆಂಬ ಕಾರಣಕ್ಕೆ ದಲಿತರ ಮೇಲೆ ಕೌಂಟರ್ ಕೇಸ್ ಆಗಿ ಕೋರ್ಟಿಗೆ ಅಲೆಯುವುದು ತಪ್ಪಿಲ್ಲ. ನ್ಯಾಯ ಕೇಳಿದ ದಲಿತರಿಗೆ ಕೋರ್ಟಿಗೆ ಅಲೆವ ಪರಿಸ್ಥಿತಿ ಬಂದದ್ದು, ನ್ಯಾಯವೇ?

**ಮಲ್ಲಯ್ಯ ಜಾಲಹಳ್ಳಿ**

### ಜಾತಿ ರಾಜಕೀಯ

ಆ ಬಸವ ತತ್ವಕ್ಕೆ ಮಸಿ ಬಳಿದು ಇಂದೆ
ಜಾತಿ ರಾಜಕೀಯ ಮಾಡುವುದ ಕಂಡೆ
ಬಸವಣ್ಣ ದಲಿತ ಜನ ಮನೆಯಲ್ಲಿ ಉಂಡ
ಸತ್ಯವನು ಹೇಳಿದರೆ ಕಾರುವರು ಕಂಡ

■ **ವಿಡಂಬಾರಿ**

## ಯಡ್ಡಿ ಗಡ ಗಡ

ಕ್ಯಾತೆ

**ಈ. ಬಸವರಾಜು**
ಮಲ್ಲೇನಹಳ್ಳಿ

ಯಣ್ಣ ಯಡ್ಯೂರಪ್ಪ ಗಡ ಗಡ ಅಂತ ನಡುಗ್ ತ ಇದ್ದನಂತೆ?

ಏ, ವಯಸ್ಸಾದ್ ಮನ್ಸ, ಇಂತ ಸಳಿ ಯಾವತ್ತೂ ಬಂದಿತ್ತಿಲ್ಲ, ನಡುಗ್ದೇ ಏನ್ ಮಾಡ್ಯನು ಬುಡೋ

ಅತ್ತಗಿ.

ಸಲಿ ನಿಂಗೆ, ನಂಗೆ, ಇಲ್ಲ ಮನೆ ಇಲ್ದರಿಗೆ. ಯಡ್ಯೂರಪ್ಪ ಸಳಿ ಅಂದ್ರೆ ಕೋಟು, ಶಾಲು ಯಲ್ಲ ಪಾರಿನ್ನಿಂದ ಬತ್ತವೆ. ಮನೆ ವಳ್ಗೆ ಸಳಿ ಆಗ್ದಂಗೆ ಬೆಂಕಿ ಆಕಿ ಬಿಸಿ ಮಾಡಕೆ ಆಳವ್ರೆ. ಈ ಸಳಿಗ್ಯಲ್ಲ ಅವ್ನು ಗಡಗಡ ಅನ್ನಂಗೇ ಇಲ್ಲ ಕಣೋ.

ಮತ್ತೆ ಇನ್ನೇನಾಗಿರ್‌ಬೌದು, ಎಲ್ಲೋ ಯದಿರ್ಕಂಡಿರ್ಬೇಕು, ಕರ್ಯಪ್ಶನ್ ಕಟ್ಟೆತಕೆ ಕರ್ಕಂಡೋಗಿ

ಅನ್ನ ತಗಿಸಿದ್ರೆ ಸರಿ ಆಗ್ ಬೌದು.

ಈಗ ಅನ್ನ ತಗ್ಯರ್ಯಲ್ಲ ಮ್ಯಾಕೋಗ್ಯವ್ರೆ, ಅವ್ರು ಸಿಗದಿಲ್ಲ. ಜ್ವತಿಗೆ ಇದು ಅಂತ ಕಾಯ್ಲೆ ಅಲ್ಲ. ಬ್ಯಾರೇ

ಕಾಯ್ಲೆ.

ಸರಿ ಓಗ್ಲಿ ನೀನೆ ಏಳಪ್ಪ, ಅದ್ಯಾಕೆ ನಡುಗ್ತಾಸ ಅವ್ನೆ ಅಂತವ?

ಕುರ್ಚಿ ಓಗ್‌ಸಬೌದು ಅಂತ ಯದಿರ್ಕಂಡು ಕುರ್ಚಿಯ ತಬ್ಬಿಕಂಡು ನಡುಗ್ತಾ ಅವ್ನಂತೆ

ಸ್ಲಲ್ಲ ಕಣೋ, ಅಂತ ದ್ವಡ್ಡ ಮನ್ಸಂಗೆ ಈ ಕುರ್ಚಿ ಅನ್ನದು ಪರ್ಮೆಂಟಲ್ಲ, ಯಾವಾಗ್ ಬೇಕಾದ್ರೂ

ಓಗ್‌ಬೌದು ಅನ್ನದು ಯಲ್ಲಾರ್ಗೂ ಗೊತ್ತು, ಅವ್ನು ಯಾಕಿಂಗಾಡ್ಯನು?

ನೀನು ಅಂತ ಆದಿಕಾರ ಓಗ್ಲಿ, ಪಂಚಾತಿ ಅಧ್ಯಕ್ಷನೂ ಆಗಿಲ್ಲ, ಅದಿಕಾರ ಅನ್ನದು ಅಂಗಾಡುಸ್ತದೆ. ಅಲ್ಲಿ ಜಾಸ್ತಿ ಪವರು ಇರ್ತದೆ. ಅಮ್ಯಾಲೆ ಆದಿಕಾರ ಓದ್ ಮ್ಯಾಲೆ ನೀನ್ಯಾವೂರು ಅಂತ ಕೇಳದಿಲ್ಲ, ಅದ್ಕೆ ಅವ್ನಿಗೆ ಯದ್ರಿಕೆ ಆಗಿರ್ಬೇಕು.

**ಯಾರು ಎದ್ರುಸ್ತಾ ಇರರು?**

ರಾಜ್ಯ ಪಾಲ್ರು. ನೀನು ತಪ್ ಮಾಡಿರ್ ಬೌದು, ಅದ್ಕೆ ವಿಚಾರ್ಣೆ ಮಾಡ್ತಿನಿ ಅಂತ ಏಳಿದ್ರಂತೆ. ಅದ ಕೇಳ್ತಿದ್ದಂಗೆ ಮದ್ಲು ಕಕ್ಕಸ್ ರೂಮಿಗೆ ಓಗಿ ಬಂದ್ನಂತೆ. ಆಮ್ಯಾಲೆ ರಾಜ್ಯ ಪಾಲ್ರಿಗೆ ಫೋನ್ ಮಾಡಿ ಅತ್ನಂತೆ. ಕ್ವನಿಗೆ ಯಾರೂ ಇಲ್ದಾಗ ರಾಜ್ಯ ಪಾಲ್ರ ಮನಿಗೋಗಿ ಯಳ್ಡೂ ಕಾಲ್ ಗಳ ಅನಾಮತ್ತು ತಬ್ಬಿ ಇಡ್ಕಂಡು ಗಳ ಗಳ ಅಂತ ಅತ್ನಂತೆ. ಅವ್ರು ಬಗ್ಲಿಲ್ವಂತೆ, ಅದ್ಕೆ ಗಡಗಡ ಅಂತ ನಡುಗ್ತಾ ಅವ್ನಂತೆ.

ನಾನು ಸಾಚ ಅಂತನಲ, ವಿಚಾರ್ಣೆ ಮಾಡಿ ಅಂತ ಏಳಕಾಗದಿಲ್ವೆ?

ಕಳ್ಳನ್ ಮನ್ಸು ಉಳ್ಳುಳ್ಗೆ ಅನ್ನಂಗೆ ಇವ್ನು ದುಡ್ಡು ಆಸ್ತಿ ಮಾಡ್ಯವ್ನೆ, ವಿಚಾರ್ಣೆ ಆದ್ರೆ ಮದ್ಲು ಮಾಡಿರೋ ಆಸ್ತಿ ಓಯ್ತದೆ, ಅಮ್ಯಾಲೆ ಕಂಬಿ ಎಣುಸ್ಬೇಕಾಯ್ತದೆ ಅಂತವ ಯದಿರ್ಕಂಡವ್ನೆ.

ಮತ್ತೆ ಟೀವಿಲಿ ಬಂದಾಗ ನಾನು ಯದ್ರದಿಲ್ಲ, ಅದೇನ್ ಮಾಡ್ತಿರೋ ಮಾಡ್ಕಳಿ ಅಂತ ಜೋರಾಗಿ

ಮಾತಾಡ್ತನೆ?

ಇನ್ನೇನ್ ಮತ್ತೆ, ಮೃತ್ತಗಿದ್ರೆ ಇವ್ನು ತಪ್ ಮಾಡಿರ್ ಬೌದು ಅಂತರೆ ಅಂದ್‌ಬುಟ್ಟು ಅಂಗಾಡ್ತಾ ಅವ್ನೆ.

ನಾವು ಒಂದ್ಸತಿ ಅಯ್ಯಪ್ಪಸ್ವಾಮಿಗೋಗಿದ್ವಿ. ವಾಪಸ್ಸು ಬರ್ವಾಗ ಮೈಸೂರಿಲ್ಲಿ ಓಟ್ಲಿಗೋಗಿದ್ವಿ. ನಾವ್ಯಲ್ಲ ಹತ್ತು ಟೇಬಲ್‌ನಲ್ಲಿ ಊಟ ಮಾಡ್ದ್ವಿ. ಯಲ್ಲಾ ಆಚೆಗ್ ಬರ್ವಾಗ ಓಟ್ಲಿನವ್ನು ಒಂದ್ ಟೇಬಲ್ಲಿನವ್ರು ದುಡ್ ಕೊಟ್ಟಿಲ್ಲ ಅಂದ. ಆಗ ಆ ದ್ವಡ್ಡ ಇದ್ದನು ಲೇ ಅದ್ಯಾರು ಕೊಟ್ಟಿಲ್ವೋ ಕೊಡಿರ್ಲ, ಬಸ್ ವರುಡ್ಬೇಕು ಅಂತ ಜೋರಾಗಿ ಕೂಗ್ತಾ ಇದ್ದ. ಆಗ ಓಟ್ಲಿನವ್ನು ಬಂದು, ಅಯ್ಯೋ ನಿನ್ ಟೇಬಲ್ ದುಡ್ಡೇ ಬಂದಿಲ್ಲ ಕಣಯ್ಯ ಅಂದ. ಆಗ ದ್ವಡ್ಡ ಮಾತಾಡ್ದಂಗೆ ದುಡ್ ಕೊಟ್ಟು ಬಂದ್ ಬಸ್ಸ್‌ಲ್ಲಿ ಕೂತ್ಕಂಡ. ಅಂಗೆ ತಪ್ ಮಾಡ್ದರು ಎಲ್ಲಿ ಸಿಗಾಯ್ಕತ್ತಿನೋ ಅಂತ ಜಾಸ್ತಿ ಮಾತಾಡ್ತರೆ. ಅಂತನು ನಮ್ ಯಡ್ಡಿ.

**ಈಗೇನ್ ಮಾಡ್ತನಂತೆ?**

ತನಿಕೆ ಮಾಡಕೋದ್ರೆ ನಾನು ಕರ್ನಾಟಕ ಬಂದ್ ಮಾಡುಸ್ತಿನಿ ಅಂತ ರಾಜ್ಯಪಾಲ್ರಿಗೆ ಎದ್ರುಸ್ತಾ ಅವ್ನೆ.

ಇವ್ನ ತಪ್ ಮುಚ್ಚಕೆ ಕರ್ನಾಟಕ ಬಂದ್ ಮಾಡಕ್ವಂಟವ್ನೆ ಅನ್ನು. ಇದ ಯಾರ್ಯಾರ ಒಪ್ಯರೆ?


ನ್ಯಾಯಸ್ತ್ರ ತಪ್ಪು ಅಂತರೆ. ಯಡ್ಯೂರಪ್ನತ್ರ ಅಷ್ಟೋ ಇಷ್ಟೋ ತಿಂದಿರರು ಏನ್ ಬಾಳ ತಿಂದವ್ನೆ

ಬುಡ್ರಯ್ಯ. ಯಲ್ಲ ತಿಂದವ್ರೆ ಅಂತ ತಿಪ್ಪೆ ಸಾರುಸ್ತರೆ.

ಇನ್ನೂ ಎಷ್ಟ್ ತಿನ್ಬೇಕಂತೆ. ಈಗ್ಲೆ ಅಜೀರ್ಣ ಆಗೋವಷ್ಟ ತಿಂದವ್ನೆ. ಒಟ್ನಲ್ಲಿ ಇಂತ ಬಂಡ ಮುಕ್ಯ ಮಂತ್ರೀನ ನಾವು ಇಂದೆ ನೋಡಿರ್ಲಿಲ್ಲ ಬುಡು. ○

ಕನ್ನಡ ವಾರಪತ್ರಿಕೆ

# ಅನೈತಿಕ ಬಿಜೆಪಿ ಸರ್ಕಾರ ಪ್ರಜಾಪ್ರಭುತ್ವಕ್ಕೆ ಸಂಚಕಾರ



ಜಿ.ವಿ.ಶ್ರೀರಾಮರೆಡ್ಡಿ

**ಭ್ರಷ್ಟತೆ, ಅನೈತಿಕತೆಯೇ ಬಂಡವಾಳವಾಗಿರುವ ರಾಜ್ಯ ಬಿಜೆಪಿ ಸರ್ಕಾರವು ತನ್ನನ್ನು ಉಳಿಸಿಕೊಳ್ಳಲು ಅಧಿಕಾರ ದುರುಪಯೋಗದ ದಬಾವಣೆ ರಾಜಕಾರಣಕ್ಕೆ ಇಳಿದಿರುವುದು ವಿಷಾದನೀಯವಾಗಿದೆ.**

ಸೈಟುಗಳ ಡೀನೋಟಿಫಿಕೇಶನ್ ವಿಚಾರದಲ್ಲಿ ಕಾನೂನು ಬಾಹಿರ ಕೆಲಸ ಮಾಡಿಲ್ಲ. ಬದಲಿಗೆ ಅನೈತಿಕ ಕೆಲಸ ಮಾಡಿದ್ದಾರೆಂದು ಕರ್ನಾಟಕದ ಮುಖ್ಯಮಂತ್ರಿಯ ಬಗ್ಗೆ ತೀರ್ಪನ್ನು ಕೊಟ್ಟಿದ್ದಾರೆ. ಈ ತೀರ್ಪನ್ನು ಯಡಿಯೂರಪ್ಪನ ಬಗ್ಗೆ ಕೊಟ್ಟಿರುವುದು ಈ ದೇಶದ ಯಾವುದೇ ನ್ಯಾಯಾಂಗವೂ ಅಲ್ಲ ಅಥವಾ ಯಾವುದೆ ತನಿಖಾ ಸಂಸ್ಥೆಯೂ ಅಲ್ಲ. ಈ ತೀರ್ಪನ್ನು, ಯಡಿಯೂರಪ್ಪ 'ಪ್ರತಿನಿಧಿಸುವ' ಸತ್ಯ, ಶೀಲ, ಏಕತೆ ಪ್ರಾಮಾಣಿಕತೆಗೆ ವಾರಸುದಾರ ನಾನೇ ಎಂದು ಸ್ವಯಂ ಘೋಷಿಸಿಕೊಂಡ ಭಿನ್ನ ಪಕ್ಷವಾದ ಬಿ.ಜೆ.ಪಿ.ಯ ರಾಷ್ಟ್ರೀಯ ಅಧ್ಯಕ್ಷ ನಿತಿನ್ ಗಡ್ಕರಿಯವರು. ಇಂತಹ ಅನೈತಿಕ ಕೆಲಸಗಳನ್ನು ಮಾಡುವ ವ್ಯಕ್ತಿ ಮುಖ್ಯಮಂತ್ರಿಯಾಗಿ ಇರಬಹುದೆ? ಇಂತಹ ಅನೈತಿಕ ವ್ಯಕ್ತಿಯನ್ನು ಬೆನ್ನು ತಟ್ಟುತ್ತಿರುವ ಬಿ.ಜೆ.ಪಿ. ಈ ದೇಶವನ್ನು ಮತ್ತು ನಮ್ಮ ಕರ್ನಾಟಕವನ್ನು ಯಾವ ಸ್ಥಿತಿಗೆ ತರಬಹುದು. ಇಂತಹ ಅನೈತಿಕತೆಗೆ ಬೆನ್ನು ತಟ್ಟುವ ಹೊಣೆಗೇಡಿ ಭ್ರಷ್ಟ ರಾಜಕೀಯ ಪಕ್ಷದ ಕೈಯಲ್ಲಿ ನಮ್ಮ ರಾಜ್ಯ ಏನಾಗಬಹುದು ಎಂಬುದಕ್ಕೆ ಜನವರಿ 6ನೇ ತಾರೀಖು ಪ್ರಾರಂಭವಾಗಿ 10ನೇ ತಾರಿಖಿಗೆ ಮುಗಿದ ವಿಧಾನ ಸಭೆಯ ಅಧಿವೇಶನವೇ ಸಾಕ್ಷಿ.


ಬಿ.ಜೆ.ಪಿ.ಯು ಈ ರಾಜ್ಯದಲ್ಲಿ ಅಧಿಕಾರಕ್ಕೆ ಬಂದು 3 ವರ್ಷಗಳಲ್ಲಿ ಕರ್ನಾಟಕದ ವಿಧಾನ ಸಭೆಯನ್ನು ಮತ್ತು ಅದರ ಕಲಾಪಗಳನ್ನು ಬಿ.ಜೆ.ಪಿ ನಡೆಸಿಕೊಂಡ ರೀತಿಯನ್ನು ನೋಡಿದ ಮೇಲೆ ಇದೊಂದು ಅಪ್ಪಟ ಫ್ಯಾಸಿಸ್ಟ್ ಮನೋಭಾವದ ಪಕ್ಷವೆಂಬುವುದು ಸಾಮಾನ್ಯ ಮನುಷ್ಯನಿಗೂ ತಿಳಿಯುತ್ತದೆ. ಮೂರು ವರ್ಷಗಳಲ್ಲಿ ನಡೆದ ಯಾವುದೇ ಅಧಿವೇಶನದಲ್ಲಿ ಈ ರಾಜ್ಯದ ಜನತೆಯ ಜ್ವಲಂತ ಸಮಸ್ಯೆಗಳ ಬಗ್ಗೆಯಾಗಲೀ ರಾಜ್ಯದ ಸರ್ವತೋಮುಖ ಅಭಿವೃದ್ಧಿಯ ಬಗ್ಗೆಯಾಗಲೀ ಅಥವಾ ಯಾವುದೇ ಒಂದು ಗಹನವಾದ ವಿಷಯದ ಬಗ್ಗೆ ಗಂಭೀರ ಚರ್ಚೆ ನಡೆಯಲಿಲ್ಲ, ಬರೀ ಗದ್ದಲ ಆರೋಪ ಪ್ರತ್ಯಾರೋಪಗಳಲ್ಲಿ ತೊಡಗಿ ಸದನದ ಘನತೆ ಗೌರವ ಮತ್ತು ಪಾವಿತ್ರ್ಯತೆಯನ್ನು ನಾಶಗೊಳಿಸಿಬಿಟ್ಟರು. ಜೊತೆಗೆ ವಿಧಾನ ಸಭೆ ಮತ್ತು ಅದರ ಕಲಾಪಗಳನ್ನು ಗಮನಿಸಿದ ಜನರಿಗೆ ಜಿಗುಪ್ಸೆ ಮತ್ತು ಅಗೌರವ ಉಂಟಾಗಿ ಶಾಸನ ಸಭೆಯನ್ನು ಅವಹೇಳನ ಮತ್ತು ಹಗುರದ ಭಾವನೆಯಿಂದ ಜನ ನೋಡುವಂತಾಗಿದೆ. ಇದಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡಬೇಕು? ಸರ್ಕಾರವನ್ನು ನಡೆಸುವ ಆಡಳಿತ ಪಕ್ಷವನ್ನೋ? ವಿರೋಧ ಪಕ್ಷಗಳನ್ನೋ? ಅಥವಾ ಇವರಿಬ್ಬರನ್ನು ಕಳುಹಿಸಿದ ಜನರನ್ನೊ?

**ಹೆದರಿಕೆ ?**

ಇಷ್ಟಕ್ಕೂ ಕಳೆದ 3 ತಿಂಗಳಿಂದ ಇಡೀ ದೇಶದಲ್ಲಿ ಮತ್ತು ರಾಜ್ಯದಲ್ಲಿ ಗಂಭೀರ ಚರ್ಚೆಗೆ ಒಳಗಾಗಿರುವ ವಿಷಯ ಯಾವುದು? ಯಡಿಯೂರಪ್ಪನ ನೇತೃತ್ವದ ಬಿ.ಜೆ.ಪಿ. ಸರ್ಕಾರದ ಬ್ರಹ್ಮಾಂಡ ಭ್ರಷ್ಟಾಚಾರದ ಬಗ್ಗೆ ಮುಖ್ಯಮಂತ್ರಿ ಯಡಿಯೂರಪ್ಪನವರ ಅಕ್ರಮಗಳು, ಸ್ವಜನ ಪಕ್ಷಪಾತ ಸಾವಿರಾರು ಎಕರೆ ಭೂಕಬಳಿಕೆ, ಅಕ್ರಮ ಗಣಿಗಾರಿಕೆ, ಯಡಿಯೂರಪ್ಪನವರ ಕಾನೂನು ಬಾಹಿರ ಮತ್ತು ಅನೈತಿಕತೆಯಿಂದಾಗಿ ತನ್ನ ಕುಟುಂಬ ವರ್ಗದವರಿಗೆ ಕೋಟ್ಯಾಂತರ ರೂಪಾಯಿ ಬೆಲೆಬಾಳುವ ನಿವೇಶನಗಳನ್ನು 'ಡಿ' ನೋಟಿಫೈ ಮಾಡಿ ನೂರಾರು ಕೋಟಿಗಳು ಲೂಟಿ ಮಾಡಿದ್ದಾರೆಂದು ದಾಖಲೆಗಳ ಸಮೇತ ತೋರಿಸಿ ಇವರ ಭ್ರಷ್ಟಾಚಾರವನ್ನು ರಾಜ್ಯದ ಜನತೆಯ ಮುಂದೆ ಇಟ್ಟು ವಿರೋಧ ಪಕ್ಷಗಳು ಯಡಿಯೂರಪ್ಪನ ರಾಜೀನಾಮೆಗೆ ಒತ್ತಾಯಿಸಿದರೂ, ಕಡೆಗೆ ಯಡಿಯೂರಪ್ಪನವರ ಶ್ರೀರಾಮನ ಪಕ್ಷವಾದ ಬಿ.ಜೆ.ಪಿ.ಯ ರಾಷ್ಟ್ರೀಯ ನಾಯಕತ್ವವೇ ಇವರನ್ನು ಅಧಿಕಾರದಿಂದ ಕೆಳಗಿಳಿಸಲು ಸಿದ್ಧರಾಗಿದ್ದರು. ಆದರೆ ಶ್ರೀರಾಮನ 'ಸತ್ಯಸಂದರ ಪಕ್ಷ'ದ ರಾಷ್ಟ್ರೀಯ ನಾಯಕತ್ವ ಯಡಿಯೂರಪ್ಪನವರ ಬ್ಲಾಕ್ ಮೈಲ್ ತಂತ್ರಕ್ಕೆ ಮಣಿದು ಯಡಿಯೂರಪ್ಪನವರಿಗೆ ಶರಣಾಯಿತು. ಆದರೆ ಯಡಿಯೂರಪ್ಪನು ತನ್ನ ಮೇಲೆ ಇರುವ ಎಲ್ಲಾ ಆಪಾದನೆಗಳಿಗೆ ಸದನದಲ್ಲಿ ಉತ್ತರ ಕೊಡುತ್ತೇನೆ ತಾಕತ್ತಿದ್ದರೆ, ವಿರೋಧ ಪಕ್ಷದವರು ವಿಧಾನ ಸಭೆಯಲ್ಲಿ ಚರ್ಚಿಸಲು ಸಿದ್ಧರಾಗಿ ಎಂದು ಪಂಥಾಹ್ವಾನ ನೀಡಿದ್ದರು. ಮುಖ್ಯಮಂತ್ರಿಗಳ ಮೇಲಿನ ಆಪಾದನೆಗಳ ಬಗ್ಗೆ ಚರ್ಚಿಸಲು ಅಧಿವೇಶನವೇ ಸೂಕ್ತ ಸ್ಥಳ ಕೂಡ. ಆದರೆ ಚರ್ಚೆಗೆ ಯಾರು ತಯಾರು ಇಲ್ಲ ಮತ್ತು ಯಾರು ಅಡ್ಡಿಪಡಿಸಿದ್ದರು? ಇವರು ಚರ್ಚೆಯ ಬಗ್ಗೆ ಪ್ರಮಾಣಿಕರಾಗಿದ್ದರೆ ಚರ್ಚೆ ಮಾಡಲು ಇವರಿಗೆ ನೈತಿಕ ಧೈರ್ಯವಿದ್ದಿದ್ದರೆ ಯಾವ ನಿಯಮದ ಅಡಿಯಲ್ಲಿ ಚರ್ಚಿಸಿದರೇನು? ಚರ್ಚೆ ಚರ್ಚೆನೆ, ನಿಮ್ಮ ಜಾತಕ ಜಾಲಾಡುತ್ತೇನೆ ನಿಮ್ಮ ಬಂಡವಾಳ ಬಿಚ್ಚಿಡುತ್ತೇನೆಂದು ಗೊಡ್ಡು ಬೆದರಿಕೆಗಳನ್ನು ಹಾಕಿದ ಯಡಿಯೂರಪ್ಪ ಯಾಕೆ ಚರ್ಚೆಗೆ ಅವಕಾಶ ಮಾಡಿಕೊಡಲಿಲ್ಲ. ವಿರೋಧ ಪಕ್ಷಗಳ ಬೇಡಿಕೆ ಏನು? ನಿಲುವಳಿ ಸೂಚನೆಯ ಅಡಿಯಲ್ಲಿ ಮುಖ್ಯಮಂತ್ರಿ ಮತ್ತು ಬಿ.ಜೆ.ಪಿ. ಸರ್ಕಾರದ ಭ್ರಷ್ಟಾಚಾರಗಳನ್ನು ಚರ್ಚಿಸಬೇಕೆಂದು ಆದರೆ ಅದಕ್ಕೆ ಆಡಳಿತ ಪಕ್ಷ ಒಪ್ಪಲಿಲ್ಲ ಬದಲಿಗೆ ನಿಯಮ 69ರ ಅಡಿಯಲ್ಲಿ ಚರ್ಚಿಸಬೇಕೆಂದು ಅವರ ವಾದವಾಗಿತ್ತು ಈ ಎರಡು ನಿಯಮಗಳು ವಿಧಾನ ಸಭೆಯ ನಿಯಮಾವಳಿ ಪುಸ್ತಕದಲ್ಲಿ ಇವೆ. ರಾಜ್ಯ ಮತ್ತು ರಾಜ್ಯದ ಜನತೆಯ ಅತ್ಯಂತ ಗಂಭೀರ ಸಮಸ್ಯೆಗಳು ಮತ್ತು ಘಟನೆಗಳ ಬಗ್ಗೆ ಸರ್ಕಾರದ ಮೇಲೆ ಒತ್ತಾಯ ತಂದು ಕ್ರಮ ಜರುಗಿಸಲು ಸದನಕ್ಕಿರುವ ಪರಮಾಧಿಕಾರ ನಿಯಮ 69ರ ಅಡಿಯಲ್ಲಿ ಚರ್ಚಿಸಿದರೆ ಬರೀ ಚರ್ಚೆಯಾಗುತ್ತಿದೆಯೇ ಹೊರತು ತಪ್ಪಿತಸ್ಥ ಸ್ಥಾನದಲ್ಲಿರುವ ಮುಖ್ಯ ಮಂತ್ರಿಯ ಮೇಲೆ ಆಗಲಿ, ಸರ್ಕಾರದ ಮೇಲೆ ಆಗಲಿ ಕ್ರಮತೆಗೆದುಕೊಳ್ಳಲು ಸಾಧ್ಯವಿಲ್ಲ. ಆದರೆ ಯಡಿಯೂರಪ್ಪ ನಿಜವಾಗಿಯೂ ನಿಲುವಳಿ ಸೂಚನೆ ಅಡಿ ಚರ್ಚಿಸಲು ಒಪ್ಪದೇ ಹಠಹಿಡಿದದ್ದು ಯಾಕೆಂದರೆ ನಿಲುವಳಿ ಸೂಚನೆಯ ಅಡಿಯಲ್ಲಿ ಚರ್ಚಿಸಿದ್ದರೆ ಸರ್ಕಾರಕ್ಕೆ ಮತ್ತು ಮುಖ್ಯಮಂತ್ರಿಗಳಿಗೆ ಛೀಮಾರಿ ಹಾಕಬಹುದು ಮತ್ತು ವಿರೋಧ ಪಕ್ಷಗಳ ಬೇಡಿಕೆಯಾದ ಸರ್ಕಾರದ ರಾಜಿನಾಮೆ ಮತ್ತು ಮುಖ್ಯಮಂತ್ರಿಗಳ ರಾಜಿನಾಮೆ ಬೇಡಿಕೆಯನ್ನು ತಿರಸ್ಕರಿಸಿದರೆ ತಮ್ಮ ಬೇಡಿಕೆಯ ಬಗ್ಗೆ ಮತದಾನಕ್ಕೆ ಒತ್ತಾಯಿಸಬಹುದು, ಮತದಾನ ನಡೆದರೆ ಈಗಿನ ವಿಧಾನ ಸಭೆಯ ಪಕ್ಷಗಳ ಬಲಾಬಲವನ್ನು ಪರೀಕ್ಷಿಸಿದರೆ 224 ಸದಸ್ಯತ್ವದ ಸಭೆಯಲ್ಲಿ ಬಿ.ಜೆ.ಪಿ.ಯ ಬಲ 106 (ಅನರ್ಹಗೊಂಡವರು ಬಿಟ್ಟು) ಇದರ ಜೊತೆಗೆ ಯಡಿಯೂರಪ್ಪನವರಿಗೆ ತನ್ನ ಪಕ್ಷದ ಸದಸ್ಯರ ಮೇಲೆ ಸಂಪೂರ್ಣ ನಂಬಿಕೆಯೂ ಇಲ್ಲ, ಎಲ್ಲಿ ಅಧಿಕಾರ ಕಳೆದುಕೊಳ್ಳಬೇಕಾಗುತ್ತೊ ಎಂಬ ಹೆದರಿಕೆಯಿಂದ ನಿಲುವಳಿ ಸೂಚನೆಗೆ ಒಪ್ಪಲಿಲ್ಲ. ನಿಲುವಳಿ ಸೂಚನೆಯಾಗಲಿ ಅಥವಾ ನಿಯಮಾವಳಿಯಲ್ಲಿರುವ ಯಾವುದೇ ನಿಯಮದ ಅಡಿಯಲ್ಲಿ ಚರ್ಚೆ ಮಾಡಬೇಕೆಂಬುವುದು ವಿರೋಧ ಪಕ್ಷಗಳ ಮತ್ತು ಎಲ್ಲಾ ಸದನದ ಸದಸ್ಯರ ಹಕ್ಕು. ಅದನ್ನು ನಿರಾಕರಿಸುವ ಹಕ್ಕಾಗಲಿ ಅಡ್ಡಿಪಡಿಸುವ ಅಧಿಕಾರವಾಗಲಿ ಯಾರಿಗೂ ಇಲ್ಲ. ಆದರೆ ಈ ನಿಯಮಗಳು ವಿಷಯದ ಮತ್ತು ಪರಿಸ್ಥಿತಿಯ ಗಹನತೆಯನ್ನು ಅವಲಂಬಿಸಿರುತ್ತದೆ.

ಆದುದರಿಂದ ಇವತ್ತಿನ ಪರಿಸ್ಥಿತಿ ರಾಜ್ಯದಲ್ಲಿ

ಪುಟ 6 ಕ್ಕೆ




## ಹೊಣೆಗೇಡಿ ಮಾಧ್ಯಮಗಳ ಬೇಜವಾಬ್ದಾರಿ ವಿಶ್ಲೇಷಣೆಗಳು

ಈ ಅವಧಿಯಲ್ಲಿ ಮಾಧ್ಯಮಗಳ ವಿಶ್ಲೇಷಣೆಗಳನ್ನು ಅದರಲ್ಲೂ ಮುಖ್ಯವಾಗಿ ಎಲೆಕ್ಟ್ರಾನಿಕ್ ಮಾಧ್ಯಮಗಳ ವಿಶ್ಲೇಷಣೆಯನ್ನು ಗಮನಿಸಿದರೆ ಈ ಮಾಧ್ಯಮಗಳು ಜನರನ್ನು ಮತ್ತು ರಾಜ್ಯವನ್ನು ದಿಕ್ಕು ತಪ್ಪಿಸಿ ಅರಾಜಕತೆಯ ಕಡೆಗೆ ತೆಗೆದುಕೊಂಡು ಹೋಗುತ್ತಿದೆ ಎಂಬ ಭಾವನೆ ಖಂಡಿತ ಬರುತ್ತದೆ. ಸದನದ ಕಲಾಪಗಳು ನಡೆಯದೆ ಇದ್ದುದಕ್ಕೆ ಯಾವುದೇ ವಿಷಯಗಳು ಚರ್ಚೆಯಾಗದೆ ಕಡೆಗೆ ರಾಜ್ಯಪಾಲರ ಭಾಷಣ ಮಾಡಲಿಕ್ಕೆ ಅವಕಾಶ ಕೊಡದೇ ಇದ್ದುದಕ್ಕೆ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳೆರಡು ಸಮಾನವಾಗಿ ಜವಾಬ್ದಾರರೆಂದು ಇಬ್ಬರೂ ಬೇಜವಾಬ್ದಾರಿತನದಿಂದ ಸಾರ್ವಜನಿಕ ಹಣ ಪೋಲು ಮಾಡುತ್ತಿದ್ದಾರೆ ಮತ್ತು ಸಾರ್ವಜನಿಕರ ಮತ್ತು ರಾಜ್ಯದ ಹಿತವನ್ನು ಕಡೆಗಣಿಸಿದ್ದಾರೆಂದು ಮಾಧ್ಯಮಗಳು ವಿಶ್ಲೇಷಣೆ ಮಾಡುತ್ತವೆ.

ಸದನದ ಕಲಾಪಗಳನ್ನು ಸುಗಮವಾಗಿ ನಡೆಸುವುದು ಆಡಳಿತ ಪಕ್ಷದ ಪ್ರಥಮ ಕರ್ತವ್ಯ. ಸದನವನ್ನು ಕರೆಯುವುದು ಆಡಳಿತ ಪಕ್ಷವೋ ವಿರೋದ ಪಕ್ಷಗಳೋ? ಸದನವನ್ನು ಕರೆಯುವ ಅಧಿಕಾರ ಮತ್ತು ಜವಾಬ್ದಾರಿ ಇರುವುದು ಸರ್ಕಾರವನ್ನು ನಡೆಸುವ ಆಡಳಿತ ಪಕ್ಷದ್ದು-ಜನರ ಸಮಸ್ಯೆಗಳನ್ನು ಮತ್ತು ರಾಜ್ಯದ ಸಮಸ್ಯೆಗಳನ್ನು ಸದನದಲ್ಲಿ ಸರ್ಕಾರದ ಮುಂದಿಟ್ಟು ಪರಿಹಾರಕ್ಕೆ ಒತ್ತಾಯ ಮಾಡಿ ಜನಾಭಿಪ್ರಾಯ ರೂಪಿಸಿ ಹೋರಾಟ ಮಾಡುವುದು ಮತ್ತು ಸರ್ಕಾರಕ್ಕೆ ಕಿವಿ ಹಿಂಡುವ ಕೆಲಸ ಮಾಡಬೇಕಾಗಿರುವುದು ವಿರೋಧ ಪಕ್ಷಗಳ ಕೆಲಸ. ಆಡಳಿತ ಪಕ್ಷದ ಇಷ್ಟದಂತೆ ನಡೆದುಕೊಳ್ಳುವುದಕ್ಕೆ ಅಲ್ಲ, ವಿರೋಧ ಪಕ್ಷಗಳು ಇರಬೇಕಾಗಿರುವುದು. ○

# ಅನೈತಿಕ ಬಿಜೆಪಿ ಸರ್ಕಾರ ....

ಹೇಗಿದೆ? ಸ್ವತಃ ಈ ರಾಜ್ಯದ ಮುಖ್ಯಮಂತ್ರಿಯ ಮೇಲೆ ಸ್ವಜನಪಕ್ಷಪಾತ, ಕಾನೂನು ಬಾಹಿರ ಮತ್ತು ಅನೈತಿಕತೆ ಆಪಾದನೆಗಳು ದಾಖಲೆಯ ಸಮೇತ ರಾಜ್ಯದ ಜನತೆಯ ಮುಂದಿಟ್ಟಿದೆ. ಇದರ ಜೊತೆಗೆ ಎರಡು ವರ್ಷಗಳ ಹಿಂದೆ ಅತಿವೃಷ್ಟಿಗೆ ಸಿಲುಕಿ ಲಕ್ಷಾಂತರ ಜನರು ನಿರಾಶ್ರಿತರಾಗಿದ್ದಾರೆ ಇದುವರೆವಿಗೂ ಆ ಸಮಸ್ಯೆ ಪರಿಹಾರವಾಗಿಲ್ಲ ಮತ್ತು ಪುನರ್ ವಸತಿ ಕಲ್ಪಿಸಲು ಸಾರ್ವಜನಿಕರು ಮತ್ತು ಕೇಂದ್ರ ಸರ್ಕಾರದಿಂದ ಬಂದ 4500 ಕೋಟಿಗಳಿಗೆ ಇದುವರೆವಿಗೂ ಲೆಕ್ಕ ಕೊಟ್ಟಿಲ್ಲ, ಬಿ.ಜೆ.ಪಿ. ಪಕ್ಷದಲ್ಲಿನ ಭಿನ್ನಾಭಿಪ್ರಾಯಗಳು ಮತ್ತು ಗುಂಪುಗಾರಿಕೆಯಿಂದ ತತ್ತರಿಸಿ ಕಳೆದ ಮೂರು ತಿಂಗಳಿಂದ ಆಡಳಿತ ಯಂತ್ರಾಂಗ ಸಂಪೂರ್ಣ ಕುಸಿದಿದೆ ಮತ್ತು ವಾಸ್ತವವಾಗಿ ಆಡಳಿತವೇ ಇಲ್ಲ. ಈ ವರ್ಷದ ಅತಿವೃಷ್ಟಿಗೆ ಮತ್ತೆ 1500 ಜನ ಮನೆ ಮಠಗಳನ್ನು ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ. ನೂರಾರು ಕೋಟಿ ರೂಗಳ ಬೆಳೆ ಹಾನಿಯಾಗಿದೆ ಯಡಿಯೂರಪ್ಪ ಮುಖ್ಯಮಂತ್ರಿಯಾದ ಮೇಲೆ 360 ಜನ ರೈತರು ಸಾಲ ತೀರಿಸಲಾರದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ದಲಿತರ ಮೇಲಿನ ದೌರ್ಜನ್ಯಗಳು ಮುಂದುವರಿದಿವೆ. ಕೃಷಿ ಉತ್ಪಾದನೆ ಬೆಳವಣಿಗೆ ದರ, ಶೇ 1.6 ಗೆ ಕುಸಿದಿದೆ. ಕೈಗಾರಿಕಾ ಉತ್ಪಾದನೆ ಬೆಳವಣಿಗೆ ದರ ಶೇಕಡ 4.2ಕ್ಕೆ ಕುಸಿದಿದೆ. ಅಸಂಘಟಿತ ಕಾರ್ಮಿಕರ ಬದುಕು ಬೀದಿಪಾಲಾಗಿದೆ. ಇದರ ಜೊತೆಗೆ ಮುಖ್ಯಮಂತ್ರಿಗಳ ಜೊತೆಗೆ ಇಡೀ ಸರ್ಕಾರವೇ ಹಗರಣಗಳಲ್ಲಿ ಮುಳುಗಿದೆ. ಭೂಹಗರಣಗಳಲ್ಲಿ ಸಿಕ್ಕಿ ಹಾಕಿಕೊಂಡಿರುವ ಮಂತ್ರಿಯೊಬ್ಬರು ರಾಜಿನಾಮೆ ಕೊಟ್ಟಿದ್ದಾರೆ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಾಗಿದೆ. ವೈದ್ಯಕೀಯ ಶಿಕ್ಷಣ ಸಂಸ್ಥೆಗಳಲ್ಲಿನ ಭ್ರಷ್ಟಾಚಾರದಿಂದಾಗಿ ಆ ಇಲಾಖೆಯ ಮಂತ್ರಿ ರಾಜೀನಾಮೆ ಕೊಡಬೇಕಾಗಿ ಬಂತು.

**'ಸಾಲ'ದ ಸರ್ಕಾರ ಪ್ರಜಾಪ್ರಭುತ್ವಕ್ಕೆ ದ್ರೋಹ**

ಇನ್ನೊಂದು ಕಡೆ ಕೆ.ಐ.ಎ.ಡಿ.ಬಿ. ಭೂಹಗರಣಗಳು, ಇಷ್ಟೇ ಅಲ್ಲಾ ರಾಜ್ಯದ ಸಾಲ ಹೆಚ್ಚಾಗಿದೆ. ಯಡಿಯೂರಪ್ಪ ಮುಖ್ಯಮಂತ್ರಿ ಆದ ಮೇಲೆ 82 ಸಾವಿರ ಕೋಟಿ ಹೆಚ್ಚುವರಿ ಸಾಲವಾಗಿದೆ. ಸರ್ಕಾರ ಅಧಿಕ ದಿವಾಳಿ ಅಂಚಿಗೆ ಹೋಗಿ ತನ್ನ ಬಾಂಡುಗಳನ್ನು ಅಡವಿಟ್ಟು ಸಾಲ ಮಾಡಬೇಕಾದ ದುಸ್ಥಿತಿ ಸರ್ಕಾರಕ್ಕೆ ಬಂದಿದೆ. ಇಷ್ಟೆಲ್ಲಾ ಗಂಭೀರ ಆಪಾದನೆಗಳು, ಸಮಸ್ಯೆಗಳು ರಾಜ್ಯವನ್ನು ಕಿತ್ತು ತಿನ್ನುತ್ತಿದ್ದರೆ ಇದರ ಜವಾಬ್ದಾರಿಯನ್ನು ಯಾರು ಹೊರಬೇಕು? ಇದು ಎಲ್ಲಿ ಚರ್ಚೆಯಾಗಬೇಕು? 'ನಿಮಗೆ ತಾಕತ್ತಿದ್ದರೆ ವಿಧಾನ ಸಭೆಗೆ ಚರ್ಚೆಗೆ ಬನ್ನಿ ಎಂದು ಹೇಳಿ ನಿಲುವಳಿ ಸೂಚನೆಗೆ ಒಪ್ಪದೇ ಚರ್ಚೆಯನ್ನು ನಿರಾಕರಿಸಿದ ಬಿ.ಜೆ.ಪಿ. ಸರ್ಕಾರ ಮತ್ತು ಯಡಿಯೂರಪ್ಪ ಈಗ ವಿರೋಧಪಕ್ಷಗಳ ಮೇಲೆ ಗೂಬೆ ಕೂರಿಸುವ ಕೆಲಸದಲ್ಲಿ ತೊಡಗಿದ್ದಾರೆ, ಯಡಿಯೂರಪ್ಪನಿಗೆ ಮತ್ತು ಅವರ ಸರ್ಕಾರಕ್ಕೆ ಅವ್ಯವಹಾರದ ಭೀತಿಯಿಲ್ಲದಿದ್ದರೆ ಯಾವ ನಿಯಮದ ಅಡಿಯಲ್ಲಿ ಚರ್ಚೆ ನಡೆಸಿದರೂ ರಾಜ್ಯದ ಜನತೆಗೆ ಸತ್ಯಾಂಶ ಗೊತ್ತಾಗುತ್ತಿತ್ತು. ಆಗ ವಿರೋಧ ಪಕ್ಷಗಳು ಮತ್ತು ಆಡಳಿತ ಪಕ್ಷಗಳಲ್ಲಿ ಯಾರು ಪ್ರಾಮಾಣಿಕರು, ಯಾರು ಸುಳ್ಳು ಆರೋಪಗಳನ್ನು ಮಾಡಿದ್ದಾರೆಂಬುದು ತಿಳಿಯುತ್ತಿತ್ತು ಆ ರೀತಿಯ **ಚರ್ಚೆಗೆ ಅವಕಾಶವನ್ನೇ ನೀಡದ ಯಡಿಯೂರಪ್ಪನ ಬಂಡತನ, ಭ್ರಷ್ಟತನವನ್ನು ಮತ್ತು ತಾನು ಮಾಡಿದ ಕಾನೂನು ಬಾಹಿರ ಅನೈತಿಕ ಕೆಲಸಗಳನ್ನು ಮುಚ್ಚಿ ಹಾಕಲು ಸದನವನ್ನು ಉಪಯೋಗಿಸಿಕೊಳ್ಳುವುದು ಅವರು ಪ್ರಜಾಪ್ರಭುತ್ವ ಮತ್ತು ಸಂಸದೀಯ ವ್ಯವಸ್ಥೆಗೆ ಮಾಡಿದ ದ್ರೋಹ ಮತ್ತು ಅವಮಾನ ಹೌದು,** ವಿರೋಧ ಪಕ್ಷದವರು ಜವಾಬ್ದಾರಿಯಿಂದ ವರ್ತಿಸಬೇಕು ನಿಜ. ಆದರೆ ಯಡಿಯೂರಪ್ಪ ನವರ ನೇತೃತ್ವದ ಬಿ.ಜೆ.ಪಿ. ಸರ್ಕಾರ ಅಧಿಕಾರಕ್ಕೆ ಬಂದಾಗಲಿಂದಲೂ. ನಡೆದ ಯಾವುದೇ ಅಧಿವೇಶನದಲ್ಲಿ ಒಂದು ದಿವಸವೂ ಸಹ ಆರೋಗ್ಯಕರವಾದ ಚರ್ಚೆಗೆ ಮತ್ತು ಗಂಭೀರವಾದ ಚರ್ಚೆಗೆ ಅವಕಾಶವೇ ಕೊಡಲಿಲ್ಲ. ಯಾವುದೇ ಭ್ರಷ್ಟಾಚಾರವಾಗಲೀ ಕಾನೂನು ಬಾಹಿರ ಕೆಲಸಗಳನ್ನಾಗಲಿ ಅನೈತಿಕ ವ್ಯವಹಾರಗಳ ಬಗ್ಗೆ ಒಂದು ದಿವಸಕೂಡ ಅವರು ಒಪ್ಪಲಿಲ್ಲ. ಬದಲಿಗೆ ಯಡಿಯೂರಪ್ಪ ನಿರಂತರವಾಗಿ ಮಾಡುತ್ತಿರುವ ಕೆಲಸ ತನ್ನ ಮೇಲೆ ಬಂದ ಆಪಾದನೆಗಳು ಸರಿಯೋ ತಪ್ಪೋ ಎಂದು ಹೇಳುವ ಬದಲು ಆರೋಪ ಮಾಡಿದವರ ಮೇಲೆ ಪ್ರತಿ ಆರೋಪ ಮಾಡುವುದು ಎಲ್ಲದಕ್ಕೂ ನೀವು ಮಾಡಿಲ್ಲ ಎಂಬ ಭಂಡತನವನ್ನು ಪ್ರದರ್ಶಿಸುತ್ತಾ ಬಂದಿರುವಾಗ ಇನ್ನು ಚರ್ಚೆಮಾಡಿ ಏನು ಪ್ರಯೋಜನ ಎಂಬ ಪ್ರಶ್ನೆಯೂ ಇದರಲ್ಲಿದೆ. ಏನೇ ಆದರೂ ಸಂಸದೀಯ ವ್ಯವಸ್ಥೆಯಲ್ಲಿ ಸದನವನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗುವಂತಹ ಅವಕಾಶವನ್ನು ಮಾಡಿಕೊಡ ಬೇಕಾಗಿರುವುದು ಆಡಳಿತ ಪಕ್ಷದ ಜವಾಬ್ದಾರಿಯೋ ಹೊರತು ವಿರೋಧ ಪಕ್ಷಗಳದ್ದು ಅಲ್ಲ. ಅನಗತ್ಯ ಮತ್ತು ಅರ್ಥಹೀನ ಚರ್ಚೆಗಳಿಗೆ ವಿರೋದ ಪಕ್ಷಗಳು ಇಳಿಯಬಾರದೆನ್ನುವುದು ಸತ್ಯವಾದರೂ ಹೆಚ್ಚಿನ ಜವಾಬ್ದಾರಿ ಇರುವುದು ಆಡಳಿತ ಪಕ್ಷಕ್ಕೆ. ಏಕೆಂದರೆ ಜನ ಅವರಿಗೆ ಆಡಳಿತವನ್ನು ಮತ್ತು ಸದನವನ್ನು ನಡೆಸುವ ಅಧಿಕಾರ ಕೊಟ್ಟಿದ್ದಾರೆ, ವಿರೋಧ ಪಕ್ಷಗಳು ಆಡಳಿತ ಪಕ್ಷ ಹೇಳಿದ ರೀತಿಯಲ್ಲಿ ಕುಣಿಯ ಬೇಕಾಗಿಲ್ಲ. ಮತ್ತು ಆ ರೀತಿ ಆಡಳಿತ ಪಕ್ಷ ನಿರೀಕ್ಷಿಸಿದರೆ ಅದು ಪ್ರಜಾ ಪ್ರಭುತ್ವ ವಿರೋಧಿ ಮತ್ತು ಸಂಸದೀಯ ವ್ಯವಸ್ಥೆಗೆ ಮಾಡಿದ ಅವಹೇಳನವಾಗುತ್ತದೆ.

ಇವರೆಷ್ಟು ಪ್ರಜಾಪ್ರಭುತ್ವ ವಿರೋಧಿ ಪ್ಯಾಶಿಸ್ಟರೆಂದರೆ ಇವರು ಅಧಿಕಾರಕ್ಕೆ ಬಂದಾಗಲಿಂದಲೂ ಯಾವುದೇ ಶಾಸನವನ್ನು ಕೂಡ ಚರ್ಚೆಮಾಡಿ ಅಂಗೀಕರಿಸಲಿಲ್ಲ. ಬದಲಿಗೆ ಎಲ್ಲಾ ಕಾಯ್ದೆಗಳನ್ನು ಗದ್ದಲದಲ್ಲಿ ಮತ್ತು ಗೊಂದಲದಲ್ಲಿ ಅಥವಾ ವಿರೋಧ ಪಕ್ಷಗಳು ಸದನವನ್ನು ಬಹಿಷ್ಕರಿಸಿದಾಗಲೆ ಅಂಗೀಕಾರವಾಗಿದೆ. ಇದಕ್ಕಿಂತ ಶಾಸನಸಭೆಗೆ ಏನು ಅವಮಾನವಾಗಬೇಕು? ಕಾನೂನು ಬಾಹಿರವಾಗಿ ಮತ್ತು ಅಕ್ರಮವಾಗಿ ಸದನದಲ್ಲಿ ಬಹುಮತವನ್ನು ಸಾಬೀತು ಮಾಡಲು ಪ್ರಾರಂಭದಿಂದಲೂ ಇವರು ಮಾಡಿದ ಪ್ರಜಾಪ್ರಭುತ್ವ ವಿರೋಧಿ ಕೆಲಸಗಳಿಗೆ ಇಡೀ ದೇಶವೇ ಬೆಚ್ಚಿಬಿದ್ದಿದೆ. ಸಂಸದೀಯ ವ್ಯವಸ್ಥೆಯ ಇತಿಹಾಸದಲ್ಲಿಯೇ ಪ್ರಥಮವಾಗಿ ಬಿ.ಜೆ.ಪಿ. ಎಂಬ ಪ್ಯಾಸಿಸ್ಟ್ ಪಕ್ಷ ಪ್ರಜಾಪ್ರಭುತ್ವವನ್ನು ಅರ್ಥಹೀನ'ಗೊಳಿಸಿದೆ. ಈಗಲೂ ಅದೇ ಕೆಲಸವನ್ನು ಮುಂದುವರಿಸಿದೆ. ಈ ಕಾರಣದಿಂದಲೇ 11 ಜನ ಬಿ.ಜೆ.ಪಿ. ಶಾಸಕರನ್ನು ಮತ್ತು 6 ಜನ ಪಕ್ಷೇತ'ರ ಶಾಸಕರನ್ನು ಕಾನೂನು ಬಾಹಿರವಾಗಿ ಅನರ್ಹಗೊಳಿಸಿ ಆಗ ಸದನದಲ್ಲಿ ಗದ್ದಲ ಮಾಡಿ ಅನುಚಿತವಾಗಿ ವರ್ತಿಸಿದ್ದಾರೆಂದು ಇನ್ನೂ 15 ಜನ ಶಾಸಕರನ್ನು ವಜಾಗೊಳಿಸುವ ನಾಟಕವನ್ನಾಡುತ್ತಿದ್ದಾರೆ. ಎಲ್ಲಾ ನೀತಿ ನಿಯಮಗಳನ್ನು ಗಾಳಿಗೆ ತೂರಿ ವಿಧಾನ ಪರಿಷತ್ತಿನ ಉಪಸಭಾಪತಿಯನ್ನು ಪದಚ್ಯುತಿಗೊಳಿಸಿರುವುದು ನಾಚಿಕೆಗೇಡಿನ ಸಂಗತಿ. ಇದು ಅಪ್ಪಟ ಫ್ಯಾಸಿಸ್ಟ್ ಪಕ್ಷ ಎಂಬುದಕ್ಕೆ ನಿದರ್ಶನವಲ್ಲವೆ?

**ಸಿನಿಕತನದ ಸೃಷ್ಠಿ**

ಇಂತಹ ಪರಿಸ್ಥಿತಿಯಲ್ಲಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳರೆಡನ್ನು ಒಂದೇ ತಕ್ಕಡಿಯಲ್ಲಿ ಹಾಕಿ ತೂಗುವುದು ಬೇಜವಾಬ್ದಾರಿತನ ವಾಗುವುದಲ್ಲವೇ? ಇದನ್ನೇ ಅಲ್ಲವೆ ಕರ್ನಾಟಕದ ಬಹುತೇಕ ಮಾಧ್ಯಮಗಳು ಮಾಡುತ್ತಿರುವ ಕೆಲಸ. ರಾಜಕೀಯ ಪಕ್ಷಗಳು ಎಲ್ಲಾ ಒಂದೇ ಎಂದು ಈಗಾಗಲಿ ಯಾರೂ ಸರಿ ಇಲ್ಲವೆಂಬ ಸಿನಿಕತನವನ್ನು ಜನರಲ್ಲಿ ಉಂಟುಮಾಡಿದಂತೆ ಆಗುವುದಿಲ್ಲವೇ? ಇಂತಹ ಸಿನಿಕತನ ಈ ದೇಶದ ಮಧ್ಯಮ ವರ್ಗದಲ್ಲಿ ಬೆಳೆದು ಹೆಮ್ಮರವಾಗುತ್ತಿದೆ. ಪ್ರಜಾಪ್ರಭುತ್ವದ ಬಗ್ಗೆ ಜನರಲ್ಲಿ ಇಂತಹ ಸಿನಿಕತನ ಉಂಟಾದರೆ ಪ್ರಜಾಪ್ರಭುತ್ವ ಎಂತಹ ಘೋರ ಅಧಃಪತನಕ್ಕೆ ದಾಳಿಮಾಡಿಕೊಟ್ಟ ಹಾಗೆ ಅಲ್ಲವೇ ಪ್ರಜಾಪ್ರಭುತ್ವದ ಈ ಅಧಃಪತನವೇ ಅಲ್ಲವೇ? ಕರ್ನಾಟಕದಲ್ಲಿ ಕಾಣುತ್ತಿರುವುದು, ಸಿ.ಪಿ.ಐ(ಎಂ) ಪಕ್ಷ, ಬಿ.ಜೆ.ಪಿ. ಎಂಬುವುದು ಕೇವಲ ಒಂದು ರಾಜಕೀಯ ಪಕ್ಷವಲ್ಲ ಇದೋಂದು ಫ್ಯಾಸಿಸ್ಟ್ ಮಾದರಿ ಶಕ್ತಿ ಎಂದು ಪ್ರಾರಂಭದಿಂದಲು ಹೇಳುತ್ತಾ ಬಂದಿದೆ. ಫ್ಯಾಸಿಸ್ಟರು ಪ್ರಜಾಪ್ರಭುತ್ವವನ್ನು ಎಂದೂ ಗೌರವಿಸುವುದಿಲ್ಲ ಇದು ಬರಿ ಫ್ಯಾಸಿಸ್ಟ್ ಮಾತ್ರವಲ್ಲ ಇವರು ಮಾಹಾನ್ ಭ್ರಷ್ಟರುಕೂಡ. ಇಂತಹ ಬಿ.ಜೆ.ಪಿ. ಎಂಬ ಭ್ರಷ್ಟ, ಬಂಡ, ಲಜ್ಜೆಗೇಡಿ, ಜನವಿರೋಧಿ ಸರ್ಕಾರವನ್ನು ಕಿತ್ತೊಗೆಯುವುದೇ ರಾಜ್ಯದ ಇಂದಿನ ಪರಿಸ್ಥಿತಿಯಲ್ಲಿ ಎಲ್ಲರ ಪ್ರಥಮ ಕೆಲಸ ಇದಕ್ಕೆ ಪೂರಕವಾಗಿ ಜನರನ್ನು ಜಾಗೃತಿಗೊಳಿಸಬೇಕಾದ ಸಾಮಾಜಿಕ ಜವಾಬ್ದಾರಿಯನ್ನು ಮೆರೆಯಬೇಕಿದ್ದ ಮಾಧ್ಯಮಗಳು ಕೊಲೆಗಡುಕನನ್ನು ಮತ್ತು ಕೊಲೆಗೆ ಈಡಾದವನನ್ನು ಒಂದೇ ರೀತಿಯಲ್ಲಿ ನೋಡುವುದು

## ಈ ವಾರ...

ನಿಂತ ದ್ವೇಷದ ಪರಿಣಾಮಗಳೆನ್ನಲಾಗುತ್ತಿದೆ. ಅನೇಕರ ಇಂತಹುದೇ ಚಟುವಟಿಕೆಗಳಿಗೆ 'ರಾಜಕಾರಣ ಪ್ರವೇಶ' ಒಂದು 'ಆಶ್ರಯ ಯೋಜನೆ' ಇದ್ದಂತೆ.

ಇಲ್ಲಿ ಒಂದು ಗಂಭೀರ ಪ್ರಶ್ನೆಯನ್ನು ಎತ್ತಲಾಗುತ್ತಿದೆ. ರಾಜಕಾರಣದಲ್ಲಿ ಕ್ರಿಮಿನಲ್‌ಗಳ ಪ್ರವೇಶಿಸಬಹುದೇ? ಚುನಾವಣಾ ಸ್ಪರ್ಧೆಯ ಅವಕಾಶದಿಂದ ಅವರನ್ನು ಅನರ್ಹಗೊಳಿಸಬಹುದೇ ಎಂಬುದು? ಇದಕ್ಕೆ ಸೂಕ್ತ ಸಂವಿಧಾನ ತಿದ್ದುಪಡಿ ತರಬೇಕೆ? ಇಂತಹದ್ದೊಂದು ನಿರ್ಭಂಧ ಅಗತ್ಯವಿದೆ ಎನ್ನುತ್ತಾರೆ ಕೆಲವರು.

ಇಂತಹದ್ದೊಂದು ಸಲಹೆ ಮೇಲ್ನೋಟದಲ್ಲಿ ನೋಡಿದರೆ ಆಕರ್ಷಕವಾಗಿ ಕಾಣಬಲ್ಲದು. ಆದರೆ ಅಂತಹ ಕ್ರಿಮಿನಲ್‌ಗಳನ್ನು ಬೆಳೆಸುವ ವ್ಯವಸ್ಥೆ ಒಂದು ಕಡೆ, ಇನ್ನೊಂದೆಡೆ ಸ್ಪರ್ದೆಗೆ ನಿರ್ಬಂಧಿಸುವ ಇಂತಹದ್ದೊಂದು ಕಾನೂನು ತಂದರೆ ಆಘಾತಕಾರಿ ಏಟು ಬೀಳುವುದು ಈ ವ್ಯವಸ್ಥೆಯನ್ನು ಪ್ರಶ್ನಿಸಿ, ಬದಲಾವಣೆಗೆ ಹೋರಾಡುವ ಹೋರಾಟಗಾರರ ಮೇಲೆ, ಜನಪರ ಹೋರಾಟಗಾರರನ್ನು ಬಗ್ಗುಬಡಿಯಲು, ಚುನಾವಣೆಗೆ ಸ್ಪರ್ಧಿಸದಂತೆ ಅನರ್ಹಗೊಳಿಸಲು ಪ್ರಭುತ್ವವು ಪೊಲೀಸರನ್ನು ಬಳಸಿ, ಕ್ರಿಮಿನಲ್ ಪ್ರಕರಣಗಳನ್ನು ಹೂಡಿ ಸ್ಪರ್ಧೆಯ ಪ್ರಜಾಸತ್ತಾತ್ಮಕ ಅವಕಾಶವನ್ನೇ ಇಲ್ಲವಾಗಿಸಬಹುದು. ಈಗಲೂ ವ್ಯವಸ್ಥೆಯ ಕುತಂತ್ರದ ಜಾಲದಲ್ಲಿ ಇಂತಹ ಮೊಕದ್ದಮೆಗಳಲ್ಲಿ ಸಿಲುಕಿಸಲಾದವರು ಅಪಾರ. ಇತ್ತೀಚಿನ ಉದಾ : ಬಳ್ಳಾರಿ ರೈತರ ಭೂಮಿ ಉಳಿಸಲು, ಹಲವಾರು ಪ್ರಶ್ನೆಗಳನ್ನೆತ್ತಿ ಹೋರಾಟ ನಡೆಸುತ್ತಿರುವ ಸಿಪಿಐ(ಎಂ) ಮುಖಂಡ, ರೈತನಾಯಕ ಕಾಂ.ಶಿವಶಂಕರ್‌ರವರನ್ನು ಗಡಿಪಾರು ಮಾಡಲು ಜಿಲ್ಲಾಡಳಿತ ಹೊರಟಿದೆ. ಅವರನ್ನು ವೃತ್ತಿನಿರತ ಗೂಂಡಾ ಎಂದೂ ಬಿಂಬಿಸಲಾಗುತ್ತಿದೆ. ಇಂತಹ ನೂರಾರು, ಸಾವಿರಾರು ಉದಾಹರಣೆಗಳು ನಮ್ಮೆದುರಲ್ಲಿವೆ.

ಆದ್ದರಿಂದ ಕೆಲವು ಸಂಗತಿಗಳನ್ನು ಮಾತ್ರ ಮುಂದೆ ಮಾಡಿ ಪ್ರಜಾಪ್ರಭುತ್ವದ ಹಕ್ಕನ್ನೇ ದಮನಿಸಲು ತೊಡಗುವುದು ಸರಿಯಲ್ಲ.

ಹೀಗೊಂದು ವೇಳೆ ತಡೆಯಬೇಕಿದ್ದರೆ, ಸಮಾಜಕ್ಕೆ ಕಂಟಕವಾಗಿರುವ ಕ್ರಿಮಿನಲ್‌ಗಳಿಗೆ ರಾಜಕೀಯ ಪಕ್ಷಗಳು ಸ್ಪರ್ಧೆಗೆ ಅವಕಾಶ ನೀಡದಂತಾಗಬೇಕು. ನೀಡಬಾರದು, ಆದರೆ ಗೆಲುವನ್ನೇ ಮಾನದಂಡವನ್ನಾಗಿಸಿಕೊಂಡ ಪಕ್ಷಗಳಿಂದ ಇದನ್ನು ನಿರೀಕ್ಷಿಸುವುದು ಕಷ್ಟ. ಮುಖ್ಯವಾಗಿ ಜನತೆ ರಾಜಕೀಯ ಎಚ್ಚರದಿಂದ ಅಂತಹ ಕ್ರಿಮಿನಲ್ ಪೀಡಕರು ಅಧಿಕಾರ ಹಿಡಿಯದಂತೆ ತಿರಸ್ಕರಿಸುವುದೇ ಅತೀ ಅಗತ್ಯದ, ಅನಿವಾರ್ಯ ಮಾರ್ಗವೀಗ.

**ಜನಶಕ್ತಿ ವಿಳಾಸ-ಸಂಪರ್ಕಕ್ಕೆ ವಿವರ ಗಮನಿಸಿ**

'ಜನಶಕ್ತಿ'ಯ ಸಂಪರ್ಕ ವಿಳಾಸ ಬದಲಾಗಿದೆ. ವರದಿ, ಲೇಖನ, ಫೋಟೊ, ಚಂದಾ ಹಣ, ವಿಳಾಸ ಇತ್ಯಾದಿಗಳನ್ನು ಬದಲಾದ ವಿಳಾಸಕ್ಕೆ ಕಳಿಸಿ.

**ಕಛೇರಿ ವಿಳಾಸ**

'ಜನಶಕ್ತಿ' ಕನ್ನಡ ವಾರಪತ್ರಿಕೆ ಕಾರ್ಯಾಲಯ, ಇ.ಎಂ.ಎಸ್. ಭವನ, ನಂ.37/ಎ, 8ನೇ ಅಡ್ಡರಸ್ತೆ, ಪೋಸ್ಟ್ ಆಫೀಸ್ ಹತ್ತಿರ, ಮಹಾಲಕ್ಷ್ಮಿಲೇಔಟ್, ಬೆಂಗಳೂರು 560 086

ದೂರವಾಣಿ : 9448505789 (ಆರ್.ರಾಮಕೃಷ್ಣ), 94482220931 (ನಾಗರಾಜ್)

**ಪಿಡಿ ಸಂಪಾದಕೀಯ**

## ಲಾಲ್‌ಚೌಕಿನತ್ತ ಬಿಜೆಪಿ
# ಕೋಮುದ್ವೇಷ ಉದ್ರೇಕಿಸುವ ಪಯಣ

**ಹಿಂದುತ್ವ ಭಯೋತ್ಪಾದಕ ಜಾಲ ಬಯಲಾಗಿರುವ ಹಿನ್ನಲೆಯಲ್ಲಿ ಬಂದಿರುವ ನಮ್ಮ 62ನೇ ಗಣಂತ್ರದ ದಿನದಂದು ಆರೆಸ್ಸೆಸ್/ಬಿಜೆಪಿ ಮತ್ತೆ ಶ್ರೀನಗರದ ಲಾಲ್ ಚೌಕದಲ್ಲಿ ತ್ರಿವರ್ಣ ಬಾವುಟವನ್ನು ಹಾರಿಸುವ ಅಬ್ಬರಕ್ಕೆ ಮುಂದಾಗಿದೆ, ಕೋಮು ಅಸಂತುಷ್ಟಿಯನ್ನು ಉದ್ರೇಕಿಸುವುದೇ ಅವರ ರಾಜಕೀಯ ಪಯಣದ ವಾಹನವಾಗಿ ಬಿಟ್ಟಿದೆ. ಹೀಗಿರುವಾಗ ನಮ್ಮ ಗಣತಂತ್ರದ ಜಾತ್ಯಾತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ಎತ್ತಿ ಹಿಡಿಯುವಲ್ಲಿ ಮತ್ತು ಬಲಪಡಿಸುವಲ್ಲಿ ಯಾವ ರಾಜಿಗೂ ಅವಕಾಶವಿರಬಾರದು**


ಈ ಸಂಚಿಕೆ ಮುದ್ರಣಕ್ಕೆ ಹೋಗುತ್ತಿರುವ ವೇಳೆಗೆ ಬಿಜೆಪಿ ಕೋಮು ಭಾವೋದ್ವೇಗಗಳನ್ನು ಬಡಿದೆಬ್ಬಿಸುತ್ತಲೇ ಇದೆ. ಅದರ ಯುವ ವಿಭಾಗ ಕಾಶ್ಮೀರದ ರಾಜಧಾನಿ ಶ್ರೀನಗರದದ ಲಾಲ್‌ಚೌಕ್‌ನಲ್ಲಿ ಜನವರಿ 26ರಂದು ತ್ರಿವರ್ಣ ಬಾವುಟ ಹಾರಿಸುವುದಾಗಿ ಆಗ್ರಹಿಸುತ್ತಿದೆ. ಜಮ್ಮು-ಕಾಶ್ಮೀರ ಭಾರತದ ಅವಿಭಾಜ್ಯ ಅಂಗವಾಗಿರುವಾಗ ರಾಷ್ಟ್ರೀಯ ಧ್ವಜ ಹಾರಿಸಲು ಆಕ್ಷೇಪವೇಕೆ ಎಂಬ ಅವರ ತರ್ಕ ದಾರಿ ತಪ್ಪಿಸುವಂತದ್ದಷ್ಟೇ ಅಲ್ಲ. ಅದೇ ತರ್ಕವನ್ನು ಮುಂದುವರೆಸುವುದಾದರೆ ನಮ್ಮ ದೇಶದ ಒಂದೊಂದು ಅಂಗುಲ ನೆಲವೂ ಭಾರತದ ಅವಿಭಾಜ್ಯ ಅಂಗ. ಆದರೆ ಬಿಜೆಪಿ ಬೇರೆಲ್ಲೂ ಬಾವುಟ ಹಾರಿಸುವ ಆಗ್ರಹ ಮಾಡುತ್ತಿಲ್ಲ, ಲಾಲ್‌ಚೌಕದ ಮೇಲಷ್ಟೇ ಅದರ ಕಣ್ಣು. ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸಿ ಅದರ ರಾಜಕೀಯ ಲಾಭ ಗಿಟ್ಟಿಸುವುದೇ ಅದರ ಗುರಿ ಎಂಬುದು ಸ್ಪಷ್ಟ.

ಎನ್‌ಡಿಎ ಯಲ್ಲಿರುವ ಕೆಲವು ಬಿಜೆಪಿ ಮಿತ್ರ ಪಕ್ಷಗಳು ಕೂಡ ಇಂತಹ ಪ್ರಯತ್ನ ಕೈಬಿಡಿ ಎಂದು ಸಾರ್ವಜನಿಕವಾಗಿಯೇ ಕೇಳಿವೆ. ಕಾಶ್ಮೀರ ಕಣಿವೆಯಲ್ಲಿ ಜನಗಳು ಶ್ರಮಪಟ್ಟು ಗಳಿಸಿರುವ ಶಾಂತಿಯನ್ನು ಬಲಪಡಿಸುವ ಬದಲು ಅದನ್ನು ಇನ್ನಷ್ಟು ಹದಗೆಡಿಸಬಾರದು. ಆದರೆ ಬಿಜೆಪಿ ಕೋಮು ಅಸಂತುಷ್ಟಿಯನ್ನು ಈ ರೀತಿ ಉದ್ರೇಕಿಸುವುದನ್ನೇ ತನ್ನ ರಾಜಕೀಯ ಪಯಣಕ್ಕೆ ವಾಹನವಾಗಿ ಬಳಸುತ್ತಿದೆ.

ಬಹಳ ಹಿಂದೆ 1992ರಲ್ಲಿ ಆಗಷ್ಟೇ ಹೊಸದಾಗಿ ಬಿಜೆಪಿ ಅಧ್ಯಕ್ಷರಾಗಿ ಚುನಾಯಿತರಾಗಿದ್ದ ಮುರಳಿ ಮನೋಹರ ಜೋಷಿ ಹಿಡಿಯಷ್ಟು ಸ್ವಯಂಸೇವಕರು(ಇವರಲ್ಲಿ ನರೇಂದ್ರ ಮೋದಿ ಕೂಡಾ ಒಬ್ಬರಾಗಿದ್ದರು) ಮತ್ತು ಭದ್ರತಾ ಸಿಬ್ಬಂದಿಯ ಒಂದು ದೊಡ್ಡ ಪಡೆಯ ನಡುವೆ ನಿಂತು ರಾಷ್ಟ್ರೀಯ ಬಾವುಟ ಹಾರಿಸಿದ್ದರು, ಅಯೋಧ್ಯೆಗೆ ಕುಪ್ರಸಿದ್ಧ 'ರಥಯಾತ್ರೆ' ನಡೆಸಿ, ಹೋದಲ್ಲೆಲ್ಲ ಕೋಮುಗಲಭೆಗಳು ಮತ್ತು ರಕ್ತದೋಕುಳಿಯನ್ನು ಹರಿಸಿ, ಅಂತಿಮವಾಗಿ ಬಾಬ್ರಿ ಮಸೀದಿ ಧ್ವಂಸಕ್ಕೆ ಹಾದಿ ಮಾಡಿಕೊಟ್ಟ ತನ್ನ ಹಿಂದಿನ ಬಿಜೆಪಿ ಅಧ್ಯಕ್ಷ ಎಲ್.ಕೆ.ಅಡ್ವಾಣಿಯವರಿಗಿಂತ ತಾನು ಭಿನ್ನ ಎಂಬ ಮುದ್ರೆಯೊತ್ತುವುದಕ್ಕಾಗಿ.

### ಹಿಂದುತ್ವ ಭಯೋತ್ಪಾದನೆಯ ತಪ್ಪೊಪ್ಪಿಗೆ

ಜಮ್ಮು-ಕಾಶ್ಮೀರದಲ್ಲಿ ಆರೆಸ್ಸೆಸ್/ಬಿಜೆಪಿ ಪ್ರಕ್ಷುಬ್ಧ ನೀರಿನಲ್ಲಿ ಗಾಳ ಹಾಕುತ್ತಲೇ ಬಂದಿದೆ, ಆಮೂಲಕ ಕೋಮು ಧೃವೀಕರಣವನ್ನು ತೀಕ್ಷ್ಣಗೊಳಿಸಿ ಅದರ ರಾಜಕೀಯ ಲಾಭ ಗಿಟ್ಟಿಸಲು ಪ್ರಯತ್ನಿಸುತ್ತಲೇ ಬಂದಿದೆ. 2008ರಲ್ಲಿ ಅದು ಅಬ್ಬರದಿಂದ ನಡೆಸಿದ ಅಮರನಾಥ ಯಾತ್ರೆ ಎಂಬ ಚಳುವಳಿ ಅಲ್ಲಿ ಸಾಮಾನ್ಯ ಜನಜೀವನವನ್ನು ವ್ಯಾಪಕವಾಗಿ ಅಸ್ತವ್ಯಸ್ತಗೊಳಿಸಿತ್ತು, ಎರಡು ಧಾರ್ಮಿಕ ಸಮುದಾಯಗಳ ನಡುವೆ ಮತ್ತು ಜಮ್ಮು ಹಾಗೂ ಶ್ರೀನಗರ ಕಣಿವೆಯ ಜನಗಳ ನಡುವೆ ಪರಕೀಯ ಭಾವವನ್ನು ಬಲಗೊಳಿಸಿತ್ತು. ಈ ಆಂದೋಲನದಲ್ಲಿ ಪ್ರಮುಖ ಪಾತ್ರ ವಹಿಸಿದವನೆನ್ನಲಾದ ಒಬ್ಬ ಮುಖ್ಯ ಆರೆಸ್ಸೆಸ್ ಸಿಬ್ಬಂದಿ, ಇಂದ್ರೇಶ್ ಕುಮಾರ್ ಈಗ ಹಿಂದುತ್ವ ಭಯೋತ್ಪಾದಕ ಜಾಲವನ್ನು ಕುರಿತ ಸಿಬಿಐ ತನಿಖೆಗಳ ಕೇಂದ್ರ ಬಿಂದುವಾಗಿದ್ದಾನೆ. 2007ರಲ್ಲಿ ಒಂಭತ್ತು ಜನರನ್ನು ಬಲಿ ತೆಗೆದುಕೊಂಡ ಹೈದರಾಬಾದಿನ ಮಕ್ಕಾ ಮಸೀದಿ ಸ್ಫೋಟದ ಪ್ರಮುಖ ಆರೋಪಿಯಾಗಿ ಜೈಲಿನಲ್ಲಿರುವ ಅಸೀಮಾನಂದ ಮ್ಯಾಜಿಸ್ಟ್ರೇಟರ ಮುಂದೆ ಮಾಡಿಕೊಂಡಿದ್ದಾನೆ. ಎನ್ನಲಾದ ತಪ್ಪೊಪ್ಪಿಗೆಯಲ್ಲಿ ಈ ಇಂದ್ರೇಶ್ ಕುಮಾರನ ಹೆಸರಿದೆ. ನಿರೀಕ್ಷಿಸಿದಂತೆಯೇ ಆರೆಸ್ಸೆಸ್/ಬಿಜೆಪಿ ಈ ತಪ್ಪೊಪ್ಪಿಗೆ ಬಲವಂತದಿಂದ ಪಡೆದುಕೊಂಡದ್ದು ಎಂದು ದೂಷಿಸಿದೆ.


ಮಾಲೆಗಾಂವ್ ಬಾಂಬ್ ಸ್ಫೋಟ

ಈ ತಪ್ಪೊಪ್ಪಿಗೆ ಮಾಧ್ಯಮಗಳಲ್ಲಿ ವ್ಯಾಪಕವಾಗಿ ವರದಿಯಾಗಿದೆ. ಈ ಮೂಲಕ ಆರೆಸ್ಸೆಸ್ ಸಂಪರ್ಕವಿರುವ ಅಸೀಮಾನಂದ ಮುಂತಾದ ಕೆಲವು ಹಿಂದುತ್ವ ಮುಖಂಡರು ಭಯೋತ್ಪಾದಕ ದಾಳಿಗಳ ಯೋಜನೆ ಮತ್ತು ಜಾರಿಯಲ್ಲಿ ಶಾಮೀಲಾಗಿರುವ ಸ್ಫೋಟಕ ಕಥೆ ಬಯಲಾಗಿದೆ. ಈ ದಾಳಿಗಳಲ್ಲಿ ಮೇ 18, 2007ರ ಹೈದರಾಬಾದ್ ಭಯೋತ್ಪಾದಕ ಸ್ಫೋಟಗಳು, ಅಜ್ಮೇರಿನಲ್ಲಿ ನವಂಬರ್ 11, 2007ರಂದು ದರ್ಗಾದ ಮೇಲಿನ ಭಯೋತ್ಪಾದಕ ದಾಳಿ, ಮಾಲೆಗಾಂವ್‌ನಲ್ಲಿ ಮೊದಲು ಸಪ್ಟಂಬರ್ 8, 2006ರಂದು ಈದ್ಗಾದಲ್ಲಿ, ಮತ್ತೆ ಸಪ್ಟಂಬರ್ 29, 2008ರಂದು ದಾಳಿ ಮತ್ತು ಫೆಬ್ರುವರಿ 18, 2007ರಂದು ಸಂಜೌತಾ ಎಕ್ಸ್‌ಪ್ರೆಸ್‌ನ ಬೋಗಿಗಳಲ್ಲಿ ನಡೆದ ಸ್ಫೋಟಗಳೂ ಸೇರಿವೆ.

ಈ ಮೊದಲೂ ನಾವು ಈ ಪತ್ರಿಕೆಯಲ್ಲಿ ಹಿಂದುತ್ವ ಭಯೋತ್ಪಾದಕ ಜಾಲದ ಕ್ರಿಯಾವಿಧಾನವನ್ನು ಮತ್ತೆ-ಮತ್ತೆ ಬಯಲು ಮಾಡಿದ್ದೇವೆ. ಹಾಗೆ ಮಾಡುವಾಗ, ಭಾರತದಲ್ಲಿ ಭಯೋತ್ಪಾದನೆ ಯಾವುದೇ ಧರ್ಮಕ್ಕೇ ವಿಶೇಷವಾದುದೇನೂ ಅಲ್ಲ, ಭಯೋತ್ಪಾದನೆ ಯಾವುದೇ ರೀತಿಯದ್ದಾಗಲಿ ಅದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ, ದೇಶ ಇಂತಹ ಭಯೋತ್ಪಾದನೆಯನ್ನು ಎಳ್ಳಷ್ಟೂ ಸಹಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಐಕ್ಯತೆಯಿಂದ ಪ್ರದರ್ಶಿಸಬೇಕು ಎಂದು ಹೇಳಿಕೊಂಡು ಬಂದಿದ್ದೇವೆ.

### ಇವರೂ ನಮ್ಮ ಗಣತಂತ್ರದ ಮಕ್ಕಳು

ಇಂತಹ ಭಯೋತ್ಪಾದಕ ದಾಳಿಗಳು ನಡೆದಾಗ ಸಾಮಾನ್ಯವಾಗಿ ಮುಸ್ಲಿಂ ಯುವಕರನ್ನು ಸುತ್ತುವರೆಯಲಾಗುತ್ತದೆ. ಈ ನಾಲ್ಕು ಕುಕೃತ್ಯಗಳು ನಡೆದಾಗಲೂ ಬಂಧಿತರಾದ ಹಲವು ಮಂದಿ, ಇವುಗಳಲ್ಲಿ ಹಿಂದುತ್ವ ಭಯೋತ್ಪಾದಕ ಜಾಲದ ಪಾತ್ರ ಬಯಲಾದ ನಂತರವೂ ಇನ್ನೂ ಜೈಲುಗಳಲ್ಲಿ ಕೊಳೆಯುತ್ತಿದ್ದಾರೆ. ಅವರ ವಿರುದ್ಧ ಬಾಕಿಯಿರುವ ನ್ಯಾಯಾಂಗ ಕಲಾಪಗಳನ್ನು ತ್ವರಿತಗೊಳಿಸಿ, ಅವರನ್ನು ಕಾನೂನು ಮತ್ತು ನ್ಯಾಯದ ನೀತಿಗಳ ಪ್ರಕಾರ ಬಿಡುಗಡೆಗೊಳಿಸಬೇಕಾಗಿದೆ. ಇತ್ತೀಚೆಗೆ ಸುಪ್ರಿಂ ಕೋರ್ಟ್ ಒಬ್ಬ ಮಾವೋವಾದಿಯ ಎನ್‌ಕೌಂಟರ್ ಕೊಲೆಯ ಆಪಾದನೆಯ ನ್ಯಾಯಾಂಗ ತನಿಖೆ ನಡೆಸಬೇಕೆಂದು ಕೇಳಿರುವ ಅರ್ಜಿಗಳ ವಿಚಾರಣೆಯ ವೇಳೆಗೆ 'ನಮ್ಮ ಗಣತಂತ್ರ ತನ್ನದೇ ಮಕ್ಕಳ ಕೊಲೆಯ ಕಳಂಕ ಹೊರಲು ಸಾಧ್ಯವಿಲ್ಲ' ಎಂದು ಟಿಪ್ಪಣಿ ಮಾಡಿದೆ. ನಮ್ಮ ಜಾತ್ಯಾತೀತ ಪ್ರಜಾಸತ್ತಾತ್ಮಕ ಸಂವಿಧಾನದ ಪಾಲಕನಾಗಿರುವ ಸರ್ವೋಚ್ಚ ನ್ಯಾಯಾಲಯ, 'ನಮ್ಮ ಮಕ್ಕಳು' ಎಂದು ಹೇಳುವಾಗ ಖಂಡಿತವಾಗಿಯೂ ಜಾತಿ, ಧರ್ಮ, ಪಂಥಗಳ ಭೇದಭಾವವಿಲ್ಲದೆ ಎಲ್ಲ ಮಕ್ಕಳು ಎಂದೇ ಅರ್ಥ ತಾನೇ. ಈ ಭಾವನೆಗೆ ಅನುಗುಣವಾಗಿ ಈ ಭಯೋತ್ಪಾದಕ ಕೃತ್ಯಗಳಲ್ಲಿ ಭಾಗಿಯಾಗಿರುವ ಸಂದೇಹದ ಮೇಲೆ ಬಂಧಿತರಾಗಿರುವ ಎಲ್ಲರಿಗೂ ತುರ್ತಾಗಿ ನ್ಯಾಯ ಒದಗಿಸಬೇಕಾಗಿದೆ.

ನಮ್ಮ ಗಣತಂತ್ರದ ಜಾತ್ಯಾತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ಎತ್ತಿ ಹಿಡಿಯುವಲ್ಲಿ ಮತ್ತು ಬಲಪಡಿಸುವಲ್ಲಿ ಯಾವ ರಾಜಿಗೂ ಅವಕಾಶವಿರಬಾರದು. ಈ 62ನೇ ಗಣತಂತ್ರ ದಿನದಂದು ಈ ನಿರ್ಧಾರವನ್ನು ದ್ವಿಗುಣಗೊಳಿಸುವ ಘೋಷಣೆ ಮಾಡೋಣ.

---

**ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಫೆಬ್ರವರಿ 3 ರಿಂದ 9 ರಾಷ್ಟ್ರಾದ್ಯಂತ ಪ್ರಚಾರ ಪ್ರಕ್ಷೋಭೆ ಮುತ್ತಿಗೆ**

## ಫೆಬ್ರವರಿ 9, 2011 ರಂದು ಪಾರ್ಲಿಮೆಂಟ್ ಚಲೋ

**ಜೆಡಿ(ಎಸ್), ಸಿಪಿಐ(ಎಂ), ಸಿಪಿಐ, ಆರ್‌ಎಸ್‌ಪಿ, ಫಾರ್ವರ್ಡ್ ಬ್ಲಾಕ್, ಟಿಡಿಪಿ, ಬಿಜೆಡಿ, ಎಐಎಡಿಎಂಕೆ, ಆರ್‌ಎಲ್‌ಡಿ ಗಳ ಜಂಟಿ ಕರೆ**

ಅಗತ್ಯ ವಸ್ತುಗಳಾದ ಆಹಾರಧಾನ್ಯಗಳು ಹಾಗೂ ತರಕಾರಿ ಮತ್ತಿತರ ಜನರ ಜೀವನಾವಶ್ಯಕತೆಗಳ ಬೆಲೆ ದಿನೇ ದಿನೇ ಏರುತ್ತಲೇ ಹೊರಟಿದೆ. ಬೆಲೆ ನಿಯಂತ್ರಣಕ್ಕೆ ಕ್ರಮವಹಿಸಬೇಕಾದ ಕೇಂದ್ರ ಯುಪಿಎ ಸರ್ಕಾರ ತನ್ನ ನೀತಿಗಳ ಮೂಲಕ ಬೆಲೆ ಏರಿಕೆಯ ಬೆಂಕಿಗೆ ತುಪ್ಪ ಸುರಿಯುತ್ತ ಇದೆ.

ಈ ಹಿನ್ನೆಲೆಯಲ್ಲಿ ನವದೆಹಲಿಯಲ್ಲಿ ಸಭೆ ಸೇರಿದ್ದ ಯುಪಿಎ ಯೇತರ, ಎನ್.ಡಿ.ಎ. ಯೇತರ 9 ಜಾತ್ಯಾತೀತ ವಿರೋಧಪಕ್ಷಗಳು ಈ ಕೆಳಗಿನ ಬೇಡಿಕೆ ಆಧಾರದಲ್ಲಿ ಫೆಬ್ರವರಿ 3 ರಿಂದ 9 ರವರೆಗೆ ರಾಷ್ಟ್ರಾದ್ಯಂತ ಬೆಲೆ ಏರಿಕೆಗೆ ಕಾರಣವಾದ ಯುಪಿಎ ನೀತಿಗಳ ಬದಲಾವಣೆಗೆ ಆಗ್ರಹಿಸಿ ಪ್ರಚಾರ, ಪ್ರಕ್ಷೋಭೆ ಹಾಗೂ ಕೇಂದ್ರ ಸರ್ಕಾರಿ ಕಛೇರಿಗಳ ಮುತ್ತಿಗೆ ಹೋರಾಟಕ್ಕೆ ಕರೆ ನೀಡಿವೆ. ಈ ಪ್ರಚಾರ, ಪ್ರಕ್ಷೋಭೆಯ ಅಂತ್ಯದಲ್ಲಿ ಫೆಬ್ರವರಿ 9 ರಂದು ಪಾರ್ಲಿಮೆಂಟ್ ಚಲೋ ಹೋರಾಟಕ್ಕೂ ಕರೆ ನೀಡಿವೆ.

**ಬೇಡಿಕೆಗಳು**

- ಅಗತ್ಯ ವಸ್ತುಗಳಲ್ಲಿ ವಾಯಿದಾ ವ್ಯಾಪಾರವನ್ನು ನಿಷೇಧಿಸಬೇಕು.
- ಪಡಿತರ ಸೌಲಭ್ಯವನ್ನು ಸಾರ್ವತ್ರಿಕರಣಗೊಳಿಸಬೇಕು ಎಫ್‌ಸಿಐ ಗೋದಾಮುಗಳಲ್ಲಿ ಸಂಗ್ರಹವಾಗಿರುವ ಹೆಚ್ಚುವರಿ ಆಹಾರಧಾನ್ಯವನ್ನು ಬಿಪಿಎಲ್ ದರಗಳಲ್ಲಿ ಜನರಿಗೆ ವಿತರಿಸಬೇಕು.
- ಕಾಳಸಂತೆಕೋರರ ಅಕ್ರಮ ದಾಸ್ತಾನು ಸಂಗ್ರಹದ ವಿರುದ್ಧ ಕಠಿಣ ಕ್ರಮವಹಿಸಬೇಕು.
- ರೈತರ ಬೆಳೆಗೆ ಸೂಕ್ತ ಬೆಂಬಲ ಬೆಲೆ ಮತ್ತು ಕೃಷಿ-ಪೂರಕ ಸೌಲಭ್ಯಗಳಿಗೆ ಸರ್ಕಾರ ಅಗತ್ಯ ಬೆಂಬಲ ನೀಡಿ ಕೃಷಿ ಉತ್ಪನ್ನ ಹೆಚ್ಚಳಕ್ಕೆ ಕ್ರಮ ವಹಿಸಬೇಕು.
- ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ನಿಯಂತ್ರಣ ತೆಗೆದುಹಾಕಿರುವ ಕ್ರಮವನ್ನು ರದ್ದು ಮಾಡಬೇಕು. ಬಜೆಟ್‌ನಲ್ಲಿ ಪೆಟ್ರೋಲಿಯಂ ಬೆಲೆ ಏರಿಕೆ ಮಾಡಿರುವುದನ್ನು ರದ್ದುಪಡಿಸ ಬೇಕು ಹಾಗೂ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತೆರಿಗೆಗಳನ್ನು ಕಡಿತ ಮಾಡಿ ನ್ಯಾಯಬದ್ಧಗೊಳಿಸಬೇಕು.
- ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ ಅವಕಾಶವನ್ನು ನೀಡಬಾರದು.

ದೇಶದಲ್ಲಿ ಜಾರಿಯಾದ 2 ದಶಕಗಳ ಜಾಗತೀಕರಣ ಉದಾರೀಕರಣವು ಭ್ರಷ್ಟಾಚಾರದ ಪರಿಕಲ್ಪನೆ ಮತ್ತು ಸ್ವರೂಪವನ್ನೇ ಬದಲಿಸಿದೆ. ಏನದು. ಓದಿ ಪ್ರಕಾಶ್ ಕಾರಟ್‌ರವರ ಲೇಖನ

# ಬೃಹತ್ ಕಂಪನಿಗಳು ಭ್ರಷ್ಟಾಚಾರ ಮತ್ತು ರಾಜಕಾರಣದ ನಂಟು

ಪ್ರಕಾಶ್‌ಕಾರಟ್

ಸಂಸತ್ತಿನ ಚಳಿಗಾಲದ ಅಧಿವೇಶನ ಯಾವುದೇ ಕಲಾಪಗಳಿಲ್ಲದೆ ಮುಕ್ತಾಯಗೊಂಡಿದೆ. 2ಜಿ ಸ್ಪೆಕ್ಟ್ರಂ ಹಗರಣಕ್ಕೆ ಸಂಬಂಧಿಸಿದಂತೆ ಜಂಟಿ ಸಂಸದೀಯ ಸಮಿತಿ ರಚನೆಗೆ ಕೇಂದ್ರದ ಯುಪಿಎ ಸರ್ಕಾರ ಒಪ್ಪದಿರುವುದೇ ಇದಕ್ಕೆ ಪ್ರಮುಖ ಕಾರಣ.

ಕಂಟ್ರೋಲರ್ ಆಂಡ್ ಆಡಿಟರ್ ಜನರಲ್ (ಸಿಎಜಿ) ಸಲ್ಲಿಸಿದ ವರದಿಯ ಪ್ರಕಾರ 2ಜಿ ಸ್ಪೆಕ್ಟ್ರಂ ಅಥವಾ ಟೆಲಿಕಾಂ ತರಂಗಾಂತರಂಗ ಹಗರಣದಲ್ಲಿ ದೇಶದ ಬೊಕ್ಕಸಕ್ಕೆ 1.76 ಲಕ್ಷ ಕೋಟಿ ರೂಪಾಯಿಗಳ ನಷ್ಟವನ್ನು ಅಂದಾಜಿಸಲಾಗಿದೆ. ಎ. ರಾಜಾ ಅಧಿಕಾರಾವಧಿಯಲ್ಲಿ ಟೆಲಿಕಾಂ ಸಚಿವಾಲಯದಿಂದ ಖಾಸಗಿ ಕಂಪೆನಿಗಳಿಗೆ ಲೈಸನ್ಸ್ ಮತ್ತು ತರಂಗಾಂತರಂಗ ನೀಡಿಕೆಯಲ್ಲಿ ಈ ಬೃಹತ್ ಹಗರಣ ನಡೆದಿದೆ. ಸ್ವತಂತ್ರ ಭಾರತದ ಇತಿಹಾಸದಲ್ಲಿ ಸರ್ಕಾರವೇ ಭಾಗಿಯಾಗಿರುವ ಅತಿ ದೊಡ್ಡ ಹಗರಣ ಇದಾಗಿದೆ. ಇಷ್ಟಾದರೂ ಕಾಂಗ್ರೆಸ್ ಪಕ್ಷವಾಗಲಿ, ಅದು ಮುನ್ನಡೆಸುತ್ತಿರುವ ಯುಪಿಎ ಸರ್ಕಾರವಾಗಲೀ ಈ ಹಗರಣದ ತನಿಖೆಗೆ ವಿಶೇಷ ಸಮಿತಿಯನ್ನು ರಚಿಸುವ ನಿಟ್ಟಿನಲ್ಲಿ ಸಂಸತ್ತಿನಲ್ಲಿ ಚರ್ಚೆಗೆ ಮುಂದಾಗುತ್ತಿಲ್ಲ.

## ವ್ಯವಸ್ಥೆಯಲ್ಲಿನ ಲೋಪ

ಕಳೆದ ಕೆಲವು ತಿಂಗಳಿನಿಂದ ಕಾಂಗ್ರೆಸ್ ನೇತೃತ್ವದ ಸರ್ಕಾರ ಭ್ರಷ್ಟಾಚಾರ ಮತ್ತು ಹಗರಣಗಳ ಸರಣಿ ಆರೋಪಗಳಿಗೆ ತುತ್ತಾಗುತ್ತಿದೆ. ಕಾಮನ್‌ವೆಲ್ತ್ ಗೇಮ್ಸ್‌ಗೆ ಸಂಬಂಧಪಟ್ಟಂತೆ ನಡೆದ ಹಗರಣವೂ ಅಷ್ಟೇ ಆಘಾತಕಾರಿಯಾಗಿದೆ. ಆದರೆ, ಸರ್ಕಾರದ ಇದರ ಗಂಭೀರತೆಯನ್ನು ತಗ್ಗಿಸುವ ಪ್ರಯತ್ನ ನಡೆಸುತ್ತಿದೆ. ಇದು ಕೇವಲ ಸಂಘಟನಾ ಸಮಿತಿಗೆ ಸಂಬಂಧಪಟ್ಟಂತೆ ನಡೆದ ಅವ್ಯವಹಾರ ಎಂಬಂತೆ ಈ ಹಗರಣವನ್ನು ಬಿಂಬಿಸಲು ಮತ್ತು ಅದರ ಗಂಭೀರತೆಯನ್ನು ಸೀಮಿತಪಡಿಸಲು ಹರಸಾಹಸ ಮಾಡುತ್ತಿದೆ. ಸಾರ್ವಜನಿಕ ಹಣಕಾಸಿನ ದುರುಪಯೋಗದ ಹಗರಣದಲ್ಲಿ ಇದು ಕೇವಲ ಒಂದು ಅತಿ ಸಣ್ಣ ಭಾಗ.


ಮುಂಬೈನ ಆದರ್ಶ್ ಹೌಸಿಂಗ್ ಹಗರಣ, ಮೊದಲ ಯುಪಿಎ ಸರ್ಕಾರದ ಅವಧಿಯಲ್ಲಿ ದಕ್ಷಿಣ ಆಫ್ರಿಕಾದ ಕೆಲ ದೇಶಗಳಿಗೆ ಅಕ್ಕಿ ರಫ್ತು ವ್ಯವಹಾರದಲ್ಲಿ ನಡೆದ ಭ್ರಷ್ಟಾಚಾರಗಳು.... ಇವೇ ಮುಂತಾದ ಪ್ರಕರಣಗಳು ಸರ್ಕಾರದ ಎಲ್ಲ ಹಂತದಲ್ಲೂ ವ್ಯಾಪಕ ಭ್ರಷ್ಟಾಚಾರ, ಅವ್ಯವಹಾರಗಳು ನಡೆಯುತ್ತಿದೆ ಎಂಬುದಕ್ಕೆ ಸಣ್ಣ ಉದಾಹರಣೆಗಳಷ್ಟೇ.



ಕೆಲವೇ ಕೆಲವು ರಾಜಕಾರಣಿಗಳು ಅಥವಾ ಒಂದೆರಡು ಕಾರ್ಪೊರೇಟ್ ಸಂಸ್ಥೆಗಳ ಭಾಗವಹಿಸುವಿಕೆಯಲ್ಲಿ ಇಂತಹ ಹಗರಣಗಳು ನಡೆದಿವೆ ಎಂಬ ದೃಷ್ಟಿಕೋನದಲ್ಲಿ ನೋಡಿದರೆ ಅಥವಾ ತಿಳಿದುಕೊಂಡರೆ ಅದು ಪ್ರಮಾದವಾದೀತು. ಆದರೆ, ಈ ಸಮಸ್ಯೆ ಮೇಲ್ನೋಟಕ್ಕೆ ಕಾಣಿಸುವಷ್ಟು ಸಣ್ಣ ಪ್ರಮಾಣದ್ದಾಗಿಲ್ಲ. ಇದರ ಬೇರು ವ್ಯವಸ್ಥಿತವಾಗಿ ಹಾಗೂ ಆಳವಾಗಿ ಬೇರುಬಿಟ್ಟಿದೆ. ಉನ್ನತ ಸ್ಥಾನಗಳಲ್ಲಿ ಕಂಡುಬಂದಿರುವ ಇಂತಹ ಭ್ರಷ್ಟಾಚಾರಗಳು ಹೊಸ ಪಿಡುಗಾಗಿದೆ ಎಂಬುದರಲ್ಲಿ ಸಂಶಯವಿಲ್ಲ. 1990ರಲ್ಲಿ ಜಾಗತೀಕರಣ ಪ್ರಕ್ರಿಯೆ ಆರಂಭವಾದ ಬಳಿಕ ನಿಧಾನವಾಗಿ ಬೆಳೆಯುತ್ತಿರುವ ಪ್ರವೃತ್ತಿಯಾಗಿದೆ.



ಆಹಾ! 2ಜಿ ಮೈತ್ರಿ



ಹವಾಲಾ ಹಗರಣದಲ್ಲಿ ಸಿಲುಕಿದ್ದ ಅಡ್ವಾಣಿ

ಜಾಗತೀಕರಣದ ಶಖೆಯಲ್ಲಿ ಭ್ರಷ್ಟಾಚಾರದ ಸ್ವರೂಪದ ಬಗ್ಗೆ ಹೇಳಬೇಕೆಂದರೆ, ಮಾರ್ಚ್ 2001ರ ಪೀಪಲ್ಸ್ ಡೆಮಾಕ್ರಸಿಯಲ್ಲಿ ಈ ಬಗ್ಗೆ ನಾನು ಒಂದು ಲೇಖನವನ್ನು ಬರೆದಿದ್ದೇನೆ. ಆ ಲೇಖನದಲ್ಲಿ ಪ್ರಸ್ತಾಪಿಸಿದ ಕೆಲವು ಅಂಶಗಳನ್ನು ಈಗ ಮತ್ತೆ ಉಲ್ಲೇಖಿಸುತ್ತಿದ್ದೇನೆ.


"ಜಾಗತೀಕರಣದ ಮುನ್ನ ಮತ್ತು ಆ ಬಳಿಕದ ಭ್ರಷ್ಟಾಚಾರದ ಸ್ವರೂಪದಲ್ಲಿನ ಪ್ರಮುಖ ವ್ಯತ್ಯಾಸಗಳೇನು ಎಂಬುದನ್ನು ನೋಡೋಣ. ಜಾಗತೀಕರಣ ಪೂರ್ವ ಶಖೆಯಲ್ಲಿ, ಅದರಲ್ಲೂ ಮುಖ್ಯವಾಗಿ 80ರ ದಶಕದ ಮಧ್ಯಭಾಗದ ವರೆಗೆ ಆಡಳಿತದ ಉನ್ನತ ಮಟ್ಟದದಲ್ಲಿ ಬೃಹತ್ ಕಂಪೆನಿಗಳಿಂದ ಲಂಚ ಸ್ವೀಕರಿಸಿ ಅವರಿಗೆ ಬೇಕಾದ ಕೆಲಸ ಮಾಡುವ ಹಂತಕ್ಕೆ ಭ್ರಷ್ಟಾಚಾರ ತಲುಪಿತ್ತು. ಲೈಸೆನ್ಸ್ ನೀಡುವುದು ಮತ್ತು ನಿಯಮಗಳನ್ನು ಗಾಳಿಗೆ ತೂರಿ ಕೆಲ ಅನುಕೂಲಗಳನ್ನು ಮಾಡಿಕೊಡಲಾಗುತ್ತಿತ್ತು. ಇಂತಹ ಭ್ರಷ್ಟಾಚಾರ ಪ್ರಕರಣ ಒಂದು ಕಂಪೆನಿ, ಅದರ ಅಧಿಕಾರಿಗಳು ಮತ್ತು ಸಂಬಂಧಿತ ಸಚಿವಾಲಯದ ಅಧಿಕಾರಿ ಮತ್ತು ಸಚಿವರ ನಡುವಿನ ಒಂದು ನಿರ್ದಿಷ್ಟ ಯೋಜನೆ ಹಾಗೂ ನಿಯಮಾವಳಿಗೆ ಸಂಬಂಧಪಟ್ಟ ಅವ್ಯವಹಾರ ಎಂಬ ಮಟ್ಟಿಗೆ ಸೀಮಿತವಾಗಿತ್ತು. ಆದರೆ ಈಗ ಜಾಗತೀಕರಣದಿಂದಾಗಿ ನಿಯಮಗಳನ್ನು ಸಡಿಲು ಮಾಡಲಾಗುತ್ತಿದೆ ಮತ್ತು ಇಡೀ ನೀತಿಗಳನ್ನು ಒಟ್ಟಾರೆಯಾಗಿ ಮಾರಾಟ ಮಾಡುವಷ್ಟರ ಮಟ್ಟಿಗೆ ಬೆಳೆದುಬಿಟ್ಟಿದೆ. ಭಾರತೀಯ ಮತ್ತು ವಿದೇಶಿ ಕಂಪೆನಿಗಳು ಹಾಗೂ ಬೃಹತ್ ಉದ್ಯಮ ಸಂಸ್ಥೆಗಳು ವಾಣಿಜ್ಯ ಮತ್ತು ಕೈಗಾರಿಕೆಗೆ ಸಂಬಂಧಪಟ್ಟ ನೀತಿಗೆ ಬಿಡ್ ಮಾಡುವಷ್ಟರ ಮಟ್ಟಕ್ಕೆ ಬಂದು ತಲುಪಿದೆ. ಸೂಕ್ತ ಬೆಲೆ ಸಿಕ್ಕಿದರೆ, ದೇಶದ ಯಾವುದೇ ನೀತಿಗಳು ರಾತೋರಾತ್ರಿ ಬದಲಾಗಬಹುದು. ಟೆಲಿಕಾಂ ಕ್ಷೇತ್ರದ ಪ್ರಕರಣದಲ್ಲೂ ಇಂತದ್ದೇ ಗಂಭೀರ ಪ್ರಮಾಣದ ಭ್ರಷ್ಟಾಚಾರ ನಡೆದಿದೆ. ವಿದ್ಯುತ್, ತೈಲ ಮತ್ತು ಇತರ ಪ್ರಮುಖ ರಂಗಗಳಲ್ಲಿ ಮತ್ತು ಸಚಿವಾಲಯದಲ್ಲೂ ಉದಾರೀಕರಣದ ನೀತಿಗಳಿಂದಾಗಿ ಇದೇ ಸ್ವರೂಪದ ಹಗರಣಗಳು ನಡೆಯುತ್ತಿವೆ. ವಾಸ್ತವವಾಗಿ, ಬಹುತೇಕ ಎಲ್ಲ ಪ್ರಮುಖ ಕ್ಷೇತ್ರಗಳಿಗೆ ಸಂಬಂಧಪಟ್ಟ ಪ್ರಮುಖ ನಿರ್ಧಾರಗಳು, ನೀತಿಗಳಲ್ಲಿನ ಬದಲಾವಣೆ ಹಿಂದೆ ಬಹುರಾಷ್ಟ್ರೀಯ ಕಂಪೆನಿಗಳು ಮತ್ತು ಕಾರ್ಪೊರೇಟ್ ಸಂಸ್ಥೆಗಳ ಜೊತೆಗಿನ ಹಣಕಾಸಿನ ಅವ್ಯವಹಾರ, ಭ್ರಷ್ಟತೆಯ ಕೈವಾಡ ಇದ್ದೇ ಇದೆ. ಇಡೀ ಸಂಸ್ಥೆಗಳು ಮತ್ತು ಆಡಳಿತ ದೊಡ್ಡ ಬಂಡವಾಳದ ಹಿಂದೆ ತಲೆಬಾಗುವಂತಾಗಿದೆ. ಈ ಹಿನ್ನೆಲೆಯಲ್ಲಿ ನಮ್ಮ ದೇಶದ ಆರ್ಥಿಕತೆಯ ಮಟ್ಟ ಥೈಲೆಂಡ್, ಫಿಲಿಪ್ಪೀನ್ಸ್ ಮತ್ತು ಇಂಡೋನೇಷ್ಯಾದ ಮಟ್ಟಕ್ಕೆ ಶೀಘ್ರದಲ್ಲೇ ತಲುಪಲಿದೆ. ಈ ದೇಶಗಳಲ್ಲಿನ ಅರ್ಥವ್ಯವಸ್ಥೆಯೊಂದಿಗೆ ಬಹುರಾಷ್ಟ್ರೀಯ ಕಂಪೆನಿಗಳು ಮತ್ತು ದೊಡ್ಡ ಬಂಡವಾಳಿಗರು ಮನಸೋಚ್ಛೆ ಚೆಲ್ಲಾಟವಾಡುವಂತಾಗಿದೆ."

ಜಾಗತೀಕರಣದಿಂದಾಗಿ ನಿಯಮಗಳನ್ನು ಸಡಿಲು ಮಾಡಲಾಗುತ್ತಿದೆ ಮತ್ತು ಇಡೀ ನೀತಿಗಳನ್ನು ಒಟ್ಟಾರೆಯಾಗಿ ಮಾರಾಟ ಮಾಡುವಷ್ಟರ ಮಟ್ಟಿಗೆ ಬೆಳೆದುಬಿಟ್ಟಿದೆ.

## ಭ್ರಷ್ಟಾಚಾರದ ಅಲೆಗಳು

ದೊಡ್ಡ ಉದ್ಯಮಿಗಳು, ರಾಜಕಾರಣಿಗಳು ಮತ್ತು ಅಧಿಕಾರಶಾಹಿಗಳ ನಡುವಿನ ಸಂಬಂಧ ನವ ಉದಾರೀಕರಣ ನೀತಿಗಳ ಉತ್ಪನ್ನವಾಗಿದೆ. ಭ್ರಷ್ಟಾಚಾರ ಎಂಬ ಸಮುದ್ರದ ಮೊದಲ ಅಲೆಗಳು ನರಸಿಂಹರಾವ್ ಸರ್ಕಾರದ ಅವಧಿಯಲ್ಲಿ ಕಾಣಿಸಲಾರಂಭಿಸಿದ್ದವು. ಉನ್ನತ ಮಟ್ಟದ ರಾಜಕಾರಣಿಗಳು ಮತ್ತು ಅಧಿಕಾರಿಗಳು ಭಾಗಿಯಾಗಿದ್ದ ಹವಾಲಾ ಹಗರಣ, ಬ್ಯಾಂಕ್ ಸೆಕ್ಯುರಿಟಿ ಹಗರಣ, ಬಂಡವಾಳ ಹಿಂತೆಗೆತ ಪ್ರಕ್ರಿಯೆಯಲ್ಲಿ ನಡೆದ ಬೃಹತ್ ಹಗರಣಗಳು, ಪೆಟ್ರೋಲ್ ಪಂಪ್ ಹಗರಣ ಸೇರಿದಂತೆ ಒಂದರ ಬೆನ್ನಹಿಂದೆ ಒಂದು ಹಗರಣಗಳ ಸರಮಾಲೆಗೆ ದೇಶ ಸಾಕ್ಷಿಯಾಗಿದೆ.

ದೂರಸಂಪರ್ಕ, ಗಣಿ, ತೈಲ ನಿಕ್ಷೇಪಗಳ ಕುರಿತ ನೀತಿಗಳು ಬೃಹತ್ ಉದ್ಯಮ ಸಂಸ್ಥೆಗಳಿಗೆ ಅನುಕೂಲವಾಗುವ ರೀತಿಯಲ್ಲಿ ದೇಶದ ನೀತಿಗಳನ್ನು ರೂಪಿಸಲಾಗಿದೆ.



ಹಗರಣಗಳ ಅಲೆ ಪಿವಿಎನ್ ಕಾಲದಲ್ಲಿ

## ನವ ಉದಾರೀಕರಣ ಪ್ರಕ್ರಿಯೆಯ ರೂವಾರಿಗಳು

ಕಾಂಗ್ರೆಸ್ ಪಕ್ಷ ಬೃಹತ್ ಉದ್ಯಮ ಸಂಸ್ಥೆಗಳ ಜೊತೆಗಿನ ಭ್ರಷ್ಟ ಸಂಬಂಧದಲ್ಲಿ ತೊಡಗಿದೆ. 1993ರಲ್ಲಿ ಲೋಕಸಭೆಯಲ್ಲಿ ನಡೆದ ಅವಿಶ್ವಾಸ ಗೊತ್ತುವಳಿ ಪರ ಮತ ಚಲಾಯಿಸಲು ಜಾರ್ಖಂಡ್ ಮುಕ್ತಿ ಮೋರ್ಚಾ(ಜೆಎಂಎಂ)ಕ್ಕೆ ಆಗಿನ ಪೆಟ್ರೋಲಿಯಂ ಸಚಿವ ಕ್ಯಾಪ್ಟನ್ ಸತೀಶ್ ಶರ್ಮಾ ಲಂಚ ನೀಡಿದ್ದರು. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸಿಬಿಐ ಸಲ್ಲಿಸಿದ ಚಾರ್ಜ್‌ಶೀಟ್‌ನಲ್ಲಿ ಸತೀಶ್ ಶರ್ಮಾ ಅವರಿಗೆ ಲಂಚದ ಹಣವನ್ನು ನೀಡಿದ್ದು ಅಂಬಾನಿ, ಎಸ್ಸಾರ್,

ಪುಟ 10 ಕ್ಕೆ


ಜನಶಕ್ತಿ
ಕನ್ನಡ ವಾರಪತ್ರಿಕೆ

## ಸುಪ್ರಿಂ ಕೋರ್ಟ್ ಸಮಿತಿ ವರದಿ

# ಲೂಟಿಕೋರ ರೆಡ್ಡಿ ಬ್ರದರ್ಸ್ ಮತ್ತು ಕರ್ನಾಟಕದ ಗಡಿ ನುಂಗುವ ವಿಧ್ವಂಸಕ ಕೃತ್ಯಗಳು

■ ಜಯ

ಬಹುರಾಷ್ಟ್ರೀಯ ಕಂಪನಿಗಳು ಸಾಮ್ರಾಜ್ಯಶಾಹಿಗಳು ನೈಸರ್ಗಿಕ ಸಂಪತ್ತಿನ ಲೂಟಿಯಲ್ಲಿ



ಕುಖ್ಯಾತರಾದವರು. ಅಂತಹ ದೈತ್ಯ ಲೂಟಿಯನ್ನೇ ನಮ್ಮ ಬಳ್ಳಾರಿಯ ರೆಡ್ಡಿ ಬ್ರದರುಗಳ ಗಣಿಲೂಟಿ ನೆನಪಿಸುತ್ತಿದೆ. ಜೊತೆಗೆ ದೊಡ್ಡ ಜನ-ವಿರೋಧಿ ಕೃತ್ಯಗಳನ್ನು ರಾಜ್ಯದೊಳಗಿನ ಬಂಡವಾಳಶಾಹಿ ರೆಡ್ಡಿ ಬ್ರದರ್ಸ್ ಮತ್ತು ಬಿಜೆಪಿ ಪಕ್ಷಗಳೇ ಮಾಡುವಷ್ಟು ಶಕ್ತಿ ಹೊಂದಿರುವುದನ್ನು ಸುಪ್ರೀಂ ಕೋರ್ಟ್ ನೇಮಿಸಿರುವ ಕೇಂದ್ರ ಉನ್ನತಾಧಿಕಾರ ಸಮಿತಿ (ಸಿಇಸಿ) ವರದಿ ನಮಗೆ ಕನ್ನಡಿ ಹಿಡಿದು ತೋರಿಸುತ್ತಿದೆ.

**ರಣ ಭಯಂಕರ ಕೃತ್ಯಗಳು :**

ರೆಡ್ಡಿ ಸಹೋದರರ ಒಡೆತನದ ಓಬಳಾಪುರಂ ಮೈನಿಂಗ್ ಕಂಪನಿಯು ಅಕ್ರಮ ಗಣಿಗಾರಿಕೆ ನಡೆಸಿ ಬಳ್ಳಾರಿ ಮೀಸಲು ಅರಣ್ಯ ವ್ಯಾಪ್ತಿಯಲ್ಲಿ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯೊಂದಿಗಿರುವ ಗಡಿ ಗುರುತುಗಳನ್ನು ಶಾಶ್ವತವಾಗಿ ನಾಶಪಡಿಸಿರುವುದನ್ನು ಪುರಾವೆಗಳ ಸಮೇತ ಸುಪ್ರೀಂ ಕೋರ್ಟ್ ನೇಮಿಸಿರುವ ಕೇಂದ್ರ ಉನ್ನತಾಧಿಕಾರ ಸಮಿತಿ (ಸಿಇಸಿ) ಯು ಕೋರ್ಟ್‌ಗೆ ವರದಿ ಸಲ್ಲಿಸಿದೆ. ಇದುವರೆಗೂ ಎಲ್ಲ ವಿರೋಧ ಪಕ್ಷಗಳು, ಲೋಕಾಯುಕ್ತರು, ಮಾಧ್ಯಮಗಳು ಮತ್ತು ಕೆಲವು ನಿಷ್ಠಾವಂತ ಅಧಿಕಾರಿಗಳು ಹೇಳುತ್ತಿದ್ದನ್ನು ಈ ಸಮಿತಿಯು ನಕ್ಷೆಗಳು ಮತ್ತು ಇತರೆ ಸಾಕ್ಷ್ಯಾಧಾರಗಳ ಸಮೇತ ತನ್ನ 69 ಪುಟಗಳ ವರದಿಯಲ್ಲಿ ದಾಖಲಿಸಿದೆ. ರೆಡ್ಡಿ ಸಹೋದರರ ಒಡೆತನದಲ್ಲಿರುವ ಎರಡು ಕಂಪನಿಗಳು ಹೊಂದಿರುವ ನಾಲ್ಕು ಗಣಿಗಳು ಮತ್ತು ಇತರೆ ಕಂಪನಿಗಳ ಎರಡು ಗಣಿಗಳು ಸೇರಿ ಒಟ್ಟು ಆರು ಗಣಿಗಳಲ್ಲಿ ನಡೆದಿರುವ ಅಕ್ರಮ ಗಣಿಗಾರಿಕೆ, ಗಡಿ ಉಲ್ಲಂಘನೆಯಾಗಿದ್ದು ಒಟ್ಟು 140 ಎಕರೆ ವ್ಯಾಪ್ತಿಯ ಈ ಗಣಿಗಳನ್ನು ಸ್ಥಗಿತಗೊಳಿಸಲು ಕೇಂದ್ರ ಉನ್ನತಾಧಿಕಾರ ಸಮಿತಿಯು ಸುಪ್ರೀಂ ಕೋರ್ಟ್‌ಗೆ ಶಿಫಾರಸ್ಸು ಮಾಡಿದೆ.

ಗಡಿ ಪ್ರದೇಶದಲ್ಲಿ ಗಣಿಗಾರಿಕೆ ನಡೆಸುವ ಕಂಪನಿಗಳು ಗಡಿ ರೇಖೆಯಿಂದ ಕನಿಷ್ಠ 50 ಮೀಟರ್ ಅಂತರದಲ್ಲಿ ಯಾವುದೇ ಚಟುವಟಿಕೆ ನಡೆಸಬಾರದಿದ್ದರೂ, ಈ ಕಂಪನಿಗಳು ಗಡಿಯನ್ನೇ ಇಲ್ಲದಂತೆ ಮಾಡಿವೆ. ಆ ಭಾಗದ ಹಲವು ಗ್ರಾಮಗಳು, ಅಂತರರಾಜ್ಯ ಗಡಿ ಪ್ರದೇಶಗಳು, ಗಣಿ ಗುತ್ತಿಗೆ ಪಡೆದ ನಕ್ಷೆಗಳು ಶಾಶ್ವತವಾಗಿ ಒಂದಕ್ಕೊಂದು ತಾಳೆ ಆಗದ ಪರಿಸ್ಥಿತಿಯನ್ನು ಈ ಕಂಪನಿಗಳು ನಿರ್ಮಿಸಿವೆ. ಆಂಧ್ರಪ್ರದೇಶ ಸರ್ಕಾರದಿಂದ ಗಣಿಗಾರಿಕೆ ನಡೆಸಲು ಪರವಾನಗಿ ಪಡೆದು ಕರ್ನಾಟಕದ ಗಡಿ ಭಾಗವನ್ನು ನುಂಗಿ ಅಕ್ರಮ ಗಣಿಗಾರಿಕೆ ನಡೆಸಿ, ಇಲ್ಲಿಂದ ಗಣಿ ಅದಿರು ಸಾಗಿಸಿ ಆಂಧ್ರ ರಾಜ್ಯದ ಮೂಲಕ ರಫ್ತು ಮಾಡುವುದು ಈ ಕಂಪನಿಗಳ ಕಾರ್ಯಾಚರಣೆಯಾಗಿದೆ.

**ಸಿಇಸಿ ಶಿಫಾರಸು ಮಾಡಿರುವ ಮುಖ್ಯಾಂಶಗಳು:**

- ಓಎಂಸಿ ಕಂಪನಿಯು ತನಗೆ ನೀಡಿರುವ ಪ್ರದೇಶದ ಹೊರಗಡೆಯಲ್ಲೆಲ್ಲ ಅಕ್ರಮ ಗಣಿಗಾರಿಕೆ ಮಾಡಿದೆ ಮತ್ತು ಪಕ್ಕದ ಮೀಸಲು ಅರಣ್ಯದಲ್ಲಿ ಗಣಿಯ ತ್ಯಾಜ್ಯವನ್ನು ಟನ್‌ಗಟ್ಟಲೆ ಬಿಸಾಡಿದೆ. ಹೀಗಾಗಿ ಓಎಂಸಿ ಕಂಪನಿಗೆ ಆಂಧ್ರಪ್ರದೇಶ ಸರ್ಕಾರವು 25,98 ಹೆಕ್ಟೇರುಗಳಲ್ಲಿ ಗಣಿಗಾರಿಕೆ ಪರವಾನಗಿಯನ್ನು ವಿಸ್ತರಿಸಿರುವುದನ್ನು ರದ್ದುಗೊಳಿಸಬೇಕು ಎಂದು ವರದಿಯಲ್ಲಿ ತಿಳಿಸಿದೆ.
- ಓಎಂಸಿ ಕಂಪನಿಯು 68.5 ಹೆಕ್ಟೇರು ಪ್ರದೇಶದಲ್ಲಿ ಮತ್ತು 39.5 ಹೆಕ್ಟೇರು ಪ್ರದೇಶದಲ್ಲಿ ಎರಡು ಕಡೆ ಗಣಿಗಾರಿಕೆ ನಡೆಸಲು ಗಣಿ ಇಲಾಖೆ ನೀಡಿರುವ ಪರವಾನಗಿ ಪತ್ರಕ್ಕೆ ಬದಲಾಗಿ ಬೇರೊಂದು ಪರವಾನಗಿ ಪತ್ರವನ್ನು ನೀಡಿ ಅಂದರೆ ಫೋರ್ಜರಿ ಪತ್ರದಿಂದ ಅರಣ್ಯ ಸಂರಕ್ಷಣೆ ಕಾಯಿದೆಯಡಿ ಅನುಮೋದನೆ ಪಡೆಯಲಾಗಿದೆ. ಈ ಕಾಯಿದೆ ಉಲ್ಲಂಘಿಸಿ ಗಣಿಗಾರಿಕೆಯ ಹೊರವಲಯದಲ್ಲಿರುವ ಮೀಸಲು ಅರಣ್ಯ ಪ್ರದೇಶದಲ್ಲಿ ಐದು ರಸ್ತೆಗಳನ್ನು ನಿರ್ಮಿಸಲಾಗಿದೆ. ಅಲ್ಲದೆ ಈ ಗಣಿಯಲ್ಲಿ ದೊರೆಯಬಹುದಾದಕ್ಕಿಂತಲೂ ಹೆಚ್ಚಿನ ಪ್ರಮಾಣದ ಅದಿರನ್ನು ಹೊರಗೆ ಸಾಗಿಸಲಾಗಿದೆ. ಅಂದರೆ ಪರವಾನಗಿ ಗಣಿಪ್ರದೇಶದ ಹೊರಗೂ ಕೂಡ ಅಕ್ರಮ ಗಣಿಗಾರಿಕೆ ಮಾಡಲಾಗಿದೆ ಎಂಬುದು ಇದರಿಂದ ಸ್ಪಷ್ಟ.



- ಅನಂತಪುರ ಮೈನಿಂಗ್ ಕಂಪನಿಯ ಗಣಿಗಾರಿಕೆ



ಪರವಾನಗಿ ಮುಗಿದ 17 ವರ್ಷಗಳ ನಂತರ ಅದಕ್ಕೆ ಮತ್ತೆ 2017 ರವರೆಗೆ ಗಣಿಗಾರಿಕೆ ನಡೆಸಲು ಆಂಧ್ರ ಪ್ರದೇಶ ಸರ್ಕಾರ ಪರವಾನಗಿ ನವೀಕರಣ ನೀಡಿರುವುದನ್ನು ವರದಿ ಪ್ರಶ್ನಿಸಿದೆ. ಪರವಾನಗಿ ಇಲ್ಲದ ಸಮಯದಲ್ಲಿ ಅಕ್ರಮ ಗಣಿಗಾರಿಕೆ ನಡೆಸಲಾಗಿದೆ. ಇಲ್ಲಿಯೂ ಕೂಡ ಗಣಿಯಲ್ಲಿ ದೊರೆಯುಬಹುದಾದಕ್ಕಿಂತಲೂ ಹೆಚ್ಚಿನ ಪ್ರಮಾಣದ ಅದಿರನ್ನು ಹೊರಗೆ ಸಾಗಿಸಲಾಗಿದೆ.

- ಭಾರತ್ ಐರನ್ ಓರ್ ಕಂಪನಿ ಮತ್ತು ವೈಎಂಎಸ್ ಕಂಪನಿಗಳು ಪರವಾನಗಿ ಪಡೆದ ಗಣಿಗಾರಿಕೆಯ ಹೊರಗೆ ಗಣಿ ತ್ಯಾಜ್ಯ ಸುರಿಯಲು ಮೀಸಲು ಅರಣ್ಯ ಪ್ರದೇಶವನ್ನು ಬೃಹತ್ ತಿಪ್ಪೆಗುಂಡಿಯಾಗಿ ಬಳಸಿಕೊಂಡಿರುವುದರಿಂದ 20 ಪಟ್ಟು ದಂಡ ವಿಧಿಸಬೇಕೆಂದು ತಿಳಿಸಿದೆ.
- 2004ರಿಂದ ಇಲ್ಲಿಯುವರೆಗೆ ಅಕ್ರಮ ಗಣಿಗಾರಿಕೆ ನಡೆಸಿರುವ ಕಂಪನಿಗಳಿಂದ ಮಾರುಕಟ್ಟೆ ಮೌಲ್ಯದಂತೆ ವಸೂಲಿ ಮಾಡಬೇಕು.
- ಗಡಿ ಭಾಗಗಳನ್ನು ಸರಿಯಾಗಿ ಗುರುತಿಸಿ ನಿಗದಿಪಡಿಸುವವರೆಗೂ, ವಿನಾಶಗೊಂಡಿರುವ ಅರಣ್ಯ ಮೀಸಲು ಪ್ರದೇಶವನ್ನು ಸರಿಪಡಿಸಲು ಕ್ರಮಕೈಗೊಳ್ಳುವವರೆಗೂ ಹಾಗೂ ಈ ಕಂಪನಿಗಳು ನಾಶಗೊಳಿಸಿರುವ ಅರಣ್ಯ ಪ್ರದೇಶಕ್ಕೆ ಪರಿಹಾರ ತೆರವವರೆಗೂ ಗಣಿಗಾರಿಕೆ ನಡೆಸುವ ಅಥವಾ ಅದಿರು ಸಾಗಿಸುವ ಚಟುವಟಿಕೆಗಳನ್ನು ಸ್ಥಗಿತಗೊಳಿಸಬೇಕೆಂದು ಶಿಫಾರಸ್ಸು ಮಾಡಿದೆ.

ಇವೆಲ್ಲ ಕಾನೂನುಬಾಹಿರ, ಅಕ್ರಮ ಚಟುವಟಿಕೆಗಳು ಎರಡೂ ರಾಜ್ಯ ಸರ್ಕಾರಗಳ ಬೆಂಬಲವಿಲ್ಲದೆ ಮಾಡಲು ಸಾಧ್ಯವೇ ಇಲ್ಲ ಎಂದು ವರದಿ ತಿಳಿಸಿದೆ. ಗಡಿ ನಾಶ, ಮೀಸಲು ಅರಣ್ಯ ನಾಶ, ಅಕ್ರಮ ಗಣಿಗಾರಿಕೆ ಇತ್ಯಾದಿ ಚಟುವಟಿಕೆಗಳನ್ನು ಈ ಕಂಪನಿಗಳು ಅವ್ಯಾಹತವಾಗಿ ಮಾಡುತ್ತಾ ಬಂದಿದ್ದರೂ ಕರ್ನಾಟಕ ಮತ್ತು ಆಂಧ್ರಪ್ರದೇಶ ಸರ್ಕಾರದ ಇಲಾಖಾಧಿಕಾರಿಗಳು ಮೌನವಹಿಸಿವೆ.

**ತೆರಿಗೆ ವಂಚನೆ - ಅಂತರಾಷ್ಟ್ರೀಯ ದರೋಡೆಕೋರತನ :**

ರೆಡ್ಡಿ ಸಹೋದರರು ಮತ್ತು ಬಿಜೆಪಿ ಮಂತ್ರಿಗಳ ಲೂಟಿ ಮತ್ತು ದಂಧೆಯ ಕಾರ್ಯಾಚರಣೆಗಳು ಎಷ್ಟು ರೋಚಕವಾಗಿವೆ ಎಂದರೆ ಅಂತರಾಷ್ಟ್ರೀಯ ಕುಖ್ಯಾತಿ ಪಡೆದಿರುವ ದರೋಡೆಕೋರ ಚಾರ್ಲ್ಸ್ ಶೋಭರಾಜ್ ಮತ್ತು ದಾವೂದ್ ಇಬ್ರಾಹಿಂ ನಂಥವರೆ ನಾಚಿಕೆ ಪಡಬೇಕು ಎಂಬಷ್ಟರ ಮಟ್ಟಿಗೆ ಅವರನ್ನು ಮೀರಿಸುವಂತಿದೆ. ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಕಳೆದ ಐದಾರು ವರ್ಷಗಳಿಂದ ರೆಡ್ಡಿ ಒಡೆತನದ ಕಂಪನಿಗಳ ಮೇಲೆ ಧಾಳಿ ನಡೆಸುತ್ತಲೇ ಇದ್ದರೂ, ಆ ಮಾಹಿತಿ ಧಾಳಿಗೆ ಮುಂಚೆಯೇ ಮಾಧ್ಯಮಗಳಿಗೆ ಸೋರಿಕೆಯಾಗಲು ಬಿಡಲಾಗುತ್ತಿತ್ತು. ಹೀಗಾಗಿ ಆದಾಯ ತೆರಿಗೆ ಇಲಾಖೆಗಳು ಏನು ಸಿಗದೆ ಬರಿಗೈಲಿ ಹೋಗುತ್ತಿದ್ದರು. ಈ ನಡುವೆ 2007ರಲ್ಲಿ ನಡೆದ ಇಂಥದೊಂದು ಧಾಳಿಯಲ್ಲಿ ರೆಡ್ಡಿ ಕಂಪನಿಗಳು ತೆರಿಗೆ ವಂಚನೆ ಮಾಡಿರುವ ಸಾಕ್ಷ್ಯಗಳು ಸಿಕ್ಕಿವೆ.

ಓಎಂಸಿ ಕಂಪನಿಯು ರಾಜ್ಯದಲ್ಲಿ ಹೊರತೆಗೆದ ಅದಿರನ್ನು ಮಾರುಕಟ್ಟೆ ಬೆಲೆಗಿಂತ ಕಡಿಮೆ ದರಕ್ಕೆ

ಪುಟ 10 ಕ್ಕೆ



# ಭ್ರಷ್ಟಾಚಾರ ಮತ್ತು ರಾಜಕಾರಣದ ನಂಟು...

ಪುಟ 8 ರಿಂದ

ವೀಡಿಯೋಕಾನ್ ಮುಂತಾದ ದೊಡ್ಡ ಉದ್ಯಮ ಸಂಸ್ಥೆಗಳು ಎಂಬುದನ್ನು ಬಹುಷಃ ಅನೇಕ ಮಂದಿ ಮರೆತಿರಬಹುದು. ಆದರೆ, ಈ ಪ್ರಕರಣದಲ್ಲಿನ ಎಲ್ಲ ಆರೋಪಿಗಳು ನ್ಯಾಯಾಲಯುದಿಂದ ಖುಲಾಸೆಗೊಂಡರು.

ಬಿಜೆಪಿ ಕೇಂದ್ರದಲ್ಲಿ ಅಧಿಕಾರ ನಡೆಸಲು ಅವಕಾಶ ಸಿಕ್ಕಾಗಲೂ ಇಂಥದ್ದೇ ಭ್ರಷ್ಟಾಚಾರದ ಹಾದಿಯನ್ನು ತುಳಿಯಿತು. ಸಾರ್ವಜನಿಕ ರಂಗದ ಕಂಪೆನಿಗಳ ಬಂಡವಾಳ ಹಿಂತೆಗೆಯುವ ಪ್ರಕ್ರಿಯೆಯಲ್ಲಿ, ಟೆಲಿಕಾಂ ವಲಯದ ವ್ಯವಹಾರಗಳಲ್ಲಿ, ಪೆಟ್ರೋಲ್ ಪಂಪ್ ಹಾಗೂ ಗ್ಯಾಸ್ ಏಜೆನ್ಸಿಗಳ ಹಂಚಿಕೆ ವ್ಯವಹಾರದಲ್ಲಿ, ರಕ್ಷಣಾ ಖರೀದಿ ವ್ಯವಹಾರಗಳಲ್ಲಿ ಖಾಸಗಿ ವಲಯದ ಬೃಹತ್ ಕಂಪೆನಿಗಳ ಪರವಾದ ನಿಲುವು (ಫೇವರಿಸಂ) ತಾಳಲಾಗಿದೆ.

ಕರ್ನಾಟಕ ಸರ್ಕಾರದ ಸಂಪುಟದಲ್ಲಿ ಗಣಿ ಮಾಫಿಯಾವನ್ನು ಸೇರಿಸಿಕೊಳ್ಳುವ ಮೂಲಕ ಬಿಜೆಪಿ ಭ್ರಷ್ಟಾಚಾರ ಮತ್ತು ಅವ್ಯವಹಾರಗಳ ಶಖೆಯಲ್ಲಿ ಹೊಸ ದಾಖಲೆಯನ್ನು ಬರೆದಿದೆ. ಇಷ್ಟೇ ಅಲ್ಲದೆ, ಸ್ವತಃ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಾನು ಹಾಗೂ ತನ್ನ ಕುಟುಂಬ ಸದಸ್ಯರ ಹೆಸರಲ್ಲಿ ಕೋಟ್ಯಂತರ ರೂಪಾಯಿ ಮೌಲ್ಯದ ಭೂಮಿಯನ್ನು ನುಂಗಿಹಾಕಿದ್ದಾರೆ. ಅವರ ಸಂಪುಟದ ಹಲವು ಸದಸ್ಯರೂ ಇದೇ ಅಕ್ರಮ ಭೂ ಹಗರಣದಲ್ಲಿ ಸಿಲುಕಿಕೊಂಡಿದ್ದಾರೆ.

ಇಂತಹ ಹಗರಣಗಳನ್ನು ಮೌಲ್ಯಗಳ ಕುಸಿತ ಮತ್ತು ನೈತಿಕತೆಯ ಅಧಃಪತನ ಎಂಬ ಹಣೆಪಟ್ಟಿ ನೀಡುವ ಮೂಲಕ ಬೂರ್ಷ್ವಾ ವರ್ಗ ಅದರ ಗಂಭೀರತೆಯನ್ನು ತಗ್ಗಿಸುವ ಪ್ರಯತ್ನ ಮಾಡಿದೆ. ಇದು ವ್ಯವಸ್ಥೆಯಲ್ಲಿ ಆಳವಾಗಿ ಬೇರೂರಿದೆ ಎಂಬ ಸಂಗತಿಯಿಂದ ವಿಮುಖಗೊಳಿಸಲಾಗುತ್ತಿದೆ. ನವ ಉದಾರೀಕರಣದ ಅರ್ಥ ವ್ಯವಸ್ಥೆಯಲ್ಲಿ ಚಮಚಾ ಬಂಡವಾಳಶಾಹಿ ಮತ್ತು ಭ್ರಷಾಚಾರ ಅವಳಿ ಹಸ್ತಗಳು ಎಂಬ ಕರಾಳ ಸತ್ಯವನ್ನು ಮರೆಮಾಚುವ ವ್ಯವಸ್ಥಿತ ಪ್ರಯತ್ನ ನಡೆಯುತ್ತಿದೆ.

ರಾಡಿಯಾ ಪ್ರಕರಣವಂತೂ ಸರ್ಕಾರ ಮತ್ತು ಬೃಹತ್ ಉದ್ಯಮಿಗಳ ನಡುವಿನ ಒಂದು ಇನ್ನೊಂದರಿಂದ ಲಾಭ ಪಡೆಯುವ ಸಂಬಂಧವನ್ನು ಸ್ಪಷ್ಟವಾಗಿ ತೆರೆದಿಟ್ಟಿದೆ. ಕೆಲ ಪ್ರಮುಖ ಪತ್ರಿಕೆಗಳ ಸಂಪಾದಕರು, ಪತ್ರಕರ್ತರು ಮತ್ತು ದೊಡ್ಡ ಉದ್ಯಮಿಗಳ ಏಜೆಂಟ್‌ಗಳ ನಡುವಿನ ಅವ್ಯವಹಾರಿಕ ಸಂಬಂಧ ದೇಶದ ಮಧ್ಯಮ ವರ್ಗದ ಮಂದಿಗೆ ದೊಡ್ಡ ಆಘಾತವಾಗಿದೆ. ಆದರೆ, ಎಡ ಪಕ್ಷಗಳಿಗೆ ಇದೊಂದು ದೊಡ್ಡ ಅಚ್ಚರಿಯ ವಿಷಯವಾಗಿರಲಿಲ್ಲ. ಇದೇ ಭ್ರಷ್ಟತೆಯ ಕಾರಣಕ್ಕೆ ಕಾರ್ಪೊರೇಟ್ ಮಾಧ್ಯಮಗಳು ಎಡಪಕ್ಷಗಳನ್ನು ಎಲ್ಲ ಸಂದರ್ಭಗಳಲ್ಲೂ ಟೀಕಾತ್ಮಕವಾಗಿಯೇ ನಿರೂಪಿಸಿದೆ.

ಹೆಚ್ಚಿನ ಮಾಧ್ಯಮ ಸಂಸ್ಥೆಗಳು ಕಾರ್ಪೊರೇಟ್ ವ್ಯವಸ್ಥೆಯ ಭಾಗವಾಗಿಯೇ ಇದೆ. ಸರ್ಕಾರ ನವ ಉದಾರೀಕರಣ ನೀತಿಗಳನ್ನು ಹೇಗೆ ಬದ್ಧತೆಯಿಂದ ಜಾರಿಗೊಳಿಸುತ್ತಿದೆ ಎಂಬ ಅಂಶವನ್ನು ಇಂತಹ ಮಾಧ್ಯಮಗಳು ಉದ್ದೇಶಪೂರ್ವಕವಾಗಿ ಮತ್ತು ವ್ಯವಸ್ಥಿತವಾಗಿ ಮರೆಮಾಚುತ್ತಿದೆ. ಇಂತಹ ಸಂಸ್ಥೆಗಳಿಗೆ ಎ. ರಾಜಾ ಅಥವಾ ದಯಾನಿಧಿ ಮಾರನ್ ಈ ಇಬ್ಬರಲ್ಲಿ ಟೆಲಿಕಾಂ ಸಚಿವಾಲಯಕ್ಕೆ ಯಾರು ಹೆಚ್ಚು ಸೂಕ್ತ, ಯಾರಿಗೆ ಎಷ್ಟರವಮಟ್ಟಿಗೆ ಪ್ರಭಾವ ಬೀರಬಹುದು ಎಂಬ ಲೆಕ್ಕಾಚಾರದಲ್ಲಿ ತೊಡಗಿರುತ್ತವೆ. ಅದೇ ನೇರಕ್ಕೆ ಸುದ್ದಿಯನ್ನೂ ಮಾಡಲಾಗುತ್ತದೆ. ಒಂದು ವೇಳೆ, ಇದಕ್ಕೆ ಅವಕಾಶ ಇಲ್ಲದಿದ್ದರೆ ದೊಡ್ಡ ಉದ್ಯಮಿಗಳ ಒಲವು ನಿಲುವುಗಳಿಗೆ ಅನುಸಾರವಾಗಿ ಸಚಿವರ ಕಾರ್ಯಕ್ಷಮತೆಯನ್ನು ನಿರ್ಧರಿಸುವ, ಪಟ್ಟಿ ಮಾಡುವ ಕಾರ್ಯವನ್ನು ಮಾಡುತ್ತವೆ. ಮೊದಲ ಯುಪಿಎ ಸರ್ಕಾರದ ಅಧಿಕಾರಾವಧಿಯಲ್ಲಿ ಮಣಿಶಂಕರ್ ಅಯ್ಯರ್ ಅವರ ಕೈಯಲ್ಲಿದ್ದ ತೈಲ ಖಾತೆಯನ್ನು ಉದ್ಯಮಿ ಮುರಳಿ ದಿಯೋರಾ ಹೇಗೆ ಪಡೆದರು ಎಂಬುದನ್ನು ಒಮ್ಮೆ ಸ್ಮರಿಸಬಹುದು.

**ರಾಜಕೀಯದಲ್ಲಿ ಹಣಬಲದ ವಿರುದ್ಧ ದೃಢ ಹೋರಾಟದ ಅಗತ್ಯ**

ಇತ್ತೀಚಿಗೆ ಬಯಲಾದ ಹಲವು ಹಗರಣಗಳು, ಹಲವು ಪ್ರಕರಣಗಳು ಕಟು ಸತ್ಯವನ್ನು ಹೇಳುತ್ತಿವೆ. ಸ್ವತಃ ಉದ್ಯಮಿಗಳಾಗಿರುವ ಹಾಗೂ ಯಾವುದೋ ಉದ್ಯಮಿಗಳ ವಕಾಲತ್ತು ನಡೆಸುವ ಅಥವಾ ಬಿಸಿನೆಸ್ ಹಿತಾಸಕ್ತಿಯನ್ನು ಹೊಂದಿರುವ ಸಚಿವರನ್ನು ಒಳಗೊಂಡ ಸಂಪುಟದ ಅಧ್ಯಕ್ಷತೆಯನ್ನು ಪ್ರಧಾನಿ ವಹಿಸುತ್ತಾರೆ. ವೃತ್ತಿಯಲ್ಲಿ ವಕೀಲರಾಗಿರುವ ಕೆಲವು ಸಚಿವರಂತೂ ತಾವು ನೋಡಿಕೊಳ್ಳುವ, ಜವಾಬ್ದಾರಿ ಹೊಂದಿರುವ ಖಾತೆಯಲ್ಲಿ ಡೀಲು ಕುದುರಿಸುವ ಬೃಹತ್ ಉದ್ಯಮಿಗಳನ್ನು ಪ್ರತಿನಿಧಿಸುತ್ತಿದ್ದಾರೆ. ಬೃಹತ್ ಉದ್ಯಮಿಗಳು, ರಾಜಕಾರಣಿಗಳು ಮತ್ತು ಅಧಿಕಾರಶಾಹಿಗಳ ಇಂತಹ ಅನೈತಿಕ ಭ್ರಷ್ಟ ಸಂಬಂಧದಿಂದಾಗಿ ಭಾರೀ ಮೊತ್ತದ ಕಾನೂನುಬಾಹಿರ ಹಣ ರಾಜಕೀಯ ವ್ಯವಸ್ಥೆಯೊಳಗೆ ಸಮೃದ್ಧವಾಗಿ ಹರಿಯುವಂತೆ ಮಾಡಿದೆ. ಹಾಗಾಗಿಯೇ ಭ್ರಷ್ಟಾಚಾರ ಮತ್ತು ಇಂತಹ ಅಕ್ರಮವಾಗಿ ಗಳಿಸಿದ ಹಣಕ್ಕೂ ದೊಡ್ಡ ಖರ್ಚಿನ ಚುನಾವಣೆಗಳಿಗೂ ನೇರ ಸಂಬಂಧ ಇದೆ.

ಈ ಹಿನ್ನೆಲೆಯಲ್ಲಿ ಭ್ರಷ್ಟಾಚಾರದ ವಿರುದ್ಧ ಹೋರಾಟ ಎಂದರೆ ವ್ಯವಸ್ಥೆಯಲ್ಲಿ ಆಳವಾಗಿ ಬೇರೂರಿದ ಈ ಭ್ರಷ್ಟ ಸಂಬಂಧವನ್ನು ಕಿತ್ತೊಗೆಯಬೇಕಾಗಿದೆ. ಈ ದೃಷ್ಟಿಕೋನದಲ್ಲಿ ನೋಡಿದರೆ 2ಜಿ ಸ್ಪೆಕ್ಟ್ರಂ ಹಗರಣದಲ್ಲಿ ಕೇವಲ ಸಚಿವರು ಮತ್ತು ತಪ್ಪಿತಸ್ಥ ಅಧಿಕಾರಿಗಳು ಮಾತ್ರ ಅಪರಾಧಿಗಳಲ್ಲ. ಇವರಿಗೆ ಹಣದ ಆಮಿಷ ನೀಡಿದ, ಲಂಚ ನೀಡಿದ ಕಾರ್ಪೊರೇಟ್ ಸಂಸ್ಥೆಗಳು ಮತ್ತು ಉದ್ಯಮಿಗಳ ವಿರುದ್ಧವೂ ಪ್ರಕರಣ ದಾಖಲಿಸಬೇಕು ಮತ್ತು ಶಿಕ್ಷೆಗೆ ಒಳಪಡಿಸಬೇಕು.

ಕಳಂಕಿತ ಸಚಿವ ಎ. ರಾಜಾ ಅವರಿಂ ಟೆಲಿಕಾಂ ಖಾತೆಯನ್ನು ವಹಿಸಿಕೊಂಡ ಕಪಿಲ್ ಸಿಬಲ್, ಹಗರಣಕ್ಕೆ ಸಂಬಂಧಿಸಿದಂತೆ ಮುಂದುವರಿಯುವುದನ್ನು ನೋಡಿದರೆ ಕೇವಲ ಸಾಂಕೇತಿಕ ಕ್ರಮಗಳನ್ನು ಮಾತ್ರ ಕೈಗೊಳ್ಳಬಹುದು ಎನಿಸುತ್ತಿದೆ.

ಇಷ್ಟಕ್ಕೂ, 85 ಟೆಲಿಕಾಂ ಸಂಸ್ಥೆಗಳಿಗೆ ನೀಡಲಾದ ಲೈಸನ್ಸ್‌ಗಳನ್ನು ರದ್ದುಗೊಳಿಸುವಂತೆ ನೋಟೀಸ್ ನೀಡಿದ ಮೇಲೂ ಸಚಿವಾಲಯು ಆಂತರಿಕ ವಿಚಾರಣೆಯ ಅಗತ್ಯವೇನಿದೆ. ಅಕ್ರಮ ಹಾಗೂ ಕಾನೂನುಬಾಹಿರ ಕ್ರಮಗಳಿಂದ ಲೈಸನ್ಸ್ ಪಡೆದಿರುವ ಕಂಪೆನಿಗಳ ಪರವಾನಿಗೆಯನ್ನು ರದ್ದುಗೊಳಿಸಲಾಗುವುದು ಎಂಬ ಸ್ಪಷ್ಟ ಹೇಳಿಕೆಯನ್ನು ನೀಡಲು ಸಚಿವರಿಗೆ ಯಾಕೆ ಆಗುತ್ತಿಲ್ಲ. ತರಂಗಾಂತರಂಗ ಅಥವಾ ಸ್ಪೆಕ್ಟ್ರಂನ ಮರು ಹರಾಜು ಈ ಸಂದರ್ಭದಲ್ಲಿ ಸೂಕ್ತವಲ್ಲ ಎಂಬ ಸಚಿವರ ಹೇಳಿಕೆ ಏನನ್ನು ಸೂಚಿಸುತ್ತದೆ?

ಇದೆಲ್ಲವೂ ಒಂದು ವಿಷಯವನ್ನು ಸ್ಪಷ್ಟಗೊಳಿಸುತ್ತಿದೆ. ಕಾರ್ಪೊರೇಟ್ ಜಗತ್ತಿನ ಪ್ರತಿಷ್ಠಿತರ ಬಣ್ಣ ಬಯಲಾಗಿದೆ. ಈ ಹಗರಣದ ಎಲ್ಲ ಭ್ರಷ್ಟರ ಚಿತ್ರಣವೂ ಜಗಜ್ಜಾಹೀರಾಗಿದೆ. ಒಂದು ವ್ಯವಸ್ಥೆಯನ್ನು ಹೇಗೆ ವಿರೂಪಗೊಳಿಸಲಾಗಿದೆ ಎಂಬ ಅಂಶದ ಬಗ್ಗೆ ತನಿಖೆ ನಡೆಯುತ್ತದೆ ಎಂಬ ಭೀತಿಯಿಂದ ಸರ್ಕಾರ ಜಂಟಿ ಸಂಸದೀಯ ಸಮಿತಿಯ ತನಿಖೆಗೆ ಹಿಂದೇಟು ಹಾಕಿದೆ. ಇಂತಹ ಸಮಿತಿಯ ತನಿಖೆಯಿಂದ ನೀತಿ-ನಿಯಮಗಳನ್ನು ಕಾರ್ಪೊರೇಟ್ ಲಾಬಿಗಳು ಹೇಗೆ ತಮ್ಮ ಅನುಕೂಲಕ್ಕೆ ಬದಲಿಸುತ್ತಾರೆ ಎಂಬ ಅಂಶವನ್ನು ಹೊರಹಾಕಬಹುದು.

ಇಂತಹ ಬೃಹತ್ ಉದ್ಯಮಿಗಳು ಮತ್ತು ರಾಜಕಾರಣಿಗಳ ಭ್ರಷ್ಟ ನಂಟಿನ ಬಗ್ಗೆ ಸಿಪಿಐಎಂನ ವಿಸ್ತೃತ ಕೇಂದ್ರ ಸಮಿತಿ ಗಂಭೀರ ಆತಂಕವನ್ನು ವ್ಯಕ್ತಪಡಿಸಿದೆ. ಕೇಂದ್ರ ಸಮಿತಿ ಅಂಗೀಕರಿಸಿದ ರಾಜಕೀಯ ನಿರ್ಣಯದಲ್ಲಿ ಹೇಳಿದಂತೆ, ರಾಜಕೀಯ ಮತ್ತು ಚುನಾವಣೆಯಲ್ಲಿ ಹಣಬಲದ ವಿರುದ್ದ ಪಕ್ಷ ವಿಶಾಲ ತಳಹದಿಯ ಜನಾಂದೋಲನವನ್ನು ರೂಪಿಸಲಿದೆ. ಸಾರ್ವಜನಿಕ ನೀತಿಗಳನ್ನು ಉದ್ಯಮಿಗಳು ಹೇಗೆ ತಮ್ಮ ಅನುಕೂಲಕ್ಕೆ ಬಳಸುತ್ತಾರೆ ಮತ್ತು ಬಂಡವಾಳಶಾಹಿ ಪಕ್ಷಗಳು ಭ್ರಷ್ಟ ವ್ಯವಸ್ಥೆಯಲ್ಲಿ ಯಾವ ಪಾತ್ರವನ್ನು ವಹಿಸಿದ್ದಾರೆ ಎಂಬುದನ್ನು ಈ ಆಂದೋಲನ ಅನಾವರಣಗೊಳಿಸಲಿದೆ.

ಭ್ರಷ್ಟಾಚಾರ ಮತ್ತು ನವ ಉದಾರೀಕರಣದ ನೀತಿಗಳ ವಿರುದ್ಧದ ಹೋರಾಟ ಮತ್ತಷ್ಟು ತೀವ್ರವಾಗಿ ದೇಶಾದ್ಯಂತ ನಡೆಯಲಿದೆ. ಈ ಹೋರಾಟದಲ್ಲಿ ಎಲ್ಲ ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು ಕೈಜೋಡಿಸಬೇಕಾಗಿದೆ.

# ಕ್ರೂರ ರೆಡ್ಡಿ ಕೂಟ.......

ಪುಟ 9 ರಿಂದ

ಸಿಂಗಪೂರ್‌ನಲ್ಲಿರುವ ಜಿಎಲ್‌ಎ ಟ್ರೇಡಿಂಗ್ ಕಂಪನಿಗೆ ಮಾರಾಟ ಮಾಡಿದೆ. ಕೇವಲ ಒಂದು ಡಾಲರ್ ಮೌಲ್ಯದ ಜಿಎಲ್‌ಎ ಟ್ರೇಡಿಂಗ್ ಕಂಪನಿಗೆ ಜನಾರ್ಧನ ರೆಡ್ಡಿ ಕೂಡ ಒಬ್ಬ ನಿರ್ದೇಶಕನಾಗಿದ್ದಾನೆ. ನಂತರ ಈ ಕಂಪನಿಯ ಷೇರನ್ನು ಐಸಲ್ ಆಫ್ ಮ್ಯಾನ್ ಎಂಬ ಬ್ರಿಟನ್ ದೇಶಕ್ಕೆ ಒಳಪಡುವ ರಾಜ್ಯದಲ್ಲಿ ಸ್ಥಾಪಿಸಲಾಗಿರುವ ಜಿಎಲ್‌ಆರ್ ಹೋಲ್ಡಿಂಗ್ ಇಂಟರ್‌ನ್ಯಾಷನಲ್ ಕಂಪನಿಗೆ ವರ್ಗಾಯಿಸಲಾಗಿದೆ. ಜಿಎಲ್‌ಆರ್ ಎಂದರೆ ಗಾಳಿ ಜನಾರ್ಧನ ರೆಡ್ಡಿ. ಐಸಲ್ ಆಫ್ ಮ್ಯಾನ್ ಎಂಬುದು ತೆರಿಗೆ ವಂಚನೆ ಮಾಡುವ ಕಂಪನಿಗಳಿಗೆ ಅಭಯ ಹಸ್ತ ನೀಡುವ ರಾಜ್ಯವೆನಿಸಿದೆ. ಗಾಳಿ ಜನಾರ್ಧನ ರೆಡ್ಡಿ ರಾಜ್ಯಕ್ಕೆ ತೆರಿಗೆ ವಂಚನೆ ಮಾಡುವ ಸಲುವಾಗಿ ರಾಜ್ಯದಲ್ಲಿರುವ ತನ್ನದೇ ಕಂಪನಿಯಿಂದ ಕಡಿಮೆ ದರಕ್ಕೆ ಅದಿರನ್ನು ಬೇರೊಂದು ದೇಶದಲ್ಲಿರುವ ತನ್ನದೇ ಮತ್ತೊಂದು ಕಂಪನಿಗೆ ಮಾರಾಟ ಮಾಡುವ ದಂಧೆಯಲ್ಲಿ ಮುಳುಗಿದ್ದಾನೆ. ರೆಡ್ಡಿಯ ಈ ಹಾದಿಯಲ್ಲಿ ಸದ್ಯಕ್ಕೆ ರೂ. 86 ಕೋಟಿ ತೆರಿಗೆ ಸರ್ಕಾರಕ್ಕೆ ವಂಚನೆಯಾಗಿದೆ ಎಂದು ಐಟಿ ಇಲಾಖೆ ತಿಳಿಸಿದೆ.

ರೆಡ್ಡಿ ಬ್ರದರ್ಸ್ ಲಂಚ ಸುಪ್ರೀಂಕೋರ್ಟ್ ನ್ಯಾಯಾಧೀಶ ಬಾಲಕೃಷ್ಣನ್‌ಗೂ ತಲುಪಿದೆ?

ಮಾಜಿ ಸುಪ್ರೀಂಕೋರ್ಟ್ ನ್ಯಾಯಾಧೀಶ ಕೆಜಿ ಬಾಲಕೃಷ್ಣನ್ ಕೂಡ ರೆಡ್ಡಿ ಸಹೋದರರಿಂದ ದೊಡ್ಡ ಪ್ರಮಾಣದ ಲಂಚ ಪಡೆದಿದ್ದಾರೆಂದು ವಿಶ್ವಾಸನೀಯ ಮೂಲಗಳು ಹೇಳುತ್ತಿವೆ. ಕಳೆದ ವರ್ಷದ ಮಾರ್ಚಿಯಲ್ಲಿ, ಆಗ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಾಧೀಶರಾಗಿದ್ದ ಕೆಜಿ ಬಾಲಕೃಷ್ಣನ್ ನೇತೃತ್ವದ ಪೀಠ ರೆಡ್ಡಿ ಸಹೋದರರ ಕಂಪನಿಗಳು ಗಣಿಗಾರಿಕೆ ನಡೆಸುತ್ತಿರುವ ಎಲ್ಲ ಪ್ರದೇಶಗಳಲ್ಲಿ ಗಣಿಗಾರಿಕೆ ನಿಲ್ಲಿಸಬೇಕೆಂದು ಆದೇಶಿಸಿತ್ತು. ಆದರೆ ಅದೇ ವರ್ಷದ ಮೇ ತಿಂಗಳಲ್ಲಿ ರೆಡ್ಡಿ ಸಹೋದರರು ಮಾಡಿದ ಪುನರ್-ಮನವಿ ಮೇರೆಗೆ ಕೆಜಿ ಬಾಲಕೃಷ್ಣನ್ ನೇತೃತ್ವದ ಪೀಠವು ವಿವಾದವಿಲ್ಲದ ಪ್ರದೇಶಗಳಲ್ಲಿ ಗಡಿಯಿಂದ 150 ಮೀಟರ್ ದೂರದಲ್ಲಿ ಗಣಿಗಾರಿಕೆ ಮಾಡಬಹುದೆಂದು ರೆಡ್ಡಿಗಳಿಗೆ ಅನುಮತಿ ನೀಡಿತು. ಈ ಅವಧಿಯಲ್ಲಿ ಸುಮಾರು 250 ಕೋಟಿ ರೂ. ನಷ್ಟು ಹಣ ನ್ಯಾಯಾಧೀಶ ಕೆಜಿ ಬಾಲಕೃಷ್ಣನ್‌ರವರ ಅಳಿಯ ಪಿವಿ ಶ್ರೀನಿಜನ್‌ಗೆ ರೆಡ್ಡಿ ಸಹೋದರರು ಸಂದಾಯ ಮಾಡಿದ್ದಾರೆಂದು, ಅದರಲ್ಲಿ ಸ್ವಲ್ಪ ಮೊತ್ತವು ಅಧಿಕೃತವಾಗಿ ಅಳಿಯನ ಬ್ಯಾಂಕ್ ಖಾತೆಗೆ ಜಮೆ ಆಗಿರುವುದಕ್ಕೆ ಸಾಕ್ಷ್ಯವಿದೆಯೆಂದು ಹೇಳಲಾಗಿದೆ.

**ರೆಡ್ಡಿ ಸಹೋದರರ ಅಕ್ರಮ ವ್ಯವಹಾರ ಪರಿಶೋಧನೆ ನಡೆಸುತ್ತಿರುವ ಸಿಬಿಐ:**

ಆಂಧ್ರಪ್ರದೇಶದ ಅಂದಿನ ಮುಖ್ಯಮಂತ್ರಿ ರಾಜಶೇಖರ ರೆಡ್ಡಿಯವರು ಇರುವವರೆಗೂ ಅವರಿಗೆ ಬಹಳ ಹತ್ತಿರವಿದ್ದ ರೆಡ್ಡಿ ಸಹೋದರರು ಅವರ ಮಗನೊಂದಿಗೆ ತಮ್ಮ ಅಕ್ರಮ ಗಣಿಗಾರಿಕೆಗಳನ್ನು ಬೃಹತ್ ಮಟ್ಟದಲ್ಲಿ ಮಾಡುತ್ತಿದ್ದರು. ಅಲ್ಲಿನ ಎಡಪಕ್ಷಗಳು ಮತ್ತು ಇತರೆ ವಿರೋಧ ಪಕ್ಷಗಳ ಒತ್ತಡಕ್ಕೆ ಮಣಿದ ರೋಸಯ್ಯ ಸರ್ಕಾರ ಎರಡು ವರ್ಷಗಳ ಹಿಂದೆ ರೆಡ್ಡಿ ಸಹೋದರರ ಅಕ್ರಮ ವ್ಯವಹಾರಗಳ ತನಿಖೆಯನ್ನು ಸಿಬಿಐಗೆ ವಹಿಸಿತು. ಆಗ ರೆಡ್ಡಿ ಕಂಪನಿಗಳ ಕಛೇರಿಗಳ ಮೇಲೂ ಸಿಬಿಐ ದಾಳಿ ನಡೆಸಿತ್ತು. ಈ ತನಿಖೆ ಕುಂಟುತ್ತಾ ಸಾಗಿದ್ದು, ಕಳೆದ ತಿಂಗಳೂ ಕೂಡ ಸಿಬಿಐ ತಂಡ ಅಕ್ರಮ ಗಣಿಗಾರಿಕೆ ಪ್ರದೇಶಗಳಿಗೆ ಭೇಟಿ ನೀಡಿತ್ತು. ಸಿಬಿಐ ನಿಜಕ್ಕೂ ತಪ್ಪಿತಸ್ಥರನ್ನು ಶಿಕ್ಷೆಗೊಳಪಡಿಸುವ ದೃಢ ನಿರ್ಧಾರವಿದ್ದಲ್ಲಿ ಇನ್ನಷ್ಟು ವಿಳಂಬ ಮಾಡದೆ ತಕ್ಷಣವೇ ಕ್ರಮಕೈಗೊಳ್ಳಬೇಕಿದೆ.

# SFI ವಿಧಾನಸೌಧ ಚಲೋ

## ಶಿಕ್ಷಣಕ್ಕೆ ಬಜೆಟ್ ಹೆಚ್ಚಿಸಲು ಒತ್ತಾಯಿಸಿ ರಾಜ್ಯದ ಶೈಕ್ಷಣಿಕ ಸಮಸ್ಯೆಗಳ ವಿರುದ್ಧ

■ ನವೀನ್‌ಕುಮಾರ್ ಹೆಚ್.ಆರ್

ಸಮಾಜದ ಸರ್ವಾಂಗೀಣ ಅಭಿವೃದ್ಧಿಗೆ ಶಿಕ್ಷಣ ತಳಪಾಯವಾಗಿದೆ. ಶಿಕ್ಷಣವನ್ನು ಆದ್ಯತೆಯಾಗಿ ಪರಿಗಣಿಸಿ ಜಾರಿಗೊಳಿಸಿದಾಗ ಮಾತ್ರ ದೇಶ ಪ್ರಗತಿಯ ಕಡೆ ಸಾಗಲಿದೆ. ವಿದ್ಯಾರ್ಥಿ-ಯುವಜನರನ್ನು ದೇಶದ ಅಭಿವೃದ್ಧಿಯಲ್ಲಿ ತೊಡಗಿಸಬೇಕಾದರೆ ಅವರಿಗೆ ಅಗತ್ಯವಿರುವ ಶಿಕ್ಷಣವನ್ನು ಒದಗಿಸುವುದು ಜವಾಬ್ದಾರಿಯುತ ಸರ್ಕಾರಗಳ ಸಂವಿಧಾನಬದ್ಧ ಕರ್ತವ್ಯವಾಗಿದೆ. ಆದರೆ ನಮ್ಮನ್ನಾಳುತ್ತಿರುವ ಕೇಂದ್ರ-ರಾಜ್ಯ ಸರ್ಕಾರಗಳು ಶಿಕ್ಷಣ ನೀಡುವ ಮೂಲ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಾ ಶಿಕ್ಷಣ ವಿರೋಧಿಗಳಾಗಿ ವರ್ತಿಸುತ್ತಿವೆ. ಆ ಕಾರಣಕ್ಕಾಗಿಯೇ ದೇಶದ ಸಾಕ್ಷರತೆಯ ಪ್ರಮಾಣ ಹೆಚ್ಚಾಗಲಿಲ್ಲ. ಸಾಮ್ರಾಜ್ಯಶಾಹಿ-ಬಂಡವಾಳಶಾಹಿಗಳಿಗೆ ಪೂರಕವಾಗಿ ಕೇಂದ್ರದ ಕಾಂಗ್ರೆಸ್ ನೇತೃತ್ವದ ಯು.ಪಿ.ಎ ಹಾಗು ರಾಜ್ಯ ಬಿ.ಜೆ.ಪಿ ಸರ್ಕಾರ ಶಿಕ್ಷಣ ನೀತಿಗಳನ್ನು ಜಾರಿಗೊಳಿಸುತ್ತಿದೆ.

**ರಾಜ್ಯ ಸರ್ಕಾರದ ನಿರ್ಲಕ್ಷತನ, ಶುಲ್ಕ ಏರಿಕೆ :**

ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರಕಾರ ಶಿಕ್ಷಣ ಕ್ಷೇತ್ರವನ್ನು ಸಂಪೂರ್ಣವಾಗಿ ಖಾಸಗೀಕರಿಸಲು ಮುಂದಾಗುತ್ತಾ ಎಲ್ಲಾ ಹಂತದ ಪ್ರವೇಶ ಶುಲ್ಕಗಳನ್ನು ಏರಿಸಿದೆ. ಪಿ.ಯು.ಸಿ. ಮತ್ತು ಪದವಿ ವಿದ್ಯಾರ್ಥಿಗಳಿಗೆ ಶೇ.40 ರಷ್ಟು ಶುಲ್ಕ ಹೆಚ್ಚಿಸಿ, ವಿದ್ಯಾರ್ಥಿಗಳ ಬಸ್‌ಪಾಸ್ ದರವನ್ನು ದಿಢೀರೆಂದು ಏರಿಸಿತು. ವಿದ್ಯಾರ್ಥಿಗಳ ಪ್ರತಿಭಟನೆಗೆ ಮಣಿದು ಹಣ ವಾಪಸ್ಸು ನೀಡುವುದಾಗಿ ಹೇಳಿ 5 ತಿಂಗಳು ಕಳೆದರೂ ಹಣ ಹಿಂದಿರುಗಿಸಿಲ್ಲ. ವಿದ್ಯಾರ್ಥಿಗಳಿಂದ ವಿವಿಧ ಹೆಸರಿನಲ್ಲಿ ಹಣ ವಸೂಲಿ ಮಾಡುತ್ತಿರುವುದು ನಿರಂತರವಾಗಿ ನಡೆಯುತ್ತಿದ್ದರೂ ಶುಲ್ಕ ಏರಿಕೆಯನ್ನು ತಡೆಯಲು ಕ್ರಮಕೈಗೊಳ್ಳದೇ ನಿರ್ಲಕ್ಷಿಸುವುದು ಖಂಡನೀಯ.

**ದಲಿತ-ಹಿಂದುಳಿದ-ಅಲ್ಪಸಂಖ್ಯಾತ ವಿದ್ಯಾರ್ಥಿಗಳ ಕಡೆಗಣನೆ :**

ಸಾಮಾಜಿಕವಾಗಿ- ಆರ್ಥಿಕವಾಗಿ ಹಿಂದುಳಿದಿರುವ ಈ ವಿಭಾಗವನ್ನು ಸರ್ಕಾರ ಸಂಪೂರ್ಣವಾಗಿ ಕಡೆಗಣಿಸುತ್ತಿದೆ. ಕಳೆದ ಮೂರು ವರ್ಷಗಳಿಂದ ಎಸ್.ಸಿ/ಎಸ್.ಟಿ ಮತ್ತು ಒ.ಬಿ.ಸಿ. ವಿದ್ಯಾರ್ಥಿಗಳಿಗೆ ಸಮರ್ಪಕವಾಗಿ ಸರಿಯಾದ ಸಮಯಕ್ಕೆ ವಿದ್ಯಾರ್ಥಿ ವೇತನ ಬಿಡುಗಡೆಯಾಗುತ್ತಿಲ್ಲ.ಕಳೆದ ಮೂರು ವರ್ಷಗಳಿಂದ ಸುಮಾರು 263 ಕೋಟಿ ರೂ ಗಳಷ್ಟು ವಿದ್ಯಾರ್ಥಿ ವೇತನ ಎಲ್ಲಾ ಹಂತಗಳಲ್ಲೂ ಬಾಕಿಯಿದೆ. ರಾಜ್ಯದ ಹಾಸ್ಟೆಲ್‌ಗಳು ಅಗತ್ಯ ಕೊಠಡಿ, ಕುಡಿಯುವ ನೀರು, ಗ್ರಂಥಾಲಯ, ಶೌಚಾಲಯ, ಇಲ್ಲದೇ ಕೊರಗುತ್ತಿವೆ. ಜೈಲಿನಲ್ಲಿರುವ ಖೈದಿಗಳ ಊಟಕ್ಕೆಂದು ಪ್ರತಿದಿನ 80 ರೂ. ಖರ್ಚು ಮಾಡುವ ಸರ್ಕಾರ ಈ ವಿದ್ಯಾರ್ಥಿಗಳ ಊಟಕ್ಕಾಗಿ ಕೇವಲ 20 ರೂ.ಗಳನ್ನು ಖರ್ಚು ಮಾಡುತ್ತಿದೆ. ಈಗ ಹಾಸ್ಟೆಲ್‌ಗಳನ್ನು ಖಾಸಗೀಕರಿಸುವ ಹುನ್ನಾರವು ನಡೆಯುತ್ತಿದೆ. ನಮ್ಮ ಪಕ್ಕದ ರಾಜ್ಯವಾಗಿರುವ ಕೇರಳದಲ್ಲಿ ಒಬ್ಬ ಹಾಸ್ಟೆಲ್ ವಿದ್ಯಾರ್ಥಿಗೆ ಆಹಾರ ಭತ್ಯೆಯೆಂದು 1500 ರೂ ಗಳನ್ನು ನೀಡಲಾಗುತ್ತಿದೆ.

**ಅಗತ್ಯ ಸೌಲಭ್ಯಗಳಿಲ್ಲ :**

ರಾಜ್ಯದ ಶಾಲಾ-ಕಾಲೇಜುಗಳು ಅಗತ್ಯ ಮೂಲಭೂತ ಸೌಲಭ್ಯಗಳಿಲ್ಲದೆ ನರಳುತ್ತಿವೆ. ಕೆಲವು ಕಡೆ ಮೇಲ್ಛಾವಣಿ ಕುಸಿದು ವಿದ್ಯಾರ್ಥಿಗಳ ಸಾವು ಸಂಭವಿಸಿವೆ. ಮರದ ನೆರಳಿನಲ್ಲಿ, ಬಿಸಿಲಿನಲ್ಲಿ ಕೆಲವೆಡೆ ಪಾಠ ನಡೆಯುತ್ತಿವೆ. ಶೇಕಡ 45 ರಷ್ಟು ಶಾಲೆಗಳಲ್ಲಿ ಶೌಚಾಲಯವಿಲ್ಲವೆಂಬ ಅಂಕಿಅಂಶವನ್ನು ಸರ್ಕಾರವೇ ಹೇಳುತ್ತಿದೆ. ಶುದ್ಧ ಕುಡಿಯುವ ನೀರು, ಕಟ್ಟಡ, ಬೆಂಚುಗಳು ಮರೀಚಿಕೆಯಾಗುತ್ತಿವೆ.

**ಶಿಕ್ಷಣ ಖಾಸಗೀಕರಣ ಈ ಸರ್ಕಾರದ ಉದ್ದೇಶ :**

ರಾಜ್ಯದ ಸರ್ಕಾರಿ ಶಾಲಾ-ಕಾಲೇಜುಗಳಿಗೆ ಮೂಲ ಸೌಲಭ್ಯ ಒದಗಿಸದ ಈ.ಸರ್ಕಾರ ಖಾಸಗೀ ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ವ್ಯಾಪಕವಾಗಿ ಪರವಾನಗಿ ನೀಡುತ್ತಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ವಿಪರೀತ ಡೊನೇಷನ್ ಹಾವಳಿಯಿದ್ದು ಇದನ್ನು ನಿಯಂತ್ರಿಸಲು ಮುಂದಾಗುತ್ತಿಲ್ಲ. ಜಿಲ್ಲಾಧಿಕಾರಿ, ತಹಶೀಲ್ದಾರ್ ನೇತೃತ್ವದಲ್ಲಿ ಡೊನೇಷನ್ ವಿರೋಧಿ ಸಮಿತಿಗಳು ರಚನೆಯಾಗಬೇಕೆಂಬ ಆದೇಶ ಧೂಳು ತಿನ್ನುತ್ತಿದೆ. 50 ಸಾವಿರ ಪ್ರಾಥಮಿಕ ಶಾಲೆಗಳನ್ನು ಖಾಸಗೀಕರಿಸಲು ಹುನ್ನಾರ ನಡೆಸುತ್ತಿದೆ. ಆಪ್ತಮಿತ್ರ, ಸಹಯೋಗ, ನಾವು ನೀವು (ಸರ್ಕಾರಿ ಖಾಸಗಿ ಸಹಭಾಗಿತ್ವದ) ಯೋಜನೆಗಳ ಹೆಸರಿನಲ್ಲಿ ಸರ್ಕಾರ ಶಿಕ್ಷಣ ನೀಡುವ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತಾ ಖಾಸಗೀಕರಣಕ್ಕೆ ಉತ್ತೇಜನ ನೀಡುತ್ತಿದೆ. ಇತ್ತೀಚೆಗೆ ರಾಜ್ಯದ ಉಚ್ಚನ್ಯಾಯಾಲಯ ಸಿ.ಬಿ.ಎಸ್.ಇ., ಮತ್ತು ಐ.ಸಿ.ಎಸ್.ಇ. ಪಠ್ಯಕ್ರಮ ಬೋಧಿಸುವ ಶಾಲೆಗಳಲ್ಲಿ ಪೋಷಕರಿಂದ ದುಬಾರಿ ಶುಲ್ಕ ವಸೂಲಿ ನಡೆಯುತ್ತಿದ್ದು ತಕ್ಷಣ ಇದಕ್ಕೆ ನಿಯಂತ್ರಣ ಹೇರಬೇಕೆಂದು ತೀರ್ಪು ನೀಡಿದೆ.



**ಖಾಸಗಿ ವಿವಿ ಸ್ಥಾಪನೆ ಮತ್ತು ವಿಶ್ವವಿದ್ಯಾಲಯಗಳಲ್ಲಿ ಭ್ರಷ್ಟಾಚಾರ :**

ರಾಜ್ಯದ ಇತಿಹಾಸದಲ್ಲಿ ಮೊಟ್ಟಮೊದಲ ಬಾರಿಗೆ ಆಜೀಂ ಪ್ರೇಂ ಜಿ, ಅಲಾಯನ್ಸ್ ಕಂಪನಿಗಳಿಗೆ ಖಾಸಗಿ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಅವಕಾಶ ಕಲ್ಪಿಸುವ ಮೂಲಕ ಬಡವರಿಗೆ ಉನ್ನತ ಶಿಕ್ಷಣವನ್ನು ವಂಚಿಸಲು ಸರ್ಕಾರ ತೀರ್ಮಾನಿಸಿದೆ. ಈ ವಿ.ವಿ.ಗಳು ರಾಜ್ಯದ ವಿದ್ಯಾರ್ಥಿಗಳಿಗೆ ಕೇವಲ ಶೇ.25 ಸೀಟುಗಳ ಪ್ರವೇಶ ನೀಡಲಿದ್ದು, ಆಡಳಿತ, ಪಠ್ಯ, ನೇಮಕಾತಿ, ಪ್ರವೇಶ ಸೇರಿದಂತೆ ಎಲ್ಲವನ್ನೂ ಕಂಪನಿ ನಿರ್ಧರಿಸಲಿದ್ದು ಸರ್ಕಾರದ ಯಾವುದೇ ನಿಯಂತ್ರಣವಿರುವುದಿಲ್ಲ. ಸಾಮಾಜಿಕ ನ್ಯಾಯದ ಕುರಿತು ಈ ವಿ.ವಿ.ಗಳಲ್ಲಿ ಯಾವುದೇ ಪ್ರಸ್ತಾಪವಿಲ್ಲ. ಹಣ ಉಳ್ಳವರಿಗೆ ಮಾತ್ರ ಉನ್ನತ ಶಿಕ್ಷಣ ಎಂಬುದೇ ಇವುಗಳ ಉದ್ದೇಶ. ರಾಜ್ಯದ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ನೇಮಕಾತಿ, ಅಭಿವೃದ್ಧಿ ಕೆಲಸಗಳ ಹೆಸರಿನಲ್ಲಿ ಕೋಟ್ಯಾಂತರ ರೂಪಾಯಿಗಳ ಭ್ರಷ್ಟಾಚಾರ ನಡೆದಿದೆ. ಉಪಕುಲಪತಿಗಳು, ಸಚಿವರು, ಚುನಾಯಿತ ಪ್ರತಿನಿಧಿಗಳು ಮತ್ತು ಬಿಜೆಪಿ ಮುಖಂಡರು ಭ್ರಷ್ಟಾಚಾರ ಪ್ರಕರಣಗಳಲ್ಲಿ ಭಾಗಿಯಾಗಿರುವ ಕುರಿತು ವರದಿಗಳಾಗಿದ್ದರೂ ಸಮಗ್ರ ತನಿಖೆಗೆ ಸರ್ಕಾರ ಮುಂದಾಗುತ್ತಿಲ್ಲ. ವಿಶ್ವವಿದ್ಯಾಲಯಗಳು ಕೂಡ ಅಗತ್ಯ ಸೌಲಭ್ಯಗಳಿಲ್ಲದೆ ವಿದ್ಯಾರ್ಥಿಗಳು ಪರದಾಡುತ್ತಿದ್ದಾರೆ. ಗುಣಮಟ್ಟದ ಶಿಕ್ಷಣ ನೀಡಲು ಸರ್ಕಾರ ಮುಂದಾಗುತ್ತಿಲ್ಲ. ಬದಲಾಗಿ ಜಿಲ್ಲೆಗೊಂದರಂತೆ ನಾಮಕಾವಸ್ತೆಗೆ ವಿಶ್ವ ವಿದ್ಯಾಲಯಗಳನ್ನು ತೆರೆದು ಅಗತ್ಯ ಸೌಲಭ್ಯಗಳನ್ನು ಒದಗಿಸದೇ ಈಗಿರುವ ವಿ.ವಿ.ಗಳನ್ನು ಸಂಪೂರ್ಣ ಕಡೆಗಣಿಸಿದೆ.

**ನೇಮಕಾತಿ ನಿಂತುಹೋಗಿದೆ :**

ಸಮರ್ಪಕವಾಗಿ ಶಿಕ್ಷಕ-ಉಪನ್ಯಾಸಕ, ಸಿಬ್ಬಂದಿಗಳಿಲ್ಲದೆ ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಅಭ್ಯಾಸಕ್ಕೆ ತೊಡಕಾಗಿದೆ. ಇರುವ ಶಿಕ್ಷಕ-ಉಪನ್ಯಾಸಕರನ್ನು ಬೋಧನೆಗಿಂತ ಅನ್ಯ ಕೆಲಸಕ್ಕೆ ಹೆಚ್ಚು ಬಳಸಿಕೊಳ್ಳಲಾಗುತ್ತಿದೆ. ತರಬೇತಿ ಪಡೆದ ಸಾವಿರಾರು ಉದ್ಯೋಗಾಕಾಂಕ್ಷಿಗಳಿದ್ದರೂ ನೇಮಕಾತಿ ನಡೆಯುತ್ತಿಲ್ಲ. ಇತ್ತೀಚೆಗೆ ಶಿಕ್ಷಣ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿ "ಶಿಕ್ಷಕರ ಅವಶ್ಯಕತೆಯಿಲ್ಲ" ಎಂಬ ಹೇಳಿಕೆ ಈ ಸರ್ಕಾರದ ಶಿಕ್ಷಣ ವಿರೋಧಿ ನೀತಿಯನ್ನು ಎತ್ತಿ ತೋರಿಸುತ್ತದೆ.

**ವೃತ್ತಿಪರ ಶಿಕ್ಷಣದ ಕಡೆಗಣನೆ :**

ಇಂಜಿನಿಯರಿಂಗ್, ಮೆಡಿಕಲ್, ಡಿಪ್ಲೊಮಾ, ಐ.ಟಿ.ಐ, ನರ್ಸಿಂಗ್ ವಿದ್ಯಾರ್ಥಿಗಳು ವ್ಯಾಪಕ ಶುಲ್ಕ ಏರಿಕೆ ಸೇರಿದಂತೆ ಮೂಲ ಸೌಲಭ್ಯಗಳಿಲ್ಲದೆ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಸರ್ಕಾರ ಖಾಸಗಿ ಶಿಕ್ಷಣ ಸಂಸ್ಥೆಗಳ (ಕಾಮೆಡ್-ಕೆ) ತಾಳಕ್ಕೆ ತಕ್ಕಂತೆ ಕುಣಿಯುತ್ತ [illegible] ಏರಿಸುತ್ತಿದೆ. 59 ಸಾವಿರ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದು. ಜೆ.ಒ.ಸಿ.ಕೋರ್ಸುಗಳನ್ನು ಮುಚ್ಚುವ ಮೂಲಕ ಬಡ ವಿದ್ಯಾರ್ಥಿಗಳಿಗೆ ವೃತ್ತಿ ಶಿಕ್ಷಣವನ್ನು ವಂಚಿಸಲಾಗಿದೆ. ವೃತ್ತಿಪರ ವಿದ್ಯಾರ್ಥಿಗಳಿಗೆ ನೀಡಲಾಗುವ ಶಿಷ್ಯವೇತನವನ್ನು ತಡೆಹಿಡಿಯಲಾಗಿದೆ. ಶಿಕ್ಷಕರಾಗಲು ಕನಸು ಕಾಣುತ್ತಿರುವ ಡಿ.ಎಡ್, ಬಿ.ಎಡ್. ಇತರೆ ವಿಭಾಗದ ವಿದ್ಯಾರ್ಥಿಗಳು ಆಂತರಿಕ ಅಂಕಗಳ ನಿರಾಕರಣೆ, ಶುಲ್ಕ ಏರಿಕೆ ಸೇರಿದಂತೆ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ನೇಮಕಾತಿಯ ಭರವಸೆ ಕಾಣುತ್ತಿಲ್ಲ.

**ವಿದ್ಯಾರ್ಥಿನಿಯರಿಗೆ ಸೂಕ್ತ ರಕ್ಷಣೆ ಮತ್ತು ಸೌಲಭ್ಯಗಳಿಲ್ಲ :**

ರಾಜ್ಯದ ಶೇ.58 ರಷ್ಟು ಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾಗಿ ಶೌಚಾಲಯಗಳಿಲ್ಲ. ವಿಶ್ರಾಂತಿ ಕೊಠಡಿಗಳಿಲ್ಲ. ಪದವಿ ಹಂತದವರೆಗೂ ವಿದ್ಯಾರ್ಥಿನಿಯರಿಗೆ ಉಚಿತ ಶಿಕ್ಷಣ ನೀಡಲಾಗುತ್ತದೆ ಎಂದು ಎರಡು ವರ್ಷಗಳ ಹಿಂದೆ ಮುಖ್ಯಮಂತ್ರಿ ಯಡಿಯೂರಪ್ಪನವರು ಮಾಡಿದ ಘೋಷಣೆ ಸುಳ್ಳಾಗಿದೆ. ಸುಪ್ರಿಂ ಕೋರ್ಟ್‌ನ ತೀರ್ಪಿನಂತೆ ಶಾಲಾ-ಕಾಲೇಜ್‌ಗಳಲ್ಲಿ "ಲೈಂಗಿಕ ಕಿರುಕುಳ ವಿರೋಧಿ ಸಮಿತಿ" ಗಳನ್ನು ರಚಿಸಲಾಗಿಲ್ಲದ ಕಾರಣ ದೌರ್ಜನ್ಯ, ಕಿರುಕುಳ ಹೆಚ್ಚಾಗುತ್ತಿದೆ. ಅತ್ಯಾಚಾರಗಳಂತಹ ಪ್ರಕರಣ ಹೆಚ್ಚಾಗಿ ವಿದ್ಯಾರ್ಥಿನಿಯರು ಭಯಭೀತರಾಗಿ ಶಿಕ್ಷಣದಿಂದ ದೂರಾಗುತ್ತಿದ್ದಾರೆ.

**ಪ್ರಜಾಸತ್ತಾತ್ಮಕ ಹಕ್ಕುಗಳಿಲ್ಲ... :**

ಸಂವಿಧಾನಬದ್ಧವಾಗಿ ಮತದಾನದ ಹಕ್ಕು ಪಡೆದಿರುವ ವಿದ್ಯಾರ್ಥಿ ಯುವಜನರು ಸಾರ್ವತ್ರಿಕ ಹಾಗು ಸ್ಥಳಿಯ ಸಂಸ್ಥೆ ಚುನಾವಣೆಗಳಲ್ಲಿ ಮತ ಚಲಾಯಿಸುವ ಹಕ್ಕು ಹೊಂದಿದ್ದಾರೆ. ಆದರೆ ಅವರ ಕಾಲೇಜ್, ವಿಶ್ವವಿದ್ಯಾಲಯಗಳಲ್ಲಿ ಪ್ರಜಾಸತ್ತಾತ್ಮಕವಾಗಿ ಪಾಲ್ಗೊಳ್ಳಲು ವಿದ್ಯಾರ್ಥಿ ಸಂಘದ ಚುನಾವಣೆಗಳನ್ನು ನಡೆಸದಿರುವುದು ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳ ನಿರಾಕರಣೆಯಾಗಿದೆ. ಲಿಂಗ್ಡೋ ಸಮಿತಿಯ ಶಿಫಾರಸ್ಸಿನಂತೆ ವಿದ್ಯಾರ್ಥಿ ಸಂಘದ ಚುನಾವಣೆಯನ್ನು ನಡೆಸುವಂತೆ ಸುಪ್ರೀಂಕೋರ್ಟ್ ಸ್ಪಷ್ಟ ನಿರ್ದೇಶನ ನೀಡಿದ್ದರು ಕೇಂದ್ರ, ರಾಜ್ಯ ಸರ್ಕಾರಗಳು ಮೌನ ವಹಿಸಿವೆ.

**ಶಿಕ್ಷಣದಲ್ಲಿ ಕೋಮುವಾದಿ ನೀತಿಗಳು :**

ಪಠ್ಯಪುಸ್ತಕಗಳ ಪರಿಷ್ಕರಣೆಯ ಹೆಸರಿನಲ್ಲಿ ರಾಜ್ಯ ಸರ್ಕಾರ ಶಿಕ್ಷಣವನ್ನು ಕೇಸರೀಕರಿಸಲು ಹೊರಟಿದೆ. ಧರ್ಮಾಂಧತೆಯ ಅಂಶಗಳನ್ನು ತುರುಕಲು ಪ್ರಯತ್ನಿಸುತ್ತಿದೆ. ಉದಾ :ಮತಾಂಧತೆ ಮತ್ತು ಕೋಮುವಾದಿ ವಿಷಬೀಜ ಬಿತ್ತುವ ರಾಷ್ಟ್ರೋತ್ಥಾನ ಸಾಹಿತ್ಯ ಪರಿಷತ್ತಿನ 300 ಪುಸ್ತಕಗಳನ್ನು ಪ್ರತಿ ಶಾಲೆಗಳಿಗೆ ಖರೀದಿಸಲು ತೀರ್ಮಾನಿಸಲಾಗಿದೆ ಮತ್ತು ಪ್ರಗತಿಪರವಾಗಿದ್ದ ಡಾ|| ಗೀತಾ ನಾಗಭೂಷಣ್‌ರವರ "ಅವ್ವ" ಪಾಠವನ್ನು ತೆಗೆದುಹಾಕಲಾಗಿದೆ.

**ಹಣದ ಕೊರತೆ :**

[illegible]ದ ಶಿಕ್ಷಣ ಕ್ಷೇತ್ರ ಎದುರಿಸುತ್ತಿರುವ [illegible] ಗಳಿಗೆ [illegible]



## ಬಿಜೆಪಿ ದರ್ಬಾರ್

# ಈ ಮಳೆಗಾಲಕ್ಕೆ ಮುಂಚೆಯೂ ಮನೆಗಳಿಲ್ಲ

ಸಂಕ್ರಾಂತಿ ಹಬ್ಬ ಮುಗಿಯಿತು. ಇಲ್ಲಿಂದಾಚೆಗೆ ಸೂರ್ಯನ ಚಲನೆಯ ದಿಕ್ಕು ಬದಲಾಗುತ್ತದೆ ಎಂದು ಜನ ಹೇಳುತ್ತಾರೆ. ವೈಜ್ಞಾನಿಕವಾಗಿ ಅದರ ವಿವರಣೆ ಏನೇ ಇರಲಿ ಒಂದು ಬದಲಾವಣೆಯಂತೂ ಮುಂದೆ ಸ್ಪಷ್ಟವಾಗುತ್ತಾ ಹೋಗುತ್ತದೆ. ಅದೇನೆಂದರೆ ಡಿಸೆಂಬರ್- ಜನವರಿಯ ಚಳಿ ಕಡಿಮೆಯಾಗುತ್ತಾ ಬಿಸಿಲು, ಕಾವು ಏರುತ್ತಾ ಹೋಗುತ್ತದೆ. ಈ ನಡುವೆಯೆ ವಸಂತನ ಆಗಮನ. ಹಳೆಯ ಮರಗಿಡಗಳ ಎಲೆಗಳು ಒಣಗಿ ಉದುರಿ ಮುದ್ದು ಹೂವಿನ ಬಣ್ಣದ ಹೊಸ ಚಿಗುರು ಮೂಡುತ್ತದೆ.

ವಸಂತ ಸಂತಸವನ್ನು ತರುವುದೇನೋ ನಿಜವೇ. ಆದರೆ ಎಲ್ಲರಿಗೂ ಅಲ್ಲ. ಅದರಲ್ಲೂ ಕಳೆದ ಎರಡೂವರೆ ವರ್ಷಗಳ ಹಿಂದೆ ಕರ್ನಾಟಕ ರಾಜ್ಯದಲ್ಲಿ ಸುರಿದ ಭಾರಿ ಮಳೆ ಮತ್ತು ಪ್ರವಾಹದಲ್ಲಿ ಮನೆ, ಮಾರು, ಬೆಳೆ ಕಳೆದುಕೊಂಡ ಉತ್ತರ ಕರ್ನಾಟಕದ ರೈತರು ಮತ್ತು ಗ್ರಾಮೀಣ ಜನರಿಗಂತೂ ಅಲ್ಲವೇ ಅಲ್ಲ. ಕರ್ನಾಟಕ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇರುವವರೆಗೂ ಅವರ ಬದುಕಿನಲ್ಲಿ ಬಹುಶ: ವಸಂತ ಬರುವುದೇ ಇಲ್ಲವೇನೋ !!


ಈ ಮಾತನ್ನು ಯಾವುದೇ ಪೂರ್ವಾಗ್ರಹಗಳನ್ನು ಇಟ್ಟುಕೊಂಡಾಗಲೀ ಅಥವಾ ಯಾವುದೇ ರಾಜಕೀಯ ದ್ವೇಷದಿಂದಾಗಲಿ ಹೇಳುತ್ತಿರುವುದಲ್ಲ. ಆತ್ಮ ಸಾಕ್ಷಿ ಇರುವ, ಕನಿಷ್ಟ ಪ್ರಾಮಾಣಿಕತೆ ಇರುವ ಯಾವುದೇ ವ್ಯಕ್ತಿಗೆ ಇಂತಹ ಭಾವನೆ ಬರುವುದು ಖಂಡಿತ.

ಇಲ್ಲಿ ಏನಾಗಿದೆ ಎಂದು ನೀವೇ ನೋಡಿ. ಕಳೆದ ವರ್ಷ ಕೂಡ ಸರಿ ಸುಮಾರು ಇಂತದ್ದೇ ವರದಿಗಳಲ್ಲಿ ಇದೇ ಮಾತುಗಳನ್ನು ಇದೇ ಅಂಕಣದಲ್ಲಿ ನೀವು ಓದಿದ್ದು ನಿಮಗೆ ನೆನಪಾಗಬಹುದು. ಆಗ ಮುಂಗಾರು ಪೂರ್ವ ಮಳೆ ಗುಡುಗು ಮಿಂಚು ಆರಂಭವಾಗುವ ಹೊತ್ತಲ್ಲಿ...... ಮಳೆಗಾಲ ಆರಂಭವಾಗಿ ಧೋ ಎಂದು ಮಳೆಯ ಸುರಿಯುವ ಸಮಯಕ್ಕೂ ಸರ್ಕಾರ ಪ್ರಾವಾಹ ಸಂತ್ರಸ್ತರಿಗೆ ಕಟ್ಟಿಸಿ ಕೊಡ ಬೇಕಾದ ಮನೆಗಳನ್ನು ಕಟ್ಟಿಸಿಕೊಡುವುದಿಲ್ಲ.....ಸರ್ಕಾರದ ಧೋರಣೆ, ಕಾಮಗಾರಿಗಳ ವೇಗವನ್ನು ನೋಡಿದರೆ ಬಹುಶ: ಸರ್ಕಾರ ಮುಂದಿನ ವರ್ಷದ ಮಳೆಗಾಲಕ್ಕೆ ಮುನ್ನ ಕೂಡ ಮನೆಗಳ ನಿರ್ಮಾಣ ಕಾರ್ಯವನ್ನು ಮುಗಿಸುವುದಿಲ್ಲ ಎಂದು ಜನಶಕ್ತಿ ಭವಿಷ್ಯವನ್ನು ಊಹಿಸಿತ್ತು. ಆ ಮಾತು ಬಹುತೇಕ ನಿಜವಾಗುವಂತಿದೆ.

ಪ್ರವಾಹದಲ್ಲಿ ಮನೆ, ಮಾರು, ಬೆಳೆ ಕಳೆದುಕೊಂಡವರು ಲಕ್ಷಾಂತರ ಜನ. ಸುಮಾರು 6 ಲಕ್ಷ ಮನೆಗಳನ್ನು ಸರ್ಕಾರ ಕಟ್ಟಿಸಿಕೊಡಬೇಕಾಗುತ್ತದೆ ಎಂಬ ಸ್ಥೂಲ ಅಂದಾಜನ್ನು ಆಗ ಮಾಡಲಾಗಿತ್ತು. ಸರ್ಕಾರ ಕಟ್ಟಿಸಿಕೊಡಲು ಒಪ್ಪಿದ್ದು 59,477 ಮನೆಗಳನ್ನು. ಅದನ್ನಾದರೂ ಸಮಯಕ್ಕೆ ಸರಿಯಾಗೋ ಇಲ್ಲ, "ಸ್ವಲ್ಪ" ವಿಳಂಬವಾಗೋ ಕಟ್ಟಿಸಿಕೊಡಲು ಸರ್ಕಾರ ಸಿದ್ದವಿದೆಯಾ ಎಂದರೆ ....ಉಹುಂ...ಇಲ್ಲ.

ಈ ಕೆಳಗಿನ ಅಂಕಿ ಸಂಖ್ಯೆಯನ್ನು ನೋಡಿ. ಈ ಯೋಜನೆಯನ್ನು ಆಸರೆ ಯೋಜನೆ ಎಂದು ಕರೆಯಲಾಗಿದೆ. ಪ್ರವಾಹ ಪರಿಹಾರಕ್ಕೆಂದು ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವುದು 1000 ಕೋಟಿ. ಜನವರಿ 17 2011ರ ಕನ್ನಡ ಪ್ರಭ ಪತ್ರಿಕೆಯ ವರದಿಯ ಪ್ರಕಾರ ರಾಜ್ಯ ಸರ್ಕಾರ ಈ ಹಣದಲ್ಲಿ ಇಲ್ಲಿಯವರೆಗೆ ಖರ್ಚು ಮಾಡಿರುವುದು ಕೇವಲ 315 ಕೋಟಿ.

ಕೇಂದ್ರ ಸರ್ಕಾರ ಕೊಟ್ಟ ಹಣವನ್ನು ಖರ್ಚು ಮಾಡದೆ ಅದನ್ನು ಹಾಗೆ "ಜೋಪಾನ" ವಾಗಿ ಕಾಪಾಡುತ್ತಿರುವುದರ ಹಿಂದನ ಉದ್ದೇಶವೇನು? ಪ್ರವಾಹ ಪರಿಹಾರದ ಉದ್ದೇಶಕ್ಕೆಂದು ರಾಜ್ಯದ ಜನತೆ ಸರ್ಕಾರ ನೀಡಿದ ದೊಡ್ಡ ಪ್ರಮಾಣದ ನಿಧಿಯನ್ನು ಸರ್ಕಾರ ಯಾಕೆ ವೆಚ್ಚ ಮಾಡುತ್ತಿಲ್ಲ?


ಕೃಪೆ : ಪ್ರಜಾವಾಣಿ

ಪತ್ರಿಕೆಯ ವರದಿ ಹೇಳುತ್ತಿದೆ. ಈಗ ಸದ್ಯಕ್ಕೆ ಜನರಿಗೆ ವಿತರಿಸಲು ಸಿದ್ದವಾಗಿರುವ ಮನೆಗಳ ಸಂಖ್ಯೆ ಕೇವಲ 1,497. ಈ ಮಳೆಗಾಲಕ್ಕೆ ಮುಂಚೆ ಇನ್ನು 10,935 ಮನೆಗಳನ್ನು ಮುಗಿಸುವ ಬಗೆಗೆ ಸರ್ಕಾರ ಭರವಸೆಯ ಮಾತಾಡುತ್ತಿದೆ. ಇರಲಿ ಸರ್ಕಾರ ತನ್ನ ಮಾತು ಉಳಿಸಿಕೊಳ್ಳುತ್ತದೆ ಎಂದೇ ಭಾವಿಸೋಣ. ಆದರೆ ಮುರುಕು ಗುಡಿಸಲುಗಳಿಗಿಂತಲೂ ಕಡೆಯಾದ ತಗಡಿನ ಶೆಡ್‌ಗಳಲ್ಲಿ ವಾಸಿಸುತ್ತಿರುವ ಉಳಿದ ಜನರ ಪಾಡೇನು ? ಹಾವು, ಚೇಳುಗಳ ಭೀತಿಯಲ್ಲಿ ಅವರು ಇನ್ನೂ ಎಷ್ಟು ರಾತ್ರಿಗಳನ್ನು ಅಲ್ಲಿ ಕಳೆಯಬೇಕಾಗಿದೆ ? ಬೀಸುವ ಗಾಳಿಗೆ ಹಾರಿ ಹೋಗುವ ತಗಡನ್ನು ಎತ್ತಿ ತರಲು ಕಾಯುತ್ತಾ ಅವರು ಇನ್ನೂ ಎಷ್ಟು ಬೇಸಿಗೆ, ಮಳೆಗಾಲವನ್ನು ಕಳೆಯ ಬೇಕಾಗಿದೆ. ಗದಗ್ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಸಮ್ಮೇಳನಾಧ್ಯಕ್ಷರು ಹಾಕಿದ ಸವಾಲಿಗೆ ಉತ್ತರಿಸಿದ ಮುಖ್ಯಮಂತ್ರಿ ಯಡಿಯೂರಪ್ಪ ಒಂದು ರಾತ್ರಿಯೇನೂ ಪ್ರವಾಹ ಸಂತ್ರಸ್ಥರ ಶೆಡ್‌ನಲ್ಲಿ ನಾಲ್ಕು ರಾತ್ರಿ ಕಳೆಯುತ್ತೇನೆ ಎಂದು ಘೋಷಿಸಿದರು. ಅವರು ಮರೆತು ಹೋದ ಎಷ್ಟೋ ಪ್ರತಿಜ್ಞೆಗಳ ಸಾಲಿಗೆ ಇನ್ನೊಂದರ ಸೇರ್ಪಡೆ ಆಗಿದ್ದು ಬಿಟ್ಟರೆ ಅದಕ್ಕಿಂತ ಹೆಚ್ಚಿಗೆ ಬೇರೇನೂ ಆಗಲಿಲ್ಲ.

ಈ ಸರ್ಕಾರ ನಿಜಕ್ಕೂ ಐದು ವರ್ಷದ ಅವಧಿ ಪೂರೈಸಬೇಕಾ ? ಇದನ್ನು ನಾವೇ ತಗಡಿನ ತಾತ್ಕಾಲಿಕ ಶೆಡ್‌ನಲ್ಲಿ ವಾಸಿಸುತ್ತಿರುವವರು ಎಂದು ಭಾವಿಸಿ ಹೇಳಬೇಕಾಗಿದೆ.

★

## ಉರ್ದು ಅಕಾಡೆಮಿ ವಜಾ ನ್ಯಾಯವೇ?

ಸಂಸ್ಕೃತ ಭಾರತದ ಎಲ್ಲ ಭಾಷೆಗಳ ತಾಯಿ ಅಂತ ಸುಳ್ಳು ಸುಳ್ಳೆ ಪುಂಖಾನುಪುಂಖ ಬುರುಡೆ ಬಿಡುವವರನ್ನು ನಾವು ನೋಡಿದ್ದೇವೆ. ಸಂಸ್ಕೃತ ಜಗತ್ತಿನ ಎಲ್ಲ ಭಾಷೆಗಳ ಮೂಲ ಅಂತ ಬುರುಡೆ ಬಿಡುವ ವೀರರಿಗೇನೂ ಕಡಿಮೆ ಇಲ್ಲ. ಇಂತಹದ್ದೇ ಹಲವು ಕೂಗಾಟಗಳು ಮೊನ್ನೆ ಬೆಂಗಳೂರಿನಲ್ಲಿ ನಡೆದ ವಿಶ್ವ ಸಂಸ್ಕೃತ ಪುಸ್ತಕ ಮೇಳಕ್ಕೆ ಸಂಬಂಧಿಸಿದ ಸಮಾರಂಭದ ವೇದಿಕೆಯಿಂದ ಕೇಳಿ ಬಂತು.

ಪಾಲಿ, ದ್ರಾವಿಡ ಗುಂಪಿನ ಭಾಷೆ ಗಳ್ಯಾವುವಕ್ಕೂ ಸಂಸ್ಕೃತ ಮೂಲವಲ್ಲ ಎಂಬುದು ಭಾಷಾ ವಿಜ್ಞಾನದ ಕನಿಷ್ಟ ತಿಳುವಳಿಕೆ ಇರುವವರಿಗೆ ಗೊತ್ತಿರುವ ವಿಷಯ.

ಉರ್ದು ಒಂದು ವಿದೇಶಿ ಬಾಷೆ ಎಂದು ಭಾವಿಸುವುದು ಒಂದು ಬಗೆಯ ಮೂಢ ನಂಬಿಕೆ ಹಾಗೂ ಕೋಮುದ್ವೇಷದ ರಾಜಕಾರಣವೇ. ಉರ್ದು ಭಾಷೆ ಭಾರತದ್ದೇ ನೆಲದಲ್ಲಿ ರೂಪುಗೊಂಡ ಒಂದು ಭಾರತೀಯ ಭಾಷೆ ಇಂತಹ ದ್ವೇಷದ ಆಧಾರದಲ್ಲೇ 1994 ರಲ್ಲಿ ದೂರದರ್ಶನದಲ್ಲಿ 10 ನಿಮಿಷಗಳ ಕಾಲದ ಉರ್ದು ವಾರ್ತೆ ಪ್ರಸಾರ ಮಾಡಲಾಗುವುದೆನ್ನುವ ಪ್ರಕಟಣೆ ಹೊರಬಿದ್ದ ಕೂಡಲೆ ಬೆಂಗಳೂರಿನಲ್ಲಿ ಗಲಭೆ ಆರಂಭವಾಗಿ ಬೆಂಕಿಬಿದ್ದಿತು.

ದೇಶಿಯಾದರೂ, ವಿದೇಶಿಯಾದರೂ ಯಾರೂ, ಯಾವ ಭಾಷೆಯನ್ನು ದ್ವೇಷಿಸಲೂ ಯಾವ ಕಾರಣಗಳೂ ಇಲ್ಲ. ಬಹುಶ: ಪೂರ್ಣವಾಗಿ ಸಂಸ್ಕೃತವನ್ನೇ ಮಾತನಾಡುವ ಒಂದೇ ಒಂದು ಗ್ರಾಮ ಅಥವಾ ಒಂದು ಪಟ್ಟಣ ಇಡೀ ಭಾರತದಲ್ಲಿ ಸಿಗುವುದಿಲ್ಲ. ಉರ್ದುವನ್ನು ತಾಯಿಭಾಷೆಯನ್ನಾಗಿ ಆಡುವ ಕೋಟ್ಯಾಂತರ ಜನರು ಭಾರತದಲ್ಲಿದ್ದಾರೆ. ಆದರೆ ಸಂಸ್ಕೃತ ಭಾಷೆಗೆ ನಮ್ಮ ಸರ್ಕಾರಗಳು ಮಾಡುವ ವೆಚ್ಚ, ನೀಡುವ ಆದ್ಯತೆಯನ್ನು ಅದೇ ಸರ್ಕಾರಗಳು ಉರ್ದುವಿನ ಬಗೆಗೆ ತೋರುವ ಧೋರಣೆಯೊಂದಿಗೆ ಹೋಲಿಸಿ ನೋಡಬೇಕು.

ಹಿಂದೆ ಶೂದ್ರರು, ಜನ ಸಾಮಾನ್ಯರು ಸಂಸ್ಕೃತವನ್ನು ಕಲಿಯದಂತೆ, ಬಳಸದಂತೆ ನಿರ್ಬಂಧ ಹೇರಲಾಗಿತ್ತು. ಆದರೆ ಈಗ ಅದೇ ಪುರೋಹಿತಶಾಹಿಗಳು ಸಂಸ್ಕೃತವನ್ನು ಕಡ್ಡಾಯ ಮಾಡುವ ಮೂಲಕ ಇಡೀ ದೇಶದ ಮೇಲೆ ಸಂಸ್ಕೃತವನ್ನು ಹೇರುವ ಸಂಚು ನಡೆಸುತ್ತಿರುವುದಕ್ಕೆ ಆಗಾಗ ಸಾಕ್ಷಿಗಳು ಸಿಗುತ್ತಲೇ ಇರುತ್ತವೆ.

ಈಗ ಇಷ್ಟೆಲ್ಲಾ ಯಾಕೆ ಯೋಚಿಸಬೇಕಾಗಿ ಬಂದಿದೆ ಎಂದರೆ ಕರ್ನಾಟಕ ರಾಜ್ಯದ ಬಿಜೆಪಿ ಸರ್ಕಾರವು ರಾಜ್ಯದ ಉರ್ದು ಅಕಾಡೆಮಿಯನ್ನು ಸರಾಸಗಟಾಗಿ ವಜಾ ಮಾಡಿದೆ.

ಉರ್ದು ಅಕಾಡೆಮಿಯ ಮುಖ್ಯಸ್ಥರು ಸರ್ಕಾರದ ಆದೇಶವನ್ನು ಪಾಲಿಸಲಿಲ್ಲ ಎಂಬುದು ಅದಕ್ಕೆ ಕಾರಣ. ಅಕಾಡೆಮಿಗಳು ಸ್ವಾಯುತ್ತ ಸಂಸ್ಥೆಗಳು. ಅವು ಕಂದಾಯ ಇಲಾಖೆ, ತಾಲ್ಲೂಕು ಕಚೇರಿಗಳಂತೆ ಸಕಾರದ ಆದೇಶ, ನಿರ್ದೇಶನ ಕಾಯುವ ಕಚೇರಿಗಳಂತಲ್ಲ ಎಂಬ ಕನಿಷ್ಟ ತಿಳುವಳಿಕೆ ಆಳುವ ಸರ್ಕಾರಗಳಿಗೆ ಇರಬೇಕು. ಅದು ಇಲ್ಲದಿರುವಾಗ ಇಂತಹ ಅವಾಂತರಗಳು ಸಂಭವಿಸುತ್ತವೆ. ಜೊತೆಗೆ ಈಗಾಗಲೇ ಹೇಳಿರುವಂತೆ ಆರೆಸ್ಸೆಸ್ ಪ್ರೇರಿತ ಉರ್ದು ದ್ವೇಷವೂ ಮಿದುಳಿನಲ್ಲಿ ತನ್ನ ಕೆಲಸ ಮಾಡುತ್ತಿದ್ದರೆ ಬೇರೆ ಇನ್ನೇನು ತಾನೆ ಆಗಲು ಸಾಧ್ಯ !?

○

## ಮಳೆ ಹಾನಿಗೆ ಪರಿಹಾರವಿಲ್ಲ.... ಆದರೆ

ಪ್ರಸ್ತುತ ವರ್ಷದಲ್ಲಿ ಅಕಾಲಿಕ ಮಳೆ ವ್ಯಾಪಕ ಹಾನಿ ಮಾಡಿದೆ. ಚಿಕ್ಕ ಮಗಳೂರು ಜಿಲ್ಲೆಯಲ್ಲಿಯೂ ವ್ಯಾಪಕ ಹಾನಿ ಆಗಿದೆ. ಕಾಫಿ ಬೆಳೆ, ಇತರೆ ಬೆಳೆ ರಸ್ತೆ, ಸೇತುವೆಗಳಿಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಹಾನಿಯಾಗಿ ಸುಮಾರು 100 ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ ಎಂದು ಅಂದಾಜು ಮಾಡಲಾಗಿದೆ.

ಈ ನಷ್ಟಕ್ಕೆ ಪರಿಹಾರವಾಗಿ ರಾಜ್ಯ ಬಿಜೆಪಿ ಸರ್ಕಾರ ನೀಡಿರುವ ಪರಿಹಾರ ಎಷ್ಟು ಗೊತ್ತೇ? 1 ಕೋಟಿ ರೂ. ಹೌದು ಕೇವಲ 1 ಕೋಟಿ. ಆದರೆ ಪ್ರಸಕ್ತ ವರ್ಷದಲ್ಲಿ ಇದೇ ಬಿಜೆಪಿ ರಾಜ್ಯ ಸರ್ಕಾರ ಇದೇ ಚಿಕ್ಕಮಗಳೂರು ಜಿಲ್ಲೆಯ ಮಠಗಳು, ದೇವಾಲಯಗಳಿಗೆ ಬಿಡುಗಡೆ ಮಾಡಿರುವ ಕೊಡುಗೆ ಅನುದಾನ ಎಷ್ಟು ಗೊತ್ತೇ? 3.75 ರೂಪಾಯಿ.

ರಾಜ್ಯ ಬಿಜೆಪಿ ಸರ್ಕಾರದ ಆದ್ಯತೆ ಏನು? ಇದರ ಕಾಳಜಿ ಏನು? ಇದರಲ್ಲೇ ಗೊತ್ತಾಗುತ್ತಲೆ ಅಲ್ಲವೇ?

○

### ಹಣದ ಮಾನ

ಕರಗಳ್ಳ, ಗಣಿಗಳ್ಳ ತಪ್ಪಿಸಲು ತೆರಿಗೆ
ಎಸೆಯುವರು ಕೋಟಿ ಹಣ ಆ ಹುಂಡಿ ಒಳಗೆ
ಬೆವರಿಳಿಸಿ ದುಡಿದ ಹಣ ಇವುಗಳಿಗೆ ದಾನ
ಮಾಡುತ್ತ ಕಡಿಸದಿರಿ ಈ ಹಣದ ಮಾನ

### ಒಪ್ಪುವನೇ ಒಡೆಯ


ಸುಲಿಗೆ ಮಾಡಿದ ಹಣದಿ ಗುಡಿಯನು ಕಟ್ಟಿ
ಕೆಲವು ಜನ ಪ್ರಚಾರ ಪಡೆಯುವರು ಬಿಟ್ಟಿ
ಆ ಕೊಳಚೆ ಹಣದಿಂದ ಕಟ್ಟಿರುವ ಗುಡಿಯ
ಒಳಗಿರಲು ಒಪ್ಪುವನೆ ಆ ನಿಮ್ಮ ಒಡೆಯ

- ವಿಡಂಬಾರಿ

# ಬೆಲೆಯೇರಿಕೆಯ ಗಾಯದ ಮೇಲೆ ಪೆಟ್ರೋಲ್ ದರ ಏರಿಕೆಯ ಬರೆ

ಕಳೆದ ವಾರ ಬೆಲೆಯೇರಿಕೆಗಳಿಂದ ಕಕ್ಕಾಬಿಕ್ಕಿಯಾದಂತೆ ಕಾಣುತ್ತಿದ್ದ ಯುಪಿಎ-2 ಸರಕಾರದ ಹಿರಿಯರು ಬೆಲೆಯೇರಿಕೆಯ ತಡೆಗೆ ತುರ್ತು ಸಭೆ ಸೇರಿ ಕ್ರಮಗಳನ್ನು 2-3 ದಿನಗಳಲ್ಲಿ ಪ್ರಕಟಿಸುತ್ತಾರೆ ಎಂದು ಹೇಳಲಾಗಿತ್ತು ಆದರೆ ಅಂತಹ ಪ್ರಕಟಣೆಯೇನೂ ಬರಲಿಲ್ಲ- ಆದರೆ ಸಂಕಟಗ್ರಸ್ತ ಜನಸಾಮಾನ್ಯರನ್ನು ಗೇಲಿ ಮಾಡುವಂತೆ ಪೆಟ್ರೋಲ್ ದರಗಳಲ್ಲಿ 4 ಶೇ. ಹೆಚ್ಚಳಮಾಡಲಾಗಿದೆ- ಇದು ಕಳೆದ ಆರು ತಿಂಗಳಲ್ಲಿ ಆರನೇ ಹೆಚ್ಚಳ. ಪೆಟ್ರೋಲ್ ಬೆಲೆಗಳ ಮೇಲೆ ಹತೋಟಿ ತೆಗೆದ ಮೇಲೆ ಈ ಆರು ತಿಂಗಳಲ್ಲಿ ಪೆಟ್ರೋಲ್ ದರಗಳಲ್ಲಿ ಸುಮಾರು 21 ಶೇ. ಏರಿಕೆಯಾಗಿದೆಯೆಂದು ಲೆಕ್ಕ ಹಾಕಲಾಗಿದೆ. ಯುಪಿಎ-2 ಸರಕಾರದ ನೇತೃತ್ವದಲ್ಲಿರುವ ಕಾಂಗ್ರೆಸ್ ಇದು ತೈಲ ಕಂಪನಿಗಳ ನಿರ್ಧಾರ, ಅವರು ಇದಕ್ಕೆ ವಿವರಣೆ ಕೊಡಬೇಕು ಎಂದು ಹೊಣೆ ಜಾರಿಸಿಕೊಳ್ಳಲು ಪ್ರಯತ್ನಿಸಿದರೂ ಸಫಲವಾಗಿಲ್ಲ. ಪೆಟ್ರೋಲಿಯಂ ಮಂತ್ರಿಗಳು ಎಂದಿನ ಕಾರಣ ಕೊಟ್ಟು ಈ ಏರಿಕೆ ಅನಿವಾರ್ಯವಾಗಿತ್ತು ಎಂದಿದ್ದಾರೆ.

ಯುಪಿಎ-2 ಪಾಲುದಾರ ಪಕ್ಷ ತೃಣಮೂಲ ಕಾಂಗ್ರೆಸ್ ಮುಖ್ಯಸ್ಥೆ ತಮ್ಮನ್ನು ಕೇಳದೇ ಈ ಬೆಲೆಯೇರಿಕೆ ಮಾಡಲಾಗಿದೆ, ಇದಕ್ಕೆ ತಮ್ಮ ವಿರೋಧವಿದೆ ಎಂದು ಮತ್ತೊಮ್ಮೆ ನಾಟಕವಾಡಿದ್ದಾರೆ. ತೃಣಮೂಲ ಕಾಂಗ್ರೆಸ್ ಕೊಲ್ಕತಾದಲ್ಲಿ ಪ್ರತಿಭಟನಾ ಸಭೆಯನ್ನೂ ನಡೆಸಿತು. ಈ ಮುಖ್ಯಸ್ಥೆ ಆ ಸಭೆಯಲ್ಲಿ ಭಾಗವಹಿಸಿರಲಿಲ್ಲ. ಕಾಂಗ್ರೆಸ್ ವಕ್ತಾರರ ಹೇಳಿಕೆ ಆಕೆಯ ಗೋಸುಂಬೆತನವನ್ನು ಬಯಲು ಮಾಡಿದೆ. ಪೆಟ್ರೋಲ್ ದರಗಳ ಮೇಲಿನ ಹತೋಟಿ ತೆಗೆಯಬೇಕೆಂಬ ಯುಪಿಎ-2 ಸಂಪುಟ ನಿರ್ಣಯಕ್ಕೆ ಆಕೆಯ ಬೆಂಬಲವೂ ಇತ್ತು, ವಿರೋಧವಂತೂ ಇರಲಿಲ್ಲ. ದರ ಏರಿಕೆಗೆ ಸಾರಾಸಗಟು ಒಪ್ಪಿಕೊಂಡು ಈಗ ಹಾರಾಡುವುದು ನಾಟಕವಲ್ಲದಿದ್ದರೆ ಇನ್ನೇನು?







ಈ ನಡುವೆ ಯೋಜನಾ ಆಯೋಗದ ಉಪಾಧ್ಯಕ್ಷರು ಆಹಾರ ಬೆಲೆಗಳ ಏರಿಕೆ ಸಮೃದ್ಧಿಯ ಒಂದು ಸಂಕೇತ ಎಂದಿದ್ದಾರೆ! ಈ ಹಿಂದೆ ಅಮೆರಿಕಾದ ಅಧ್ಯಕ್ಷ ಬುಶ್ ಭಾರತೀಯರು ಮತ್ತು ಚೀನೀಯರು ಹೆಚ್ಚು ತಿನ್ನುತ್ತಿರುವುದರಿಂದ ಜಗತ್ತಿನಲ್ಲಿ ಆಹಾರ ವಸ್ತುಗಳ ಬೆಲೆಯೇರಿಕೆಯಾಗುತ್ತಿದೆ ಎಂದದ್ದು ನೆನಪಾಗುತ್ತಿದೆಯಲ್ಲವೇ? ಸಮಾನಮನಸ್ಕರೇ ಅಥವಾ ವಿಧೇಯ ಹಿಂಬಾಲಕರೇ?

ಅಹ್ಲುವಾಲಿಯರವರ ತರ್ಕ ಸರಳ- ಹಣದುಬ್ಬರ ಸಂಭವಿಸುವುದು ಬೇಡಿಕೆ ಹೆಚ್ಚಿದಾಗ; ಬೇಡಿಕೆ ಹೆಚ್ಚುವುದೆಂದರೆ ಜನರ ಬಳಿ ಹೆಚ್ಚು ಹಣವಿದೆ, ಸಮೃದ್ಧಿ ಹೆಚ್ಚಿದೆಯೆಂದು ಅರ್ಥ ತಾನೇ? ಈ ತರ್ಕವನ್ನು ಒಪ್ಪುವುದಾದರೆ ಹಣದುಬ್ಬರ ಶಾಶ್ವತವಾಗಿರಬೇಕು. ಏಕೆಂದರೆ ಸಮೃದ್ಧಿ ಹೆಚ್ಚಿದ್ದರೆ ಬೇಡಿಕೆ ಇಳಿಯುವ ಪ್ರಶ್ನೆಯಿಲ್ಲ, ಅಂದರೆ ಹಣದುಬ್ಬರ ಇಳಿಯುವ ಪ್ರಶ್ನೆಯೇ ಇಲ್ಲ. ಆದರೆ ಇಂತಹ ಒಂದು ಚಿತ್ರ ಅಹ್ಲುವಾಲಿಯಾ ಎದುರು ಕೂಡ ಇರಲಿಕ್ಕಿಲ್ಲ. ಏಕೆಂದರೆ ಆಗ ಹಣದುಬ್ಬರ ಕಡಿಮೆ ಮಾಡುತ್ತೇವೆ ಎಂದರೆ 'ಸಮೃದ್ಧಿ'ಯನ್ನು ಇಳಿಸುತ್ತೇವೆ ಎಂದಾಗುವುದಿಲ್ಲವೇ ಎಂದು ಒಬ್ಬ ತಜ್ಞರು ಪ್ರಶ್ನಿಸಿದ್ದಾರೆ.

## ಕೈಗಾರಿಕಾ ಬೆಳವಣಿಗೆಯಲ್ಲೂ ಕುಸಿತ

ಭ್ರಷ್ಟಾಚಾರದ ಹಗರಣಗಳು, ಬೆಲೆಯೇರಿಕೆಗಳಿಂದ ಸುಸ್ತಾದಂತಿರುವ ಯುಪಿಎ-2 ಸರಕಾರಕ್ಕೆ ಕಳೆದ ವಾರ ಇನ್ನೊಂದು ಆಘಾತವೂ ಕಾದಿತ್ತು. ಕೈಗಾರಿಕಾ ಬೆಳವಣಿಗೆಯ ದರ ನವಂಬರ್ ತಿಂಗಳಲ್ಲಿ 2.7 ಶೇ. ಕ್ಕೆ ಕುಸಿದಿದೆ. ಅಕ್ಟೋಬರ್ ತಿಂಗಳಲ್ಲಿ ಇದು 11.3 ಶೇ. ಇತ್ತು! ಕಳೆದ ವರ್ಷ ಈ ತಿಂಗಳಲ್ಲಿ ಬೆಳವಣಿಗೆ ದರ ಇದ್ದಕ್ಕಿದ್ದಂತೆ ಏರಿದ್ದು, ಅದನ್ನು ಆಧರಿಸಿದ ಈ ವರ್ಷದ ಬೆಳವಣಿಗೆ ದರ ಕಡಿಮೆಯಾಗಿದೆ ಎಂಬ ಸಮಜಾಯಿಷಿ ಕೊಡಲು ಹೋಗಿರುವ ಹಣಕಾಸು ಮಂತ್ರಿಗಳಿಗೂ ಇದು ಸರಿಯಾದ ಸಮರ್ಥನೆಯಾಗಲಾರದು ಎಂಬ ಸಂದೇಹವಿದ್ದಂತಿದೆ. - 'ಹಣದುಬ್ಬರ ಹೆಚ್ಚುತ್ತಿದೆ, ಕೈಗಾರಿಕಾ ಉತ್ಪಾದನೆ ಇಳಿಯುತ್ತಿದೆ, ಇದು ಪ್ರತಿಕೂಲ ಪ್ರಭಾವ ಬೀರುತ್ತದೆ; ಆದರೆ ನಾನೇನೂ ಈಗಲೇ ತೀರ್ಮಾನಕ್ಕೆ ಬರುವುದಿಲ್ಲ' ಎಂದಿದ್ದಾರೆ!

★

### ಸಿಎಜಿ ಮೇಲೆ ಕಾಂಗ್ರೆಸ್ ದಾಳಿ: ತರಹಾವರಿ ದನಿಗಳೇಕೆ?

2ಜಿ ತರಂಗಾಂತರ ಕುರಿತ ಸಿಎಜಿ ಲೆಕ್ಕಾಚಾರದ ಮೇಲೆ ಕಾಂಗ್ರೆಸ್ ನಿಲುವು 'ಎರಡು ಹೆಜ್ಜೆ ಮುಂದೆ, ಒಂದು ಹೆಜ್ಜೆ ಹಿಂದೆ' ಎಂಬ ತಂತ್ರ ಅನುಸರಿಸುವಂತೆ ಕಾಣುತ್ತಿದೆ ಎಂದು ಒಬ್ಬ ಪತ್ರಕರ್ತರು ಅಭಿಪ್ರಾಯ ಪಟ್ಟಿದ್ದಾರೆ. ಸಿಎಜಿ ವರದಿ ಸಲ್ಲಿಸಿ, ಅದರಿಂದಾಗಿ

ಪುಟ 15 ಕ್ಕೆ

# 'ಆಮ್ ಆದ್ಮಿ'ಯ ಬಗ್ಗೆ ಕಾಳಜಿಯಿದೆಯೇ?

ನಿಜವಾಗಿಯೂ ಯುಪಿಎ-2 ಸರಕಾರ 'ಆಮ್ ಆದ್ಮಿ'ಯ ಸಂಕಟಗಳ ಬಗ್ಗೆ ತಲೆಕೆಡಿಸಿಕೊಂಡಿದೆಯೇ? ಈ ಕೆಳಗಿನ ಸುದ್ದಿಗಳನ್ನು ಕೇಳಿದರೆ ಹಾಗನಿಸುವುದಿಲ್ಲ. ಬೆಲೆಯೇರಿಕೆ ಬೇಡಿಕೆ- ಪೂರೈಕೆಯ ಹೊಂದಾಣಿಕೆಯಿಲ್ಲದೆ ಉಂಟಾಗಿರುವ ಸಮಸ್ಯೆ ಎಂಬ ತರ್ಕದ ನೆರಳಲ್ಲಿ ಈ ಸರಕಾರ ಇನ್ನೂ ಮುಂದುವರೆದು ಬಹು-ಬ್ರಾಂಡ್ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಯನ್ನು 51 ಶೇ.ಕ್ಕೆ ಹೆಚ್ಚಿಸುವ ನವ-ಉದಾರವಾದಿಗಳ ಬಹುದಿನಗಳ ಆಶಯವನ್ನು ಸಾಧಿಸಿಕೊಳ್ಳುವ ಹುನ್ನಾರ ನಡೆಸಿದೆ ಎಂದು ತಿಳಿದು ಬಂದಿದೆ. ಬೇಡಿಕೆ-ಪೂರೈಕೆ ಹೊಂದಾಣಿಕೆಯ, ಆಮೂಲಕ ಆಹಾರವಸ್ತುಗಳ ಬೆಲೆಯೇರಿಕೆ ತಡೆಗೆ ನೆರವಾಗುತ್ತದೆಂಬ ನೆಪವೊಡ್ಡಿ ಮುಂದಿನ ಬಜೆಟನಲ್ಲಿ ಈ ಪ್ರಸ್ತಾವ ಬರಲಿದೆ ಎಂದು ಹೇಳಲಾಗುತ್ತಿದೆ.

ಎರಡನೆಯದಾಗಿ 'ಬಡ್ಡಿ ಅಮಾನತು ಖಾತೆ'ಯಲ್ಲಿ 1731 ಕೋಟಿ ರೂ. ಮಿಗುತೆಯನ್ನು ಕಂಡ ಕಾರ್ಮಿಕ ಸಂಘಟನೆಗಳು ಅದರ ಆಧಾರದಲ್ಲಿ ಭವಿಷ್ಯ ನಿಧಿಯ ಮೇಲೆ ಬಡ್ಡಿದರವನ್ನು 8.5 ಶೇ. ದಿಂದ 9.5 ಶೇ.ಕ್ಕೆ ಏರಿಸಲು ಒತ್ತಾಯಿಸಿದವು. ಕಾರ್ಮಿಕ ಇಲಾಖೆ ಇದಕ್ಕೆ ಒಪ್ಪಬೇಕಾಯಿತು. ಆದರೆ ಯುಪಿಎ-2 ಸರಕಾರದ ಹಣಕಾಸು ಇಲಾಖೆ ಇದಕ್ಕೆ ಇನ್ನೂ ಮಂಜೂರಾತಿ ಕೊಡಲು ನಿರಾಕರಿಸುತ್ತಿದೆ. ಕಾರ್ಮಿಕ ಇಲಾಖೆಯ ಲೆಕ್ಕಾಚಾರ ತಪ್ಪು ಎಂದು ಕಾರಣ ಕೊಡುತ್ತಿದೆ.

ಮೂರನೇಯದಾಗಿ, ಇದೇ ಯುಪಿಎ ಯ ಪ್ರಧಾನಿಗಳು ಭಾರತೀಯ ಕಾರ್ಮಿಕ ಸಮ್ಮೇಳನ (ಐಎಲ್‌ಸಿ) ದಲ್ಲಿ 10 ಲಕ್ಷ ಕಾರ್ಮಿಕರು ಸಪ್ಟೆಂಬರ್ ಮುಷ್ಕರದಲ್ಲಿ ಮುಂದಿಟ್ಟ ಬೇಡಿಕೆಗಳ ಬಗ್ಗೆ ಚಕಾರವೆತ್ತಲಿಲ್ಲ; ಆದರೆ ಕಾಂಟ್ರಾಕ್ಟ್ ಕಾರ್ಮಿಕ ಕಾನೂನನ್ನು ಸಡಿಲಗೊಳಿಸಬೇಕೆಂಬ ಮಾಲಕರ ಬೇಡಿಕೆಗೆ ಸ್ಪಂದಿಸಲು ಹಿಂದೆ-ಮುಂದೆ ನೋಡಲಿಲ್ಲ.

ನಾಲ್ಕನೇಯದಾಗಿ, ರೇಗಾದ ಅಡಿಯಲ್ಲಿ ಕೂಲಿದರಗಳನ್ನು ಕನಿಷ್ಟ ಕೂಲಿ ಶಾಸನದಡಿ ತರದಿರಲು ಯುಪಿಎ-2 ಸರಕಾರ ನಿರ್ಧರಿಸಿದೆಯಂತೆ. ಇದು ಜೀವನಾವಶ್ಯಕ ವಸ್ತುಗಳ ಬೆಲೆಯೇರಿಕೆ ತಡೆಯಲಾರದ ಸರಕಾರ ಗ್ರಾಮೀಣ ಶ್ರಮಜೀವಿಗಳಿಗೆ ಮಾಡಿರುವ ಇನ್ನೊಂದು ವಿಶ್ವಾಸಘಾತ ಎಂದು ಅಖಿಲ ಭಾರತ ಕೃಷಿಕೂಲಿಕಾರರ ಸಂಘ ಬಲವಾಗಿ ಟೀಕಿಸಿದೆ. ದೇಶದ 19 ರಾಜ್ಯಗಳಲ್ಲಿ ಈಗ ಕನಿಷ್ಟ ಕೂಲಿ ರೇಗಾದ ಅಡಿಯಲ್ಲಿ ಕೊಡುವ 100ರೂ.ಗಿಂತ ಹೆಚ್ಚಾಗಿದೆ. ಅಲ್ಲದೆ ಆ ಶಾಸನದಡಿ ಸ್ವಲ್ಪ ಮಟ್ಟಿಗಾದರೂ ಹಣದುಬ್ಬರದಿಂದ ರಕ್ಷಣೆಯಿದೆ. ಆದರೆ ರೇಗಾ ಕೂಲಿಗಳಿಗೆ ಕನಿಷ್ಟ ಕೂಲಿ ಶಾಸನ ಅನ್ವಯವಾಗಬಾರದು ಎಂದು ನಿರ್ಧರಿಸುವ ಮೂಲಕ ಈ ರಾಜ್ಯಗಳ ಕೂಲಿಕಾರರನ್ನು ವಂಚಿಸಲಾಗಿದೆ. ಆಹಾರ ಭದ್ರತೆಯ ಕಾನೂನಿನಂತೆ ರೇಗಾ ಕೂಲಿ ಕುರಿತ ಈ ನಿರ್ಣಯ ಕೂಡ ಇಂತಹ ಕಾರ್ಯಕ್ರಮವನ್ನು ಬುಡಮೇಲು ಮಾಡುವ ಪ್ರಯತ್ನ ಎಂದು ಕೃಷಿ ಕೂಲಿಕಾರರ ಸಂಘ ಅಭಿಪ್ರಾಯ ಪಟ್ಟಿದೆ.

ಆಹಾರ ಭದ್ರತಾ ಶಾಸನವಂತೂ, ರಂಗರಾಜನ್ ಸಮಿತಿಯ ವರದಿಯನ್ನು ಅಂಗೀಕರಿಸಿದರೆ, ನಿರರ್ಥಕವಾಗಿ ಬಿಡುತ್ತದೆ. 'ಬಡತನದ ರೇಖೆಯ ಮೇಲಿರುವ' (ಎಪಿಎಲ್) ಕುಟುಂಬಗಳಿಗೂ ಸಬ್ಸಿಡಿ ದರಗಳಲ್ಲಿ ಆಹಾರವಸ್ತುಗಳನ್ನು ಭಾಗಶಃ ಕೊಡಬೇಕು ಎಂಬ ಸೋನಿಯಾ ಅಧ್ಯಕ್ಷತೆಯ 'ರಾಷ್ಟ್ರೀಯ ಸಲಹಾ ಸಮಿತಿ'(ಎನ್‌ಎಸಿ)ಯ ಶಿಫಾರಸನ್ನು ಯುಪಿಎ-2 ಸರಕಾರ ನೇಮಿಸಿದ ರಂಗರಾಜನ್ ಸಮಿತಿ ತಿರಸ್ಕರಿಸಿದೆ. ಯುಪಿಎ-2 ಸರಕಾರಕ್ಕೆ ಮೊದಲೇ ಎನ್‌ಎಸಿ ಶಿಫಾರಸನ್ನು ಶಾಸನದಲ್ಲಿ ಅಳವಡಿಸಿಕೊಳ್ಳುವ ಮನಸ್ಸಿರಲಿಲ್ಲ. ಸಬ್ಸಿಡಿ ದರಗಳಲ್ಲಿ ಆಹಾರವಸ್ತುಗಳನ್ನು ಕೃತಕವಾಗಿ ಸೃಷ್ಟಿಸಿರುವ ಬಡತನದ ರೇಖೆಯ ಕೆಳಗಿರುವವರಿಗೆ (ಬಿಪಿಎಲ್) ಮಾತ್ರವೇ ಸೀಮಿತಗೊಳಿಸುವುದಾದರೆ 'ಆಹಾರ ಭದ್ರತಾ ಶಾಸನ' ಎಂಬುದರ ಅಗತ್ಯವಾದರೂ ಏನಿದೆ ಎಂದು ತಜ್ಞರು ಪ್ರಶ್ನಿಸಿದ್ದಾರೆ.

## ಜಗದಗಲ

ಶರತ್‌ಚಂದ್ರ

# ಪಾಕಿಸ್ತಾನದ ಪಂಜಾಬ್ ಗವರ್ನರ್ ಹತ್ಯೆ



ಪಾಕಿಸ್ತಾನದ ಪಂಜಾಬಿನ ಗವರ್ನರ್ ಸಲ್ಮಾನ್ ತಾಸಿರ್ ಅವರನ್ನು ಅವರ ರಕ್ಷಣಾ ದಳದ ಒಬ್ಬ ಸೈನಿಕನೇ ಗುಂಡು ಹಾರಿಸಿ ಕೊಂದಿದ್ದಾನೆ. ಅವರು ರಾಜಧಾನಿ ಇಸ್ಲಾಮಾಬಾದಿನ ಮನೆಯ ಹತ್ತಿರವೇ ಈ ಕೊಲೆ ನಡೆದಿದೆ. ತಾಸಿರ್ ಪಾಕಿಸ್ತಾನದ "ಧರ್ಮನಿಂದೆ ಕಾನೂನು" ವಿರೋಧಿಸುತ್ತಿರುವ ಕಾರಣಕ್ಕೆ ಅವರ ಕೊಲೆ ಮಾಡಿರುವುದಾಗಿ ಬಂಧಿಸಲ್ಪಟ್ಟಿರುವ ಹಂತಕ ಬಹಿರಂಗ ಹೇಳಿಕೆ ನೀಡಿದ್ದಾನೆ. ಹಂತಕ ಸೈನಿಕ ತಾಸಿರ್ ಪಂಜಾಬಿನಲ್ಲಿ ಇದ್ದಾಗ ಕೊಡಲಾಗುವ ರಕ್ಷಣಾ ದಳದ ಸೈನಿಕನಲ್ಲ. ಅವರ ಇಸ್ಲಾಮಾಬಾದ್ ಭೇಟಿಯ ಸಮಯಕ್ಕೆ ನೇಮಿಸಲಾದ ವಿಶೇಷ ರಕ್ಷಣಾ ದಳದ ಸೈನಿಕ. ಆತನ ಇಸ್ಲಾಮಿಕ್ ಮೂಲಭೂತವಾದಿ ನಿಲುವಿನ ಬಗ್ಗೆ ಗೊತ್ತಿದ್ದೂ ಆತನನ್ನು ವಿಶೇಷ ರಕ್ಷಣಾ ದಳಕ್ಕೆ ಆರಿಸಿದ್ದು ಹಂತಕ ಒಬ್ಬಂಟಿಯಲ್ಲ ಎಂಬ ತೀವ್ರ ಸಂಶಯ ಮೂಡಿಸಿದೆ. ತಾಸಿರ್ ಅವರ ಹತ್ಯೆ ಪಾಕಿಸ್ತಾನದ ಪ್ರಜಾಪ್ರಭುತ್ವವನ್ನು ಅಸ್ಥಿರಗೊಳಿಸಿ ಪುನಃ ಮಿಲಿಟರಿ ಆಡಳಿತ ಹೇರುವ ಮಿಲಿಟರಿ-ಮೂಲಭೂತವಾದಿ ಸಂಚಿನ ಭಾಗ ಎನ್ನಲಾಗಿದೆ.

ಸಲ್ಮಾನ್ ತಾಸಿರ್ ಭುಟ್ಟೊ ಅವರು ಪಾಕಿಸ್ತಾನ ಪೀಪಲ್ಸ್ ಪಾರ್ಟಿ (ಪಿಪಿಪಿ) ಯ ಸಂಸ್ಥಾಪಕ ಸದಸ್ಯರಲ್ಲಿ ಒಬ್ಬರಾಗಿದ್ದು ಜಾತ್ಯತೀತತೆ ಎತ್ತಿ ಹಿಡಿದ ಇಸ್ಲಾಮಿಕ್ ಮೂಲಭೂತವಾದದ ಪ್ರಬಲ ವಿರೋಧಿಯಾಗಿದ್ದರು. 1980 ರಲ್ಲಿ ಜನರಲ್ ಜಿಯಾ-ಉಲ್-ಹಕ್ ಅವರು ತಂದ ಧರ್ಮನಿಂದೆ ಕಾನೂನನ್ನು ಬಲವಾಗಿ ವಿರೋಧಿಸಿದ ನಾಯಕರಲ್ಲಿ ಒಬ್ಬರು. ಆ ಕಾನೂನನ್ನು ಕ್ರಿಶ್ಚಿಯನ್ ಮುಂತಾದ ಧಾರ್ಮಿಕ ಅಲ್ಪಸಂಖ್ಯಾತರು ಮತ್ತು ರಾಜಕೀಯ ವಿರೋಧಿಗಳಿಗೆ ಕಿರುಕುಳ ಕೊಡಲು ದಮನ ಮಾಡಲು ಬಳಸಲಾಗುತ್ತಿದೆ. ಅದನ್ನು ತೆಗೆಯಬೇಕು ಎಂದು ಅವರ ನಿಲುವಾಗಿತ್ತು. 1983 ರಲ್ಲಿ ಪ್ರಜಾಪ್ರಭುತ್ವ ಮರುಸ್ಥಾಪನಾ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಅವರನ್ನು ಬಂಧಿಸಿ ಲಾಹೋರ್ ಕೋಟೆ ಜೈಲಿನಲ್ಲಿ ಇಟ್ಟು ಭೀಕರ ಚಿತ್ರಹಿಂಸೆಗೆ ಗುರಿ ಮಾಡಲಾಗಿತ್ತು. ಪ್ರಸಿದ್ಧ ಉರ್ದು ಪ್ರಗತಿಪರ ಕವಿ ಫೈಜ್ ಅಹ್ಮದ್ ಫೈಜ್ ಅವರನ್ನು 1958 ರಲ್ಲಿ ಅವರ ಜಾತ್ಯತೀತ ಪ್ರಗತಿಪರ ಧೋರಣೆಗಳಿಗಾಗಿ ಇದೇ ಜೈಲಿನಲ್ಲಿ ಇಡಲಾಗಿತ್ತು ಅದು ಬರಿಯ ಕಾಕತಾಳೀಯವಲ್ಲ. ಫೈಜ್ ಅಹ್ಮದ್ ಫೈಜ್ ತಾಹಿರ್ ಅವರ ಸೋದರ ಮಾವ ಆಗಿದ್ದರು. ತಾಸಿರ್ ಆ ಮೇಲೆ ಶರೀಯತ್ ಕಾನೂನು ತಂದ ನವಾಜ್ ಶರೀಫ್ ಸರ್ಕಾರದ ಕ್ರಮವನ್ನೂ ವಿರೋಧಿಸಿ ಶರೀಫರ ಗೂಂಡಾಗಳಿಂದ ದಾಳಿಗೆ ಗುರಿಯಾಗಿ ಹಲವು 'ಮೂಳೆ ಮುರಿತ' ಗಳನ್ನೂ ಅನುಭವಿಸಿದ್ದರು.

ತಾನು ಮುಟ್ಟಿದ ಆಹಾರ-ನೀರು ಸೇವಿಸಲು ನಿರಾಕರಿಸಿದ ಮುಸ್ಲಿಂ ಕೂಲಿಕಾರರರನ್ನು ಹೀಗೆ ಯಾಕೆ ಎಂದು ಪ್ರಶ್ನಿಸಿದ ಕ್ರಿಶ್ಚಿಯನ್ ಕೃಷಿ ಕೂಲಿಕಾರ ಮಹಿಳೆ ಆಸಿಯಾ ಬಿಬಿಯ ಮೇಲೆ "ಧರ್ಮನಿಂದೆ"ಯ ಅನ್ವಯ ಕೇಸು ಹಾಕಿ ಮರಣ ದಂಡನೆ ಹಾಕಲಾಗಿದೆ. ಆಕೆಯ ಕೇಸಿನಲ್ಲಿ ಮೇಲಿನ ಕೋರ್ಟಿಗೆ ಅಪೀಲು ಮಾಡಲು ತಾಸಿರ್ ಆಸಕ್ತಿ ತೋರಿಸಿದ್ದು ಅವರ "ಅಪರಾಧ" ಆಗಿತ್ತು. ಅಫ್-ಪಾಕ್ ತಂತ್ರಕ್ಕೆ ಪಾಕಿಸ್ತಾನಿ ಮಿಲಿಟರಿ-ಐಎಸ್‌ಐ ದುಷ್ಟಕೂಟದ ಬೆಂಬಲ ಗಳಿಸಲು ಅಮೆರಿಕದ ತರಾತುರಿ ಬಳಸಿ ಪುನಃ ತನ್ನ ಅಧಿಪತ್ಯ ಸ್ಥಾಪಿಸಲು ಅದು ಪ್ರಯತ್ನಿಸುತ್ತಿದೆ. ಮಿಲಿಟರಿ-ಐಎಸ್‌ಐ ದುಷ್ಟಕೂಟವೇ ಹುಟ್ಟು ಹಾಕಿದ ಇಸ್ಲಾಮಿಕ್ ಮೂಲಭೂತವಾದಿ ಶಕ್ತಿಗಳು ಯಾವಾಗಲೂ ಅದರ ಸಹಚರರು. ಗಿಲಾನಿ ನಾಯಕತ್ವದ ಸಂಯುಕ್ತ ಸರ್ಕಾರ ಇದನ್ನು ದೃಢವಾಗಿ ಎದುರಿಸಲು ಸಮರ್ಥವಾಗಿಲ್ಲ. ಆದರೆ ಪಾಕಿಸ್ತಾನದ ಜಾತ್ಯತೀತ-ಪ್ರಜಾಪ್ರಭುತ್ವ ಶಕ್ತಿಗಳು ಇದಕ್ಕೆ ತೀವ್ರ ಪ್ರತಿರೋಧ ಒಡ್ಡಿದ್ದು, ತಾಹಿರ ಅವರ ಹತ್ಯೆ ಅದನ್ನು ಹತ್ತಿಕ್ಕಲು ಮಾಡಿದ ದಾಳಿ ಎನ್ನಬಹುದು. ಪಾಕಿಸ್ತಾನದ ಕಮ್ಯುನಿಸ್ಟ್ ಪಕ್ಷ ತಾಸಿರ್ ಅವರ ಹತ್ಯೆಯನ್ನು ತೀವ್ರವಾಗಿ ಖಂಡಿಸಿ, ತಾಹಿರ್ ಹಂತಕರನ್ನು ಶಿಕ್ಷಿಸುವಂತೆ ಮತ್ತು "ಧರ್ಮನಿಂದೆ ಕಾನೂನು" ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿದೆ. ಮಿಲಿಟರಿ-ಮೂಲಭೂತವಾದಿ ಕೂಟದ ದೇಶ-ವಿರೋಧಿ ಸಂಚುಗಳ ವಿರುದ್ಧ ಜಾತ್ಯತೀತ-ಪ್ರಜಾಪ್ರಭುತ್ವ ಶಕ್ತಿಗಳು ಪ್ರತಿರೋಧ ತೀವ್ರಗೊಳಿಸುವಂತೆಯೂ ಕರೆ ನೀಡಿದೆ.

○




ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರೋಧಿಸಿ, ರೇಷನ್ ವ್ಯವಸ್ಥೆ ಬಲಪಡಿಸಲು ಆಗ್ರಹಿಸಿ ಜನವಾದಿ ಮಹಿಳಾ ಸಂಘಟನೆ ಬೆಂಗಳೂರು ಜಿಲ್ಲಾ ಸಮಿತಿಯಿಂದ ಪ್ರತಿಭಟನೆ. ಜನವರಿ18, 2011 ರಂದು ಮೈಸೂರು ಬ್ಯಾಂಕ್ ವೃತ್ತದಲ್ಲಿ ರಸ್ತೆತಡೆ ಸಹ ನಡೆಸಲಾಯಿತು.

# ನೇಪಾಳ ರಾಜಕೀಯ ಅತಂತ್ರ ಅಂತ್ಯ ?

ನೇಪಾಳದ ರಾಜಕೀಯ ಒಂದು ನಿರ್ಣಾಯಕ ತಿರುವಿಗೆ ಬಂದಿದೆ. ನೇಪಾಳದ ಒಳಗೂ ಹೊರಗೂ ಬಹಳ ಭರವಸೆ ಹುಟ್ಟಿಸಿದ್ದ ಪ್ರಜಾಪ್ರಭುತ್ವ ಕ್ರಾಂತಿಯ ಭವಿಷ್ಯದ ಬಗ್ಗೆ ಕೆಲವು ಆಶಾದಾಯಕ ಮತ್ತು ಕೆಲವು ಆತಂಕಕಾರಿ ಬೆಳವಣಿಗೆಗಳು ಆಗಿವೆ. ಕಳೆದ ಏಳು ತಿಂಗಳಿಂದ ತಾತ್ಕಾಲಿಕ ಸರ್ಕಾರ ಅಸ್ತಿತ್ವದಲ್ಲಿದ್ದು 16 ಬಾರಿ ಹೊಸ ಪ್ರಧಾನಿಯ ಆಯ್ಕೆಯ ಪ್ರಯತ್ನ ವಿಫಲವಾಗಿದೆ. ನೇಪಾಳ ಯುಎಂಎಲ್ ಕಮ್ಯುನಿಸ್ಟ್ ಪಕ್ಷ ತಟಸ್ಥವಾಗಿರದೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ವಿರುದ್ಧ ಮತ ಚಲಾಯಿಸುವಂತೆ ನಿರ್ಧರಿಸಿದ ಹಿನ್ನೆಲೆಯಲ್ಲಿ ನೇಪಾಳ ಕಾಂಗ್ರೆಸ್ ತನ್ನ ಅಭ್ಯರ್ಥಿಯನ್ನು ಹಿಂತೆಗೆದುಕೊಂಡಿದೆ. ಇದು ಪ್ರಧಾನಿ ಆಯ್ಕೆ ಮತ್ತು ಹೊಸ ಸರ್ಕಾರ ರಚನೆ ಸಾಧ್ಯ ಮಾಡಬಹುದು ಎಂಬ ಆಶಾಭಾವನೆಗೆ ಕಾರಣವಾಗಿದೆ.

ನೇಪಾಳದ ತಾತ್ಕಾಲಿಕ ಸರ್ಕಾರ ವಿಶ್ವಸಂಸ್ಥೆಯ ಶಾಂತಿಪಡೆಯ ಮುಂದುವರಿಕೆಗೆ ಮನವಿ ಮಾಡದೆ ಹೋದದ್ದರಿಂದ, ಜನವರಿ 15 ರಂದು ಶಾಂತಿಪಡೆಯ ಅವಧಿ ಮುಗಿದು ಅದು ಹಿಂತಿರುಗಲಿದೆ. ಮಾವೋವಾದಿ ಗೆರಿಲ್ಲಾ ಪಡೆ ಮತ್ತು ಅವರ ಅಸ್ತ್ರಗಳನ್ನು ಕ್ಯಾಂಪುಗಳಿಗೆ ಸೀಮಿತಗೊಳಿಸಿ, ಸೈನ್ಯದ ಕಾರ್ಯಾಚರಣೆಗೆ ಸಹ ಕಡಿವಾಣ ಹಾಕಿ ಶಾಂತಿಪಡೆ ನೇಪಾಳದಲ್ಲಿ ಶಾಂತಿ ನೆಲೆಸುವಲ್ಲಿ ಮಹತ್ವದ ಪಾತ್ರ ವಹಿಸಿತ್ತು. ಯಾವುದೇ ಬದಲಿ ವ್ಯವಸ್ಥೆ ಇಲ್ಲದೆ ಶಾಂತಿಪಡೆಯ ನಿರ್ಗಮನ ಪುನಃ ಹಿಂಸಾತ್ಮಕ ಘರ್ಷಣೆಗೆ ಎಡಕೊಡಬಹುದು. ಅಲ್ಲದೆ ಈ ವರ್ಷದ ಮೇ ಕೊನೆಯ ಗಡುವಿನ ಒಳಗೆ ಹೊಸ ಸಂವಿಧಾನ ಮತ್ತು ಅದರ ಆಧಾರದ ಮೇಲೆ ಹೊಸ ಸರ್ಕಾರದ ರಚನೆ ಸಾಧ್ಯವಾಗದೇ ಹೋಗಬಹುದು. ಈ ಬಿಕ್ಕಟ್ಟು ವ್ಯಾಪಕ ಹಿಂಸಾಚಾರ ಅಥವಾ ಮಿಲಿಟರಿ ಪ್ರತಿಕ್ರಾಂತಿ ಅಥವಾ ರಾಜಸತ್ತೆಯ ಪುನಸ್ಥಾಪನೆಗೂ ಹಾದಿ ಮಾಡಿಕೊಡಬಹುದು. ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳಿಗೆ ಹಿನ್ನಡೆ ಆಗಬಹುದು ಎಂಬ ಅರಿವು ನೇಪಾಳದ ಮೂರು ಪ್ರಮುಖ (ಮಾವೋವಾದಿ, ಕಮ್ಯುನಿಸ್ಟ್, ಕಾಂಗ್ರೆಸ್) ಪಕ್ಷಗಳಲ್ಲಿ ಮೂಡಲಾರಂಬಿಸಿದ್ದು, ಈಗಿನ ರಾಜಕೀಯ ಅತಂತ್ರ ಕೊನೆಗೊಳಿಸುವ ನಿರ್ಧಾರ ಕೈಗೊಳ್ಳಬಹುದು ಎಂಬ ಆಶಾಭಾವನೆಗೆ ಕಾರಣವಾಗಿದೆ.

○

### ಗಂಟು ಯಾರದು

ಭಾರತದ ಪುಣ್ಯವೋ ಭಾರತದ ಪುಣ್ಯ
ಕಾಳಪ್ಪ ಮಂದಿಗಳು ಆಗಿಹರು ಗಣ್ಯ
ಈ ಜನಕೆ ಎಲ್ಲೆಡೆಗೂ ರಕ್ಷಣೆಯೂ ಉಂಟು
ಇವರದ್ದೇ ಈ ದಿವಸ ಬೊಕ್ಕಸದ ಗಂಟು

■ ವಿಡಂಬಾರಿ

ಜನಶಕ್ತಿ
ಕನ್ನಡ ವಾರಪತ್ರಿಕೆ

## ಕುಸಿಯುತ್ತಿದೆ ಕಾರ್ಮಿಕರ ನಿಜ ವೇತನ

# ಫೆಬ್ರವರಿ 23 - ಪಾರ್ಲಿಮೆಂಟ್ ಚಲೋ

ಇಲ್ಲೊಂದು ಮಹತ್ವದ ಅಂಕಿ ಸಂಖ್ಯೆ ಮಾಹಿತಿ ಇದೆ. ಗಮನಿಸಿ. ಉತ್ಪನ್ನಗಳ ಒಟ್ಟು ಮೌಲ್ಯದಲ್ಲಿ ಅದನ್ನು ಉತ್ಪಾದಿಸುವ ಕಾರ್ಮಿಕರಿಗೆ ನೀಡಲಾಗುವ ವೇತನದ ಪಾಲು ಯಾವ ಯಾವ ಕಾಲಘಟ್ಟದಲ್ಲಿ ಎಷ್ಟೆಷ್ಟು ಇತ್ತು, ಅದೇ ರೀತಿ ಮಾಲೀಕ ವರ್ಗದ ಲಾಭದ ಪಾಲು ಯಾವ ಯಾವ ಕಾಲಘಟ್ಟದಲ್ಲಿ ಎಷ್ಟೆಷ್ಟು ಇತ್ತು ನೋಡಿ.


ಕಳೆದ 20 ವರ್ಷಗಳಲ್ಲಿ ದೇಶದಲ್ಲಿ ಜಾರಿಯಾದ ಜಾಗತೀಕರಣದ ಪರಿಣಾಮ, ಪ್ರಭಾವಗಳೇನು ಎಂಬುದಕ್ಕೂ ಇದು ಸಾಕ್ಷಿ.

**ಉತ್ಪನ್ನಗಳ ಒಟ್ಟು ಮೌಲ್ಯದಲ್ಲಿ**

| ವರ್ಷ | ಕಾರ್ಮಿಕರ ವೇತನದ ಪಾಲು | ಮಾಲೀಕರ ಲಾಭದ ಪಾಲು |
|---|---|---|
| 1991-92 | 20.5 | 14.5 |
| 2001-02 | 15.0 | |
| 2007-08 | 9.2 | 53.8 |

ಈ ಆಘಾತಕಾರಿ ಮಾಹಿತಿಯನ್ನು ಬೇರೆ ಯಾರೂ ಅಲ್ಲ. ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿಐಟಿಯು)ನ ಅಖಿಲ ಭಾರತ ಅಧ್ಯಕ್ಷರಾದ ಕಾಂ.ಎ.ಕೆ.ಪದ್ಮನಾಭನ್ ಕಾರ್ಮಿಕರಿಗೆ ತಿಳಿಸಿಧರು.

ಬೆಂಗಳೂರಿನಲ್ಲಿ ಜನವರಿ 17 ರಂದು ಸಂಜೆ ಸೆನೆಟ್‌ನಲ್ಲಿ ಕಾರ್ಮಿಕರ ಸಭೆಯಲ್ಲಿ ಪದ್ಮನಾಭನ್‌ರವರು ಇತ್ತೀಚೆಗೆ ನಾಸಿಕ್‌ನಲ್ಲಿ ನಡೆದ



ಬೆಂಗಳೂರು ಕಾರ್ಮಿಕರ ಸಭೆಯಲ್ಲಿ ಮಾತನಾಡುತ್ತಿರುವ ಪದ್ಮನಾಭನ್

ಸಿಐಟಿಯು ಜನರಲ್ ಕೌನ್ಸಿಲ್ ತೀರ್ಮಾನಗಳ ಕುರಿತು ಹಾಗೂ ದೆಹಲಿಯಲ್ಲಿ ನಡೆದ 43ನೇ ಭಾರತೀಯ ಕಾರ್ಮಿಕ ಸಮ್ಮೇಳನದ ಚರ್ಚೆಯ ಕುರಿತು ವರದಿ ಮಾಡುತ್ತಾ ಈ ಮೇಲಿನ ವಿವರ ನೀಡಿದರು.

ದಿನೇ ದಿನೇ ಕುಸಿಯುತ್ತಿರುವ ಕಾರ್ಮಿಕರ ನಿಜ ವೇತನ, ಅಗತ್ಯ ವಸ್ತುಗಳ ತೀವ್ರ ಬೆಲೆ ಏರಿಕೆ ಕಂಪನಿಗಳು, ಬಂಡವಾಳಗಾರರ ಪರವಾಗಿ ಕಾರ್ಮಿಕ ಕಾನೂನುಗಳಲ್ಲಿ ಬದಲಾವಣೆ ತರಬೇಕೆಂಬ ಒತ್ತಡ ಮತ್ತು ಅದಕ್ಕೆ ಸ್ಪಂದಿಸುವಂತಹ ಯುಪಿಎ ಸರ್ಕಾರದ ಧೋರಣೆ ಖಂಡಿಸಿ ಹೋರಾಟಗಳನ್ನು ತೀವ್ರಗೊಳಿಸುವ ಸಿಐಟಿಯು ತೀರ್ಮಾನವನ್ನು ಪದ್ಮನಾಭನ್ ವಿವರಿಸಿದರು.

**ಫೆಬ್ರವರಿ 24 ಕಾರ್ಮಿಕರ ಪಾರ್ಲಿಮೆಂಟ್ ಚಲೋ**

ಕೇಂದ್ರ ಯುಪಿಎ ಸರ್ಕಾರ ಕಾರ್ಮಿಕ ಧೋರಣೆಗಳ ವಿರುದ್ಧ ಕಾರ್ಮಿಕ ಅಂತೃಪ್ತಿ ಹೆಚ್ಚುತ್ತಿದೆ. ಕಾಂಗ್ರೆಸ್‌ಗೆ ಸೇರ್ಪಡೆ ಹೊಂದಿದ ಐಎನ್‌ಟಿಯುಸಿ ಕೂಡ ವಿವಿಧ ಕಾರ್ಮಿಕ ಸಂಘಟನೆಗಳೊಂದಿಗೆ ಚಳುವಳಿಯಲ್ಲಿ ಪಾಲ್ಗೊಳ್ಳಲು ನಿರ್ಧರಿಸಿದೆ.

ಸಿಐಟಿಯು ಸೇರಿದಂತೆ ವಿವಿಧ ಕೇಂದ್ರ ಕಾರ್ಮಿಕ ಸಂಘಟನೆಗಳು ಫೆಬ್ರವರಿ 23 ರಂದು ಕನಿಷ್ಠ 10 ಲಕ್ಷಕ್ಕೆ ಕಡಿಮೆ ಇಲ್ಲದ ಬೃಹತ್ ಪಾರ್ಲಿಮೆಂಟ್ ಚಲೋ ನಡೆಸಲು ತೀರ್ಮಾನಿಸಿವೆ ಎಂದು ಪದ್ಮನಾಭನ್ ವಿವರಿಸಿದರು.

ಸಿಐಟಿಯು ಬೆಂಗಳೂರು ಜಿಲ್ಲಾ ಸಮಿತಿ ಸಂಘಟಿಸಿದ್ದ ಸಭೆಯ ಅಧ್ಯಕ್ಷತೆಯನ್ನು ಸಿಐಟಿಯು ಜಿಲ್ಲಾ ಅಧ್ಯಕ್ಷ ಹೆಚ್.ಎನ್.ಗೋಪಾಲಗೌಡ ವಹಿಸಿದ್ದರು. ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ಪ್ರಸನ್ನಕುಮಾರ್, ಕೆ.ಶಂಕರ್, ಮೀನಾಕ್ಷಿ ಸುಂದರಂ ಮುಂತಾದವರು ಭಾಗವಹಿಸಿದ್ದರು. ಕೆ.ಎನ್.ಉಮೇಶ್ ಪದ್ಮನಾಭನ್ ಅವರ ಮಾತುಗಳನ್ನು ಅನುವಾದಿಸಿದರು. ○

# ಯುಪಿಎ ದರ್ಬಾರ್......

ಪುಟ 13 ರಿಂದ

ಹಳೆಯ ಸಂಪರ್ಕ ಮಂತ್ರಿ ರಾಜೀನಾಮೆ ಸಲ್ಲಿಸಿದ ಎಷ್ಟೋ ಸಮಯದ ನಂತರ ಹೊಸ ಸಂಪರ್ಕ ಮಂತ್ರಿಗಳು ಸಿಎಜಿ ಲೆಕ್ಕಾಚಾರವೇ ತಪ್ಪು. ಸರಕಾರಕ್ಕೇನೂ ನಷ್ಟವಾಗಿಲ್ಲ, ಸಣ್ಣಪುಟ್ಟ ಅಕ್ರಮಗಳಾಗಿವೆಯಷ್ಟೇ ಎಂದರು. ಕಾಂಗ್ರೆಸ್ ವಕ್ತಾರರು ಈ ದಾಳಿಯನ್ನು ಬೆಂಬಲಿಸಿದರು. ಏಕೆಂದರೆ ಇದು ಪ್ರಧಾನ ಮಂತ್ರಿಗಳ ಅನುಮತಿ ಪಡೆದೇ ಸಂಪರ್ಕ ಮಂತ್ರಿಗಳು ಕೊಟ್ಟಿರುವ ಹೇಳಿಕೆಯಂತೆ. ನಂತರ ಇನ್ನೊಬ್ಬ ವಕ್ತಾರರು ಸಿಎಜಿ ಮೇಲಿನ ಟೀಕೆಯನ್ನು ತೇಲಿಸಿ ಬಿಡಲು ಪ್ರಯತ್ನಿಸಿದರು. ಸಿಎಜಿ ತನ್ನ ಲೆಕ್ಕಾಚಾರ ಕೊಟ್ಟಿದೆ, ಸಂಪರ್ಕ ಮಂತ್ರಿಗಳು ಸರಕಾರದ ಅಭಿಪ್ರಾಯವನ್ನು ಹೇಳಿದ್ದಾರೆ, ಸಾರ್ವಜನಿಕ ಲೆಕ್ಕಪತ್ರ ಸಮಿತಿ ಇದನ್ನು ಪರಿಶೀಲಿಸುತ್ತಿದೆ, ಸಿಬಿಐ ಕೂಡ ಪರಿಶೀಲಿಸುತ್ತಿದೆ ಎಂದು ಹೇಳಿ ಕೈತೊಳೆದುಕೊಳ್ಳಲು ಪ್ರಯತ್ನಿಸಿದರು.

ಮರುದಿನ ಮತ್ತೆ ದಾಳಿ. ಈ ಬಾರಿ ಇನ್ನೊಬ್ಬ ಕಾಂಗ್ರೆಸ್ ವಕ್ತಾರೆಯದ್ದು. ಸಾರ್ವಜನಿಕ ಲೆಕ್ಕಪತ್ರ ಸಮಿತಿ ಸಿಎಜಿ ವರದಿಯನ್ನು ಪರಿಶೀಲಿಸುತ್ತಿರುವಾಗ ಸಂಸತ್ ಸದಸ್ಯರು ಆ ಬಗ್ಗೆ ಟೀಕೆ ಮಾಡುವುದು ಸೂಕ್ತವಲ್ಲ, ಅದು ಸದನದ ನಿಂದನೆಯೆಂದೂ ಪರಿಗಣಿಸಬಹುದು ಎಂದು ಸಿಎಜಿ ತನ್ನ ಲೆಕ್ಕಾಚಾರವನ್ನು ಸಮರ್ಥಿಸಿಕೊಳ್ಳುತ್ತಾ ಹೇಳಿತ್ತು.

ಕಾಂಗ್ರೆಸ್ ಪಕ್ಷ ಈಗೇಕೆ ಇಲ್ಲಿ ಹಗರಣವೇ ಇಲ್ಲ ಎಂದು ತೋರಿಸಲು ಹೆಣಗುತ್ತಿದೆ ಎಂಬ ಪ್ರಶ್ನೆ ಸಹಜವೇ.

ಇಲ್ಲಿರುವ ಪ್ರಮುಖ ಪ್ರಶ್ನೆ ಲೆಕ್ಕಾಚಾರದ್ದಲ್ಲ, ಯಾವ ಕಾರ್ಪೋರೇಟ್ ಗುಂಪಿಗೆ ಎಷ್ಟು ಅನುಕೂಲ ಕಲ್ಪಿಸಲಾಯಿತು ಎಂಬುದೂ ಅಲ್ಲ, ಬದಲಾಗಿ, ಒಂದು ವಿರಳವಾದ ರಾಷ್ಟ್ರೀಯ ಸಂಪನ್ಮೂಲವನ್ನು ಅದರ ನಿಜವಾದ ಬೆಲೆಗಿಂತ ಎಷ್ಟೋ ಕಡಿಮೆ ಬೆಲೆಗೆ ಕೊಟ್ಟು ಬಿಡಲಾಗಿದೆ ಎಂಬುದು. ಈ ಸರಳ ಸಂಗತಿಯನ್ನು ಯಾವುದೇ ಲೆಕ್ಕಾಚಾರದ ಕಸರತ್ತು ಮರೆಮಾಚಲಾರದು. ಸಂಪರ್ಕ ಮಂತ್ರಿ ಇದನ್ನು ಏಕೆ ಸ್ವೀಕರಿಸುತ್ತಿಲ್ಲ ಎಂಬುದಕ್ಕೂ ಕಾರಣ ಕಾಣುವುದು ಸುಲಭ. ತರಂಗಾಂತರದಿಂದ ಹಿಡಿದು ಗಣಿ ಸಂಪತ್ತಿನ ವರೆಗೆ ಎಲ್ಲ ರಾಷ್ಟ್ರೀಯ ಸಂಪನ್ಮೂಲಗಳನ್ನು ಬಂಡವಾಳಶಾಹಿ ವರ್ಗಕ್ಕೆ ಉಡುಗೊರೆಯಾಗಿ ಕೊಡ ಮಾಡುವುದು ನವ-ಉದಾರವಾದದ ಮುಖ್ಯ ಲಕ್ಷಣ. ಹೊಸ ಸಂಪರ್ಕ ಮಂತ್ರಿಗಳು ಅದನ್ನು ಮುಂದುವರೆಸ ಬಯಸುತ್ತಾರೆ ಎಂದು ಒಬ್ಬ ತಜ್ಞರು ವಿಶ್ಲೇಷಿಸಿದ್ದಾರೆ. ●

# ಎಸ್‌ಎಫ್‌ಐ ವಿಧಾನಸೌಧ ಚಲೋ

ಪುಟ 11 ರಿಂದ

ಕಂಡುಕೊಳ್ಳಬೇಕಾದರೆ ಮುಂಬರುವ ಬಜೆಟ್ ಅಧಿವೇಷನದಲ್ಲಿ ರಾಜ್ಯಸರ್ಕಾರ 1956 ರ ಕೋಥಾರಿ ಆಯೋಗದ ಶಿಫಾರಸ್ಸಿನಂತೆ ಬಜೆಟ್‌ನ ಶೇ.30 ರಷ್ಟನ್ನು ಶಿಕ್ಷಣಕ್ಕೆ ಮೀಸಲಿಡುವ ಮೂಲಕ ಶಿಕ್ಷಣ ಕ್ಷೇತ್ರವನ್ನು ಆದ್ಯತೆಯನ್ನಾಗಿ ಪರಿಗಣಿಸಿದರೆ ಮಾತ್ರ ಇಂದು ಎದುರಿಸುತ್ತಿರುವ ಜ್ವಲಂತ ಶೈಕ್ಷಣಿಕ ಸಮಸ್ಯೆಗಳಿಗೆ ಪರಿಹಾರಗನ್ನು ಕಂಡುಕೋಳ್ಳಲು ಸಾಧ್ಯ.

**ಚಳುವಳಿಯೇ ಉತ್ತರ :**

ರಾಜ್ಯಸರ್ಕಾರ ಹಣ ಮಾಡುವ ಭ್ರಷ್ಟಾಚಾರದ ದಂಧೆಯಲ್ಲಿ ತೊಡಗಿ ಶಿಕ್ಷಣ ಕ್ಷೇತ್ರವನ್ನು ಸಂಪೂರ್ಣವಾಗಿ ಕಡೆಗಣಿಸುತ್ತಿದೆ. ಶಿಕ್ಷಣದ ಖಾಸಗೀಕರಣ, ವ್ಯಾಪಾರೀಕರಣ ಮತ್ತು ಕೋಮುವಾದೀಕರಣವನ್ನು ಮಾಡಲು ಹೊರಟಿರುವ ಸಂದರ್ಭದಲ್ಲಿ ಶಿಕ್ಷಣ ಪ್ರೇಮಿಗಳಾದ ನಾವೆಲ್ಲರೂ ಶಿಕ್ಷಣ ವಿರೋಧಿ ಈ ಸರ್ಕಾರದ ವಿರುದ್ಧ ಎಚ್ಚೆತ್ತು ಪ್ರತಿಭಟಿಸಬೇಕಿದೆ. 10 ಫೆಬ್ರುವರಿ 2011 ರಂದು ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ಕರ್ನಾಟಕ ರಾಜ್ಯಸಮಿತಿ ಬೆಂಗಳೂರಿನಲ್ಲಿ "ವಿಧಾನಸೌಧ ಚಲೋ" ಕಾರ್ಯಕ್ರಮ ಹಮ್ಮಿಕೊಂಡಿದ್ದು ವಿದ್ಯಾರ್ಥಿಗಳು, ಶಿಕ್ಷಣ ಪ್ರೇಮಿಗಳು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಬೇಕಿದೆ.

**ಬೇಡಿಕೆಗಳು**

- ರಾಜ್ಯದ ಬಜೆಟ್‌ನಲ್ಲಿ ಶೇ.30 ರಷ್ಟು ಹಣವನ್ನು ಶಿಕ್ಷಣಕ್ಕೆ ಮೀಸಲಿಡಬೇಕು.
- ಏರಿಸಿರುವ ಎಲ್ಲಾ ಹಂತದ ಶುಲ್ಕ ಇಳಿಸಬೇಕು. ಯಾವುದೇ ಕಾರಣಕ್ಕೂ ಶುಲ್ಕ ಏರಿಸುವುದಿಲ್ಲವೆಂದು ಘೋಷಿಸಬೇಕು.
- ಹೆಚ್ಚುವರಿಯಾಗಿ ವಸೂಲಿ ಮಾಡಿರುವ ಬಸ್‌ಪಾಸ್ ಹಣವನ್ನು ತಕ್ಷಣ ವಾಪಸ್ ನೀಡಬೇಕು.
- ಬಾಕಿ ಇರುವ ವಿದ್ಯಾರ್ಥಿ ವೇತನ ಬಿಡುಗಡೆಗೊಳಿಸಬೇಕು. ವಿದ್ಯಾರ್ಥಿ ವೇತನದ ಪ್ರಮಾಣ ಹೆಚ್ಚಿಸಬೇಕು.
- ಹಾಸ್ಟೆಲ್-ವಿದ್ಯಾರ್ಥಿಗಳ ಆಹಾರಭತ್ಯೆಯನ್ನು ಕೇರಳ ಮಾದರಿಯಲ್ಲಿ ತಿಂಗಳಿಗೆ 1500 ರೂ.ಗಳಿಗೆ ಹೆಚ್ಚಿಸಬೇಕು. ಹಾಸ್ಟೆಲ್‌ಗಳಿಗೆ ಮೂಲಸೌಲಭ್ಯಗಳಾದ, ಕಟ್ಟಡ, ಗ್ರಂಥಾಲಯ, ಕುಡಿಯುವ ನೀರು ಇತ್ಯಾದಿಗಳನ್ನು ಒದಗಿಸಬೇಕು. ಅಗತ್ಯವಿರುವಷ್ಟು ಹಾಸ್ಟೆಲ್‌ಗಳನ್ನು ಸ್ಥಾಪಿಸಬೇಕು.
- ಶಾಲಾ-ಕಾಲೇಜ್‌ಗಳಿಗೆ ಅಗತ್ಯ ಸೌಲಭ್ಯ ಒದಗಿಸಬೇಕು. ಶಿಕ್ಷಕ-ಉಪನ್ಯಾಸಕ, ಬೋಧಕೇತರ ಸಿಬ್ಬಂದಿಗಳನ್ನು ಖಾಯಂ ನೇಮಕ ಮಾಡಿಕೊಳ್ಳಬೇಕು.
- ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿ ಸಂಘದ ಚುನಾವಣೆ ನಡೆಸಬೇಕು.
- ಸುಪ್ರಿಂ ಕೋರ್ಟ್‌ನ ನಿರ್ದೇಶನದಂತೆ 'ಶಾಲಾ-ಕಾಲೇಜ್‌ಗಳಲ್ಲಿ ಲೈಂಗಿಕ ಕಿರುಕುಳ ವಿರೋಧಿ ಸಮಿತಿ' ರಚಿಸಬೇಕು.
- ಶಿಕ್ಷಣದ ಖಾಸಗೀಕರಣ -ವ್ಯಾಪಾರೀಕರಣ -ಕೋಮುವಾದೀಕರಣ ನೀತಿಗಳನ್ನು ಕೈಬಿಡಬೇಕು.
- ಅಗತ್ಯವಿರುವ ಕಡೆಗಳಲ್ಲೆಲ್ಲ ಸರ್ಕಾರಿ ಶಾಲೆ-ಕಾಲೇಜುಗಳನ್ನು ಸ್ಥಾಪಿಸಬೇಕು.
- ವಿ.ವಿ.ಗಳ ಭ್ರಷ್ಟಾಚಾರವನ್ನು ನಿಸ್ಪಕ್ಷಪಾತವಾಗಿ ತನಿಖೆಗೊಳಪಡಿಸಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಬೇಕು, ಸರ್ಕಾರಿ ವಿ.ವಿ.ಗಳನ್ನು ಬಲಪಸಬೇಕು.
- ಎಲ್ಲಾ ವೃತ್ತಿ ಶಿಕ್ಷಣ ಶುಲ್ಕಗಳನ್ನು ಕಡಿತಗೊಳಿಸಿ, ಖಾಸಗೀ ಶಿಕ್ಷಣ ಸಂಸ್ಥೆಗಳ ಮೇಲೆ ಸಾಮಾಜಿಕ ನಿಯಂತ್ರಣ ಹೇರಬೇಕು.

**ಇಂದಿನ ಶಿಕ್ಷಣ**

ಕರುನಾಡ ವಿದ್ಯುತ್ತಿನಂತೆಯೇ ಇಂದೆ
ಈ ನಮ್ಮ ಶಿಕ್ಷಣವು ನಾ ತಿಳಿದು ಕೊಂಡೆ
ಒಟ್ಟಾರೆ ಮೂಡಿದರೆ ಒಳ ಹೊರಗೆ ಬೆಳಕು
ಆ ಜನಕೆ ಬದುಕು ತೊಡಕು ಹೀಗಾಗಿ ಅಳುಕು

■ ವಿಡಂಬಾರಿ

Postal Reg. No.
JANASHAKTHI KANNADA VARA PATRIKE JAN. 30, 2011 Price : Rs. 5/- RNI No. KARKAN /2006/17926 Posted on every Satuarday
Posted at MBC Bangalore GPO

# ಎಂಡೋಸಲ್ಫಾನ್ ಎಂಬ ಮಾರಕ ಕ್ರಿಮಿನಾಶಕ




ಎಂಡೋಸಲ್ಫಾನ್ ಎಂಬ ಅಪಾಯಕಾರಿ ರಾಸಾಯನಿಕ ವಸ್ತುವನ್ನು ಕ್ರಿಮಿನಾಶಕವಾಗಿ ಗೋಡಂಬಿ, ರಬ್ಬರ್, ಏಲಕ್ಕಿ, ಟೀ ತೋಟಗಳು ಮತ್ತು ಇನ್ನಿತರ ಹಲವಾರು ಬೆಳೆಗಳಲ್ಲಿ ಬಳಸಲಾಗುತ್ತಿದೆ. ಎಂಡೋಸಲ್ಫಾನ್‌ನ್ನು ಕೇರಳದ ಕಾಸರಗೋಡು ಜಿಲ್ಲೆಯಲ್ಲಿ ಗೋಡಂಬಿ ಬೆಳೆಯಲ್ಲಿ ಕ್ರಿಮಿನಾಶಕವಾಗಿ 1976-78 ರಲ್ಲಿ ಬೃಹತ್ ಪ್ರಮಾಣದಲ್ಲಿ ಹೆಲಿಕಾಪ್ಟರುಗಳ ಮೂಲಕ ಸಿಂಪಡಿಸಿ ಬಳಸಲಾಗಿದೆ. ಇದರ ದುಷ್ಪರಿಣಾಮಗಳು ಹಲವಾರು ವರ್ಷಗಳ ನಂತರ ಬೆಳಕಿಗೆ ಬಂದವು. ಈ ರಾಸಾಯನಿಕ ಸಿಂಪಡಿಸಿದ್ದರಿಂದ ನದಿಗಳು ಮಲಿನಗೊಂಡವು, ತೊರೆ ಮತ್ತು ಕುಡಿಯುವ ನೀರು ವಿಷಕಾರಿಯಾದವು. ಆ ಜಿಲ್ಲೆಯ ಸುಮಾರು 11 ಹಳ್ಳಿಗಳ ಸಾವಿರಾರು ಜನತೆಯ ಆರೋಗ್ಯದ ಮೇಲೆ ಅಪಾಯಕಾರಿ ಪರಿಣಾಮಗಳನ್ನು ಉಂಟು ಮಾಡಿದವು. ಹಲವಾರು ಮಕ್ಕಳು ಅಂಗವಿಕಲರಾಗಿ



ಜನಿಸಿದರು, ಹಲವರಿಗೆ ನರದೌರ್ಬಲ್ಯ ಕಾಣಿಸಿಕೊಂಡಿತು. ಸ್ಥಳೀಯ ಜನರಲ್ಲಿ ಕ್ಯಾನ್ಸರ್, ಮೂರ್ಛೆ ರೋಗ, ಗಂಡಸುತನ ಕಳೆದುಕೊಳ್ಳುವುದು ಮತ್ತು ಹಾರ್ಮೋನುಗಳ ಕೊರತೆ, ಇತ್ಯಾದಿಗಳು ವ್ಯಾಪಕವಾಗಿ ಕಂಡು ಬಂದವು. ಹಲವರು ಶಾಶ್ವತ ಅಂಗವಿಕಲ ರಾದರೆ, 9000 ಜನ ಇನ್ನೂ ನರಳುತ್ತಿದ್ದು, ಸುಮಾರು 400 ಕ್ಕೂ ಹೆಚ್ಚು ಜನ ಇದರಿಂದ ಸಾವಿಗೀಡಾಗಿ ದ್ದಾರೆ. ನಮ್ಮ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಇಂತಹ ಪ್ರಕರಣಗಳು ವರದಿಯಾಗಿವೆ.

**ಪರಿಸರಕ್ಕೆ ವಿಷಸೇರಿಸುವ ಕ್ರಿಮಿನಾಶಕ :**

ಎಂಡೋಸಲ್ಫಾನ್ ಒಂದು ಆರ್ಗ್ಯಾನೋ ಕ್ಲೋರಿನ್ ಎಂಬ ರಾಸಾಯನಿಕ ಸಂಯುಕ್ತದಿಂದ ತಯಾರಿಸಿದ ಕ್ರಿಮಿನಾಶಕ. ಎಂಡೋಸಲ್ಫಾನ್‌ನ್ನು ಸಿಂಪಡಿಸಿದಾಗ ವಾತಾವರಣಕ್ಕೆ ಸೇರ್ಪಡೆ ಯಾಗುವ ರಾಸಾಯನಿಕವು ಬೆಳೆಗಳು, ವಾಯುಸೇವನೆ, ನೀರು, ಇತ್ಯಾದಿಗಳ ಮೂಲಕ ಮನುಷ್ಯ ಮತ್ತು ಇನ್ನಿತರ ಜೀವಿಗಳ ದೇಹವನ್ನು ಪ್ರವೇಶಿಸಿ ಧಾಳಿ ಮಾಡುತ್ತದೆ. ಇದು ಹುಟ್ಟುವ ಮಕ್ಕಳಲ್ಲಿ ಚರ್ಮರೋಗ, ನಾಲಿಗೆ ಹಿಡಿಯುವುದು, ಕಣ್ಣು ಕುರುಡಾಗುವುದು, ಹೆಚ್ಚಿನ ಕೈಬೆರಳು ಮತ್ತು ಕಾಲ್ಬೆರಳು ಮೂಡುವುದು, ತಲೆ ಅತಿ ದಪ್ಪಗಾಗುವುದು, ಮಾನಸಿಕ ರೋಗಗಳು, ಉಸಿರಾಟದ ತೊಂದರೆ, ನೆನಪಿನ ಶಕ್ತಿ ಇಲ್ಲದಿರುವುದು, ಲಕ್ವ ಹೊಡೆಯುವುದು, ಮಕ್ಕಳಾಗದಿರುವುದು, ಗರ್ಭಪಾತವಾಗುವುದು, ಇತ್ಯಾದಿಗಳು. ಇದು ಮನುಷ್ಯನ ಆರೋಗ್ಯದ ಮೇಲಷ್ಟೆ ಅಲ್ಲ, ಸುತ್ತಲಿನ ಪರಿಸರ, ಜೀವವೈವಿಧ್ಯತೆ, ಜೈವಿಕ ಸಮತೋಲನ ಗಳ ಮೇಲೂ ಧಾಳಿ ಮಾಡುತ್ತದೆ.

**ಭಾರತ ಸರ್ಕಾರ ಕ್ರಿಮಿನಾಶಕ ಕಂಪನಿಗಳಿಗೆ ಮಣಿದಿದೆಯೇ?**

ಇತ್ತೀಚಿಗೆ ಜಿನೋವಾದ ಸ್ಟಾಕ್‌ಹೋಮ್ ನಲ್ಲಿ ಜರುಗಿದ ಸಭೆಯಲ್ಲಿ ಎಂಡೋಸಲ್ಫಾನ್ ಸೇರಿದಂತೆ ಇನ್ನಿತರೆ ಡಜನ್‌ಗಟ್ಟಲೆ ವಿಷಕಾರಕ ಕ್ರಿಮಿನಾಶಕಗಳನ್ನು ನಿಷೇಧಿಸಬೇಕು ಎಂಬ ಪ್ರಸ್ತಾವವನ್ನು ಭಾರತ ಸರ್ಕಾರ ವಿರೋಧಿಸಿದ್ದು



ನಾಚಿಕೆಗೇಡಿನ ವಿಷಯ. ಈ ಸಭೆಯಲ್ಲಿ ಹಾಜರಿದ್ದ 29 ದೇಶಗಳ ಪೈಕಿ ಭಾರತವೊಂದೇ ಈ ವಿಷಕಾರಿ ಕ್ರಿಮಿನಾಶಕದ ಬಳಕೆಯ ಪರವಾಗಿ ಮಾತನಾಡಿದ್ದು. ವಿಶ್ವದಲ್ಲಿ ಅಮೇರಿಕಾ ಮತ್ತು ಯೂರೋಪಿಯನ್ ಒಕ್ಕೂಟದ ರಾಷ್ಟ್ರಗಳು ಸೇರಿದಂತೆ ಸುಮಾರು 65 ದೇಶಗಳು ಇದನ್ನು ನಿಷೇಧಿಸಿವೆ. ಕೇರಳದಲ್ಲಿ ಎಡರಂಗ ಸರ್ಕಾರ ಇದರ ಬಳಕೆಯನ್ನು ಈಗಾಗಲೇ ನಿಷೇಧಿಸಿದ್ದು, ಕೇಂದ್ರ ಸರ್ಕಾರವೂ ದೇಶದಾದ್ಯಂತ ನಿಷೇಧಿಸಬೇಕೆಂದು ಶಿಫಾರಸು ಮಾಡಿದೆ. 2001ರಲ್ಲಿ ಮೊದಲಿಗೆ ಭಾರತ ಸರ್ಕಾರ ಈ ಕ್ರಿಮಿನಾಶಕವನ್ನು ನಿಷೇಧಿಸಿದ್ದರೂ ಕೆಲವೇ ದಿನಗಳಲ್ಲಿ ಮತ್ತೆ ಈ ನಿಷೇಧವನ್ನು ಹಿಂತೆಗೆದುಕೊಂಡಿತು. ಕ್ರಿಮಿನಾಶಕ ತಯಾರಕ ಕಂಪನಿಗಳಿಗೆ ಮಣಿದಿರುವಂತೆ ಕಾಣುವ ಕೇಂದ್ರ ಸರ್ಕಾರವು ಸಮಿತಿಗಳ ಮೇಲೆ ಸಮಿತಿಗಳನ್ನು ರಚಿಸುತ್ತಿದೆಯೇ ಹೊರತು ಇದುವರೆಗೂ ಎಂಡೋಸಲ್ಫಾನ್ ನಿಷೇಧಕ್ಕೆ ಕ್ರಮ ಕೈಗೊಂಡಿಲ್ಲ. ಹಲವಾರು ಜನಪರ ಸಮಿತಿಗಳು ಎಂಡೋಸಲ್ಫಾನ್ ಕ್ರಿಮಿನಾಶಕದಿಂದ ಉಂಟಾಗುವ ಅಪಾಯಗಳ ಮೇಲೆ ವರದಿ ನೀಡಿವೆಯಾದರೂ, ಸರ್ಕಾರ ರಚಿಸಿರುವ ಸಮಿತಿಗಳಿಗೆ ಇವೇನೂ ಕಂಡುಬಂದಿಲ್ಲದಿರುವುದು ಆಶ್ಚರ್ಯಕರ!

**ಭಾರತದಲ್ಲಿ ವಿಷಕಾರಿ ಕ್ರಿಮಿನಾಶಕ ತಯಾರಕರು**

ಈ ವಿಷಕಾರಿ ಕ್ರಿಮಿನಾಶಕವನ್ನು ಹಲವು ಬಹುರಾಷ್ಟ್ರೀಯ ಕಂಪನಿಗಳು ವಿಶೇಷವಾಗಿ ಬೇಯರ್ ಮತ್ತು ಮಾನ್ಸಾಂಟೋ ಕಂಪನಿಗಳು ದೊಡ್ಡ ಪ್ರಮಾಣದಲ್ಲಿ ತಯಾರಿಸುತ್ತಿದ್ದು, ಭಾರತದಲ್ಲಿ ದೊಡ್ಡ ಮಾರುಕಟ್ಟೆ ಹೊಂದಿವೆ. ಭಾರತದಲ್ಲಿ ಸಾರ್ವಜನಿಕ ಉದ್ದಿಮೆಯಾದ ಹಿಂದೂಸ್ತಾನ್ ಕ್ರಿಮಿನಾಶಕ ಲಿಮಿಟೆಡ್, ಖಾಸಗಿ ಕಂಪನಿಗಳಾದ ಇಐಡಿ ಪ್ಯಾರೀಸ್ ಲಿ., ಎಕ್ಸೆಲ್ ಇಂಡಸ್ಟ್ರೀಸ್ ಲಿ., ಮತ್ತು ಕೋರಮಂಡಲ್ ಫರ್ಟಿಲೈಸರ್ ಲಿ. ಕಂಪನಿಗಳು ಈ ಕ್ರಿಮಿನಾಶಕವನ್ನು ಉತ್ಪಾದಿಸುತ್ತಿವೆ. ಭಾರತವೇ ವಿಶ್ವದಲ್ಲಿ ಅತಿಹೆಚ್ಚು ಎಂಡೋಸಲ್ಫಾನ್ ಬಳಸುವ ದೇಶವೆನಿಸಿದೆ.

ಕೇಂದ್ರ ಸರ್ಕಾರವು ಕ್ರಿಮಿನಾಶಕ ಮಸೂದೆಯನ್ನು ಜಾರಿಗೆ ತರುತ್ತಿದ್ದು, ಇದರಲ್ಲಿ ಇಂತಹ ಮಾರಕ ಕ್ರಿಮಿನಾಶಕಗಳನ್ನು ಅಪಾಯಕಾರಿ ಪಟ್ಟಿಗೆ ಸೇರಿಸುವ ಮತ್ತು ಸಾವು ನೋವಿನ ನಡುವೆ ಬದುಕುತ್ತಿರುವ ಸಂತ್ರಸ್ತರಿಗೆ ಸರ್ಕಾರ ತಕ್ಷಣವೇ ಪರಿಹಾರ ಒದಗಿಸುವ ತಿದ್ದುಪಡಿಯನ್ನು ಈ ಮಸೂದೆಯಲ್ಲಿ ಸೇರಿಸಬೇಕಿದೆ.

# ಧಾರವಾಡದಲ್ಲಿ ಯಶಸ್ವಿ ರಂಗ ಶಿಬಿರ

ಜಗದಲ್ಲಿ ಅಂತಿಮವಾಗಿ ಶಾಂತಿಯೇ ನೆಲೆಗೊಳ್ಳುವುದು, ಜಗದಲ್ಲಿ ಇಂದು ಹಿಂಸೆ ತಾಂಡವವಾಡುತ್ತಿದೆ. ಬಂಡವಾಳಶಾಹಿ ವ್ಯವಸ್ಥೆ ಹಾಗೂ ಸಾಮ್ರಾಜ್ಯಶಾಹಿ ಶಕ್ತಿಗಳು ಜೊತೆ ಜೊತೆಯಾಗಿ ಇಂದು ರಾಜಕಾರಣವನ್ನು ಮಾರುಕಟ್ಟೆಯನ್ನಾಗಿ ಪರಿವರ್ತಿಸಿವೆ. ಹೀಗಾಗಿ ಸಾಮಾನ್ಯ ಮನುಷ್ಯನ ಬದುಕಿನ ಮೇಲೆ ಅಗಾದ ಪರಿಣಾಮಗಳು ಭಯ, ತಲ್ಲಣ, ಆತಂಕಗಳು ಸೃಷ್ಟಿಯಾಗಿ ಜೀವಭಯದಲ್ಲಿ ಮನುಷ್ಯ ಇಂದು ವ್ಯಕ್ತಿತ್ವವನ್ನು ಹರಾಜಿಗಿಡುವ ಸಂದರ್ಭದಲ್ಲಿ ನಮ್ಮ ಚರಿತ್ರೆಯ ವಸ್ತುವಿಷಯಗಳು ಮತ್ತೆ ನಮಗೆ ಜೀವ ಸೆಲೆಯಾಗಬೇಕು. ಹಿಂಸೆಗೆ ಪ್ರತಿಯಾಗಿ ಅಹಿಂಸೆ ಮಂತ್ರವಾಗಬೇಕು ಎಂದು ಖ್ಯಾತ ಜಾನಪದ ತಜ್ಞ ಶ್ರೀಶೈಲ ಹುದ್ದಾರ ಅಭಿಪ್ರಾಯಪಟ್ಟರು. ಸಮುದಾಯ ಹುಬ್ಬಳ್ಳಿ, ಧಾರವಾಡ ಘಟಕದ ಆಶ್ರಯದಲ್ಲಿ ಒಂದು ತಿಂಗಳ ರಂಗಶಿಬಿರ ನಡೆಸಿ ಶ್ರೀಶೈಲ ಹುದ್ದಾರ ರಚಿಸಿದ ಬುದ್ಧಪ್ರಭುದ್ಧ ನಾಟಕವನ್ನು ವಾಸುದೇವ ಗಂಗೇರ ಅವರ ನಿರ್ದೇಶನದ ಪ್ರದರ್ಶನವು ಸೃಜನಾ ರಂಗಮಂದಿರದಲ್ಲಿ ಪ್ರದರ್ಶನ ಗೊಳ್ಳುವುದರೊಂದಿಗೆ ಸಮಾರೋಪಗೊಂಡಿತು. ಸಮಾರಂಭದ ಅತಿಥಿಯಾಗಿ ಮಾತನಾಡುತ್ತಾ ನಾವು ನಮ್ಮ ಕಲಾವಿದರು ಇಂದು ಬಹು ಸೂಕ್ಷ್ಮವಾಗಿ ವರ್ತಮಾನಕ್ಕೆ ಸ್ಪಂದಿಸಬೇಕು. ಭ್ರಷ್ಟ ವ್ಯವಸ್ಥೆ ಎಲ್ಲೆಡೆ ಹಬ್ಬಿರುವಾಗ ನಾವು ಪ್ರತಿರೋಧ ಒಡ್ಡುವ ಮೂಲಕ ಪ್ರತಿ ಶಕ್ತಿಯಾಗಿ ಬೆಳೆಯಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಡಾ.ಬಸವರಾಜ ಮಲಶೆಟ್ಟಿ ಮಾತನಾಡಿ ನಟನ ಸಾಮರ್ಥ್ಯ ಶಿಬಿರದ ಮೂಲಕ ಹೊರ ಬರುವಂತೆ ಮಾಡುವುದು ಇಂದಿನ ಅಗತ್ಯವಾಗಿದೆ. ನಟನಾ ಸಾಮರ್ಥ್ಯ ಆಧುನಿಕ ಪರಿಸರಕ್ಕೆ ಹೊಂದಿಕೊಳ್ಳಬೇಕೆಂದು ಅಭಿಪ್ರಾಯಪಟ್ಟರು. ಇದೇ ಸಂದರ್ಭದಲ್ಲಿ ಖ್ಯಾತ ನಿನಾಸಂ ನಿರ್ದೇಶಕರಾದ ವಾಸುದೇವ ಗಂಗೇರ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯ ಮೇಲೆ ಸಂಘಟನಾ ಕಾರ್ಯದರ್ಶಿ ವಿಲಾಸ ಶೇರ್ಖಾನ ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್.ಎಸ್.ಚಿಕ್ಕಮಠ ವಹಿಸಿದ್ದರು.

ಪ್ರಾಸ್ತಾವಿಕವಾಗಿ ಸಮುದಾಯ ಹುಬ್ಬಳ್ಳಿ, ಧಾರವಾಡ ಘಟಕದ ಅಧ್ಯಕ್ಷರಾದ ಬಿ.ಐ.ಈಳಿಗೇರ ಮಾತನಾಡಿ ಸ್ವಾಗತಿಸಿದರು. ಕೆ.ಎಚ್.ಪಾಟೀಲ ನಿರೂಪಣೆ ಮಾಡಿ ವಂದಿಸಿದರು.



JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12,18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH